# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 127 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05.03.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮೂನೆ 50, 53 ಹಾಗೂ ನಮೂನೆ 57 ರಲ್ಲಿ ಜಮೀನು ಮಂಜೂರು ಮಾಡವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮೂನೆ 50, 53 ಹಾಗೂ ನಮೂನೆ 57 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಈ ಕೆಳಗಿನಂತಿವೆ:-
<table>
<tr><th>ನಮೂನೆ</th><th>ಸ್ವೀಕೃತ ಅರ್ಜಿಗಳ ಸಂಖ್ಯೆ</th></tr>
<tr><td>ನಮೂನೆ-50</td><td>65087</td></tr>
<tr><td>ನಮೂನೆ-53</td><td>77178</td></tr>
<tr><td>ನಮೂನೆ-57</td><td>114266</td></tr>
<tr><td>ಒಟ್ಟು</td><td>2,56,531</td></tr>
</table>
ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
<tr><td>(ಆ)</td><td>ಈ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳನ್ನು ಪುರಸ್ಕರಿಸಿ ಎಷ್ಟು ಜನರಿಗೆ ಜಮೀನು ಮಂಜೂರು ಮಾಡಲಾಗಿದೆ; ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ? ತಿರಸ್ಕರಿಸಲು ಕಾರಣಗಳೇನು? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮೂನೆ-50, 53 ಹಾಗೂ 57 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸ್ವೀಕೃತವಾದ ಅರ್ಜಿಗಳ ಪೈಕಿ ಪುರಸ್ಕರಿಸಿ ಜಮೀನು ಮಂಜೂರು ಮಾಡಲಾದ ಹಾಗೂ ತಿರಸ್ಕರಿಸಲಾದ ಅರ್ಜಿಗಳ ವಿವರ ಈ ಕೆಳಗಿನಂತಿದೆ:-
<table>
<tr><th>ನಮೂನೆ</th><th>ಮಂಜೂರಿ</th><th>ತಿರಸ್ಕೃತ</th></tr>
<tr><td>ನಮೂನೆ-50</td><td>13970</td><td>51117</td></tr>
<tr><td>ನಮೂನೆ-53</td><td>14853</td><td>53317</td></tr>
<tr><td>ನಮೂನೆ-57</td><td>197</td><td>30188</td></tr>
<tr><td>ಒಟ್ಟು</td><td>29020</td><td>134622</td></tr>
</table>
ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br><br>
ಸರ್ಕಾರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡಿ ಸಕ್ರಮಾತಿ ಕೋರಿರುವ ಅರ್ಹ ಪ್ರಕರಣ ಗಳಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಎ, 94-ಬಿ ಮತ್ತು 94-(ಎ)(4) ರಡಿ ಸಕ್ರಮಗೊಳಿಸಲು ಕಲ್ಪಿಸಲಾಗಿದೆ.<br><br>
ಅನಧಿಕೃತ ಸಾಗುವಳಿದಾರನು ಕರ್ನಾಟಕ ಭೂ ಕಂದಾಯ ನಿಯಮಗಳು-1966ರ ನಿಯಮ 108-ಎಫ್ ರಲ್ಲಿನ ಈ ಕೆಳಗಿನ ಅರ್ಹತೆಗಳನ್ನು ಹೊಂದಿರತಕ್ಕದ್ದಾಗಿದೆ.<br><br>
• ಅವನು ಹದಿನೆಂಟು ವರ್ಷಗಳ ವಯಸ್ಸಿನ ವನಾಗಿರಬೇಕು; ಮತ್ತು</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | • ಅವನು ಭೂಮಿಯು ಇರುವ ಅಥವಾ ಪಕ್ಕದಲ್ಲಿರುವ ತಾಲೂಕಿನಲ್ಲಿ ತಾಲೂಕಿನ ಪರಿಮಿತಿಯೊಳಗೆ ಖಾಯಂ ನಿವಾಸಿಯಾಗಿರಬೇಕು; ಮತ್ತು<br>• ಅವನು ಖುದ್ದಾಗಿ ಸಾಗುವಳಿ ಮಾಡುವ ಸ್ವಾಭಾವಿಕ ಕೃಷಿಕ ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ-1961ರ ಉಪಬಂಧಗಳ ಮೇರೆಗೆ ಭೂಮಿಯನ್ನು ಹೊಂದುವುದು ಮತ್ತು ಪಡೆಯುವುದರಿಂದ ನಿಷಿದ್ಧನಾಗತಕ್ಕದ್ದಲ್ಲ; ಮತ್ತು<br>• 2005ರ ಜನವರಿ ಮೊದಲ ದಿನಕ್ಕೆ ಮೂರು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯವರೆಗೆ ನಿರಂತರ ಅರ್ಜಿ ಸಲ್ಲಿಸಿದ ಅರ್ಜಿದಾರರು ಅನಧಿಕೃತವಾಗಿ ಆಕ್ರಮಿಸಿಕೊಂಡ ಭೂಮಿ ಯಾಗಿದೆ.<br>• ಪರಂತು, ಅನುಸೂಚಿತ ಜಾತಿಗಳು ಮತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆಯಿರತಕ್ಕದ್ದಲ್ಲ.<br>• ಮುಂದುವರೆದು, ಅಂಥ ವ್ಯಕ್ತಿಯು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೆ ಮಂಜೂರಾದ ಭೂಮಿಯು ಡಿ ದರ್ಜೆಯ ಭೂಮಿ ಅಥವಾ ಅದಕ್ಕೆ ಸಮನಾದ 2 ಹೆಕ್ಟೇರ್ ಗಿಂತ ಮೀರತಕ್ಕದ್ದಲ್ಲ.<br>• ಅಲ್ಲದೇ ಕರ್ನಾಟಕ ಭೂಕಂದಾಯ ನಿಯಮಗಳು-1966ರ ನಿಯಮ 97(1)ರನ್ವಯ ಗೋಮಾಳ ಜಮೀನನ್ನು ನಿಗದಿಪಡಿಸುವ ಕುರಿತು ಸರ್ಕಾರವು ದಿನಾಂಕ:24-02-2022 ರಂದು RD 02 LGP 2021ರ ಸುತ್ತೋಲೆಯನ್ನು ಹೊರಡಿಸಿರುತ್ತದೆ.<br><br>ಸದರಿ ಸುತ್ತೋಲೆಯಂತೆ ಜಿಲ್ಲಾಧಿಕಾರಿಗಳು ಗ್ರಾಮದಲ್ಲಿನ ಜಾನುವಾರುಗಳಿಗೆ ಅನುಗುಣವಾಗಿ ನಿಗದಿತ ಗೋಮಾಳವನ್ನು ನಿಗದಿಪಡಿಸಿದ ನಂತರ ಹೆಚ್ಚುವರಿ ಗೋಮಾಳ ಲಭ್ಯವಿದ್ದಲ್ಲಿ ಮಾತ್ರ ನಮೂನೆ-57ರ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುತ್ತದೆ ಮತ್ತು ನಿಯಮ-97(1) ರನ್ವಯ ಗೋಮಾಳದ ವಿಸ್ತೀರ್ಣ ಕಡಿಮೆ ಇದ್ದಲ್ಲಿ ನಮೂನೆ-57ರ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ. ಅದರಂತೆ, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮುಂದುವರೆದು, ಪ್ರಸ್ತುತ ಬಗರ್‌ಹುಕುಂನಡಿ ಸಕ್ರಮಾತಿ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು ಅನುಸರಿಸಬೇಕಾದ ಮಾರ್ಗಸೂಚಿಗಳ ಕುರಿತು ಸರ್ಕಾರವು ದಿನಾಂಕ: 01.12.2023ರಂದು ಆರ್‌ಡಿ 45 ಎಲ್‌ಜಿಪಿ 2023ರ ಸುತ್ತೋಲೆಯನ್ನು ಹೊರಡಿಸಿರುತ್ತದೆ.<br><br>ಅದರಂತೆ, ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಎ, 94-ಬಿ ಮತ್ತು 94ಎ(4)ರಡಿ ಕಲ್ಪಿಸಿರುವ ಅವಕಾಶಗಳನ್ವಯ ನಮೂನೆ-50, ನಮೂನೆ-53 ಮತ್ತು ನಮೂನೆ-57 ರಂತೆ ಸಲ್ಲಿಸಲ್ಪಟ್ಟಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು ನಿಯಮ-108(ಎಫ್) ರಲ್ಲಿನ ಅರ್ಹತೆ ಬಗ್ಗೆ ಪರಿಶೀಲಿಸಿಕೊಂಡು ಹಾಗೂ ತಹಶೀಲ್ದಾರ್‌ರಿಂದ ಅಧಿಕೃತವಾಗಿ ಅಧಿಕಾರ ಪಡೆದ ಅಧಿಕಾರಿಗಳಿಂದ ಸ್ಥಳ ತಪಾಸಣೆ, ಸಾಕ್ಷ್ಯಚಿತ್ರ ಮತ್ತು ಸಾಂಧರ್ಬಿಕ ಪುರಾವೆಗಳನ್ನು ಪರೀಕ್ಷಿಸಿ ಅರ್ಹತೆಯನ್ನು ನಿರ್ಧರಿಸಿ ಅರ್ಹವಲ್ಲದ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸುತ್ತಾರೆ.<br><br>ಕರ್ನಾಟಕ ಭೂಕಂದಾಯ ನಿಯಮಗಳು-1966 ರ ನಿಯಮ-108CCC ಮತ್ತು ನಿಯಮ-108C ಗೆ ತಿದ್ದುಪಡಿ ತರುವ ಮೂಲಕ ಸರ್ಕಾರವು ದಿನಾಂಕ:18-09-2020 ರಂದು RD 136 LGP 2020(ಇ), ಮತ್ತು ದಿನಾಂಕ:13-04-2022ರಂದು ಸಂಖ್ಯೆ:RD 136 LGP 2020, ಅಧಿಸೂಚನೆಗಳನ್ನು ಹೊರಡಿಸಿದ್ದು, ಅನರ್ಹ ಪ್ರಕರಣಗಳನ್ನು ತಿರಸ್ಕರಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ. ಅದರಂತೆ, ನಿಯಮಾನುಸಾರ ಪರಿಶೀಲಿಸಿ ಬಗರ್‌ಹುಕುಂ ತಂತ್ರಾಂಶದಲ್ಲಿ ಅರ್ಜಿ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ. |
| (ಇ) | ಕಡೂರು ತಾಲ್ಲೂಕಿನಲ್ಲಿ ಈ ಹಿಂದೆ ಬಗರ್ ಹುಕುಂ ಸಕ್ರಮೀಕರಣ ಸಮಿತಿಯಲ್ಲಿ ಮಂಜೂರು ಮಾಡಿ ಸಾಗುವಳಿ ಚೀಟಿ ವಿತರಿಸಿ ಪಹಣಿ ನೀಡಿರುವ ಪ್ರಕರಣಗಳಲ್ಲಿ ರೈತರಿಗೆ ನೀಡಿದ್ದ ಮಂಜೂರಾತಿಯನ್ನು ರದ್ದುಪಡಿಸಲು ಸರ್ಕಾರದಿಂದ ನೇಮಿಸಿದ್ದ ತಹಸೀಲ್ದಾರ್‌ಳ ತಂಡದ ವರದಿ ಆಧಾರದ ಮೇಲೆ ತಹಸೀಲ್ದಾರ್ ಕಡೂರು ಇವರು ಸ್ವಯಂ ಪ್ರೇರಿತ ' ಮೇಲ್ಮನವಿ ಸಲ್ಲಿಸಿರುವುದರಿಂದ ರೈತರು ಆತಂಕಕ್ಕೆ | ಸರ್ಕಾರದ ಆದೇಶ ಸಂಖ್ಯೆ:ಇ-ಕಂಇ 78 ಎಟಿಎಸ್ 2023, ದಿನಾಂಕ:07-08-2023ರಂತೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964 ರ ಕಲಂ-94ಎ ಅಡಿ ಯಲ್ಲಿ ನೀಡಿರಬಹುದಾದ ಅನಧಿಕೃತ ಭೂ ಮಂಜೂರಾತಿಗಳನ್ನು ಪರಿಶೀಲಿಸಿ ಅಕ್ರಮವೆಸಗಿರುವ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಲು ತಹಶೀಲ್ದಾರ್‌ಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು ಸರ್ಕಾರವು ರಚಿಸಿದ್ದು, ಸದರಿ ತನಿಖಾ ತಂಡವು ಪರಿಶೀಲಿಸಿ ಪತ್ರ ಸಂಖ್ಯೆ:ತನಿಖೆ/ಸಿಆರ್/025/2023-24, ದಿನಾಂಕ: 20-09-2023 ರ ಪತ್ರದಲ್ಲಿ ಸಲ್ಲಿಸಿರುವ |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ತನಿಖಾ ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಮುಖ ಅಂಶಗಳೇನು ; (ತನಿಖಾ ವರದಿಯ ಪ್ರತಿ ಒದಗಿಸುವುದು)</td><td>ಅಂತಿಮ ವರದಿಯಲ್ಲಿ ಕಡೂರು ತಾಲ್ಲೂಕಿನಲ್ಲಿ ಈ ಕೆಳಗಿನಂತೆ ಪ್ರಕರಣಗಳನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ. ತನಿಖಾ ವರದಿಯ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.
<table>
<tr><th>ವಿವರ</th><th>ಸಂಖ್ಯೆ</th><th>ವಿಸ್ತೀರ್ಣ (ಎಕರೆ/ಗುಂಟೆ)</th></tr>
<tr><td>ಮಂಜೂರಾತಿ ಯಾಗಿರುವ ಅನರ್ಹ ಪ್ರಕರಣಗಳು</td><td>936</td><td>2349-07</td></tr>
<tr><td>ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳು</td><td>1062</td><td>2371-36</td></tr>
<tr><td>ಕಾರ್ಯವಿಧಾನ ವೈಫಲ್ಯ ಕಂಡು ಬಂದ ಪ್ರಕರಣಗಳು</td><td>245</td><td>517-26</td></tr>
<tr><td>ಒಟ್ಟು</td><td>2243</td><td>5238-29</td></tr>
</table>
ಅಲ್ಲದೇ, 1) ಮರುಪರಿಶೀಲನೆಗೆ ಶಿಫಾರಸ್ಸು ಮಾಡಿರುವ ಪ್ರಕರಣಗಳು 2) ಕಾರ್ಯವಿಧಾನ ವೈಫಲ್ಯ ಕಂಡುಬಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಸೂಕ್ತ ವಿಚಾರಣೆ ನಡೆಸಿ ಪ್ರಕರಣವಾರು ವರದಿಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಇ-ಕಂಇ 16 ಎಡಿಇ 2024, ದಿನಾಂಕ: 10-04-2024 ರ ಪತ್ರದಲ್ಲಿ ನಿರ್ದೇಶಿಸಲಾಗಿದೆ. ಅದರಂತೆ, ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಹಾಗೂ ಉಪ ವಿಭಾಗಾಧಿಕಾರಿ, ತರೀಕೆರೆ ರವರು ನಿಯಮಾನುಸಾರ ಪರಿಶೀಲಿಸಿ ವಿಚಾರಣೆ ನಡೆಸುತ್ತಿರುತ್ತಾರೆ.</td></tr>
<tr><td>(ಈ)</td><td>ಈ ರೀತಿ ಮಂಜೂರಾತಿಯನ್ನು ರದ್ದುಪಡಿಸಿದಲ್ಲಿ ಅಧಿಕಾರಿಗಳು ಮಾಡಿದ ತಪ್ಪಿಗೆ ರೈತರಿಗೆ ಅನ್ಯಾಯವಾಗುವುದಿಲ್ಲವೇ ಇದರಿಂದ ಆತಂಕಕ್ಕೊಳಗಾಗಿರುವ ರೈತರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ಒದಗಿಸಿ)</td><td>ತನಿಖಾ ತಂಡವು ಗುರುತಿಸಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು-1966 ರ ನಿಯಮ 108-ಕೆ ರಡಿ ನಿಯಮಾನುಸಾರ ಪರಿಶೀಲಿಸಿ, ಅನರ್ಹ ಪ್ರಕರಣಗಳನ್ನು ಮಾತ್ರ ರದ್ದುಪಡಿಸಿ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲು ಕ್ರಮವಹಿಸಲಾಗುತ್ತಿದೆ.</td></tr>
</table>

(ಕಡತ ಸಂಖ್ಯೆ: ಆರ್‌ಡಿ 16 ಎಲ್‌ಜಿಯು 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ - 1

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಎ, 94-ಬಿ ಮತ್ತು 94-ಎ(4)ರಡಿ ನಮೂನೆ-50, 53 ಹಾಗೂ 57 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ತಾಲ್ಲೂಕುವಾರು ವಿವರ

| ಕ್ರ.ಸಂ | ತಾಲ್ಲೂಕು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | | |
|---|---|---|---|---|
| | | ನಮೂನೆ-50 | ನಮೂನೆ-53 | ನಮೂನೆ-57 |
| 1 | ಚಿಕ್ಕಮಗಳೂರು | 10045 | 17326 | 27097 |
| 2 | ಮೂಡಿಗೆರೆ | 6620 | 7840 | 13220 |
| 3 | ಕಳಸ | 3913 | 4224 | 4885 |
| 4 | ಕೊಪ್ಪ | 8595 | 7437 | 11064 |
| 5 | ಶೃಂಗೇರಿ | 2798 | 3642 | 4977 |
| 6 | ತರೀಕೆರೆ | 9871 | 15429 | 17170 |
| 7 | ಅಜ್ಜಂಪುರ | 3707 | 2491 | 3719 |
| 8 | ಕಡೂರು | 13199 | 14169 | 22538 |
| 9 | ನರಸಿಂಹರಾಜಪುರ | 6339 | 4620 | 9596 |
| | **ಒಟ್ಟು** | **65087** | **77178** | **114266** |

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

ಅನುಬಂಧ - 2

**ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಎ ರಡಿ ನಮೂನೆ-50 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ತಾಲ್ಲೂಕುವಾರು ವಿವರ**

| ಕ್ರ.ಸಂ | ತಾಲ್ಲೂಕು | ನಮೂನೆ-50 ರಡಿ ಅರ್ಜಿಗಳ ವಿಲೇವಾರಿ | | |
|---|---|---|---|---|
| | | ಸ್ವೀಕೃತ | ಮಂಜೂರಿ | ತಿರಸ್ಕೃತ |
| 1 | ಚಿಕ್ಕಮಗಳೂರು | 10045 | 3153 | 6892 |
| 2 | ಮೂಡಿಗೆರೆ | 6620 | 1002 | 5618 |
| 3 | ಕಳಸ | 3913 | 490 | 3423 |
| 4 | ಕೊಪ್ಪ | 8595 | 1000 | 7595 |
| 5 | ಶೃಂಗೇರಿ | 2798 | 105 | 2693 |
| 6 | ತರೀಕೆರೆ | 9871 | 1925 | 7946 |
| 7 | ಅಜ್ಜಂಪುರ | 3707 | 959 | 2748 |
| 8 | ಕಡೂರು | 13199 | 4043 | 9156 |
| 9 | ನರಸಿಂಹರಾಜಪುರ | 6339 | 1293 | 5046 |
| | **ಒಟ್ಟು** | **65087** | **13970** | **51117** |

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

ಅನುಬಂಧ - 2

**ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಬಿ ರಡಿ ನಮೂನೆ-53 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ತಾಲ್ಲೂಕುವಾರು ವಿವರ**

| ಕ್ರ.ಸಂ | ತಾಲ್ಲೂಕು | ನಮೂನೆ-53 ರಡಿ ಅರ್ಜಿಗಳ ವಿಲೇವಾರಿ | | |
|---|---|---|---|---|
| | | ಸ್ವೀಕೃತ | ಮಂಜೂರಿ | ತಿರಸ್ಕೃತ |
| 1 | ಚಿಕ್ಕಮಗಳೂರು | 17326 | 4437 | 10857 |
| 2 | ಮೂಡಿಗೆರೆ | 7840 | 2423 | 4192 |
| 3 | ಕಳಸ | 4224 | 1516 | 2468 |
| 4 | ಕೊಪ್ಪ | 7437 | 2242 | 3147 |
| 5 | ಶೃಂಗೇರಿ | 3642 | 1313 | 1002 |
| 6 | ತರೀಕೆರೆ | 15429 | 720 | 14603 |
| 7 | ಅಜ್ಜಂಪುರ | 2491 | 443 | 1932 |
| 8 | ಕಡೂರು | 14169 | -707 | 13215 |
| 9 | ನರಸಿಂಹರಾಜಪುರ | 4620 | 1052 | 1901 |
| | **ಒಟ್ಟು** | **77178** | **14853** | **53317** |

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

ಅನುಬಂಧ - 2

**ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-94-ಎ(4) ರಡಿ ನಮೂನೆ-57 ರಲ್ಲಿ ಜಮೀನು ಮಂಜೂರು ಮಾಡುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ತಾಲ್ಲೂಕುವಾರು ವಿವರ**

| ಕ್ರ.ಸಂ | ತಾಲ್ಲೂಕು | ನಮೂನೆ-57 ರಡಿ ಅರ್ಜಿಗಳ ವಿಲೇವಾರಿ | | |
|---|---|---|---|---|
| | | ಸ್ವೀಕೃತ | ಮಂಜೂರಿ | ತಿರಸ್ಕೃತ |
| 1 | ಚಿಕ್ಕಮಗಳೂರು | 27097 | 34 | 7179 |
| 2 | ಮೂಡಿಗೆರೆ | 13220 | 0 | 2780 |
| 3 | ಕಳಸ | 4885 | 0 | 2923 |
| 4 | ಕೊಪ್ಪ | 11064 | 0 | 3023 |
| 5 | ಶೃಂಗೇರಿ | 4977 | 0 | 1315 |
| 6 | ತರೀಕೆರೆ | 17170 | 148 | 6066 |
| 7 | ಅಜ್ಜಂಪುರ | 3719 | 15 | 1048 |
| 8 | ಕಡೂರು | 22538 | 0 | 2890 |
| 9 | ನರಸಿಂಹರಾಜಪುರ | 9596 | 0 | 2964 |
| | **ಒಟ್ಟು** | **114266** | **197** | **30188** |

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

ಅನುಬಂಧ - 3

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 16 ಎಸಿಡಿ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:10.04.2024

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

**ಅತೀ ತುರ್ತು**

ಇವರಿಗೆ:
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಮಾನ್ಯರೇ,

**ವಿಷಯ:** ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 94ಎ ಅಡಿಯಲ್ಲಿ ಭೂ ಮಂಜೂರಾತಿಯಲ್ಲಿ ನೀಡಿರಬಹುದಾದ ಅನಧಿಕೃತ ಮಂಜೂರಾತಿ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇ ಕಂಇ 78 ಎಸಿಡಿಎಸ್ 2023 ದಿನಾಂಕ:07.08.2023
2. ಕಂದಾಯ ಆಯುಕ್ತಾಲಯದ ಟಿಕ ಕಡತ ಸಂಖ್ಯೆ RD 195 SCE 2023 (1234025)
3. ಕಂದಾಯ ಆಯುಕ್ತಾಲಯದ ಟಿಕ ಕಡತ ಸಂಖ್ಯೆ RD 196 SCE 2023 (1234122)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಆದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 94 ಎ ಅಡಿಯಲ್ಲಿ ನೀಡಿರಬಹುದಾದ ಅನಧಿಕೃತ ಭೂ ಮಂಜೂರಾತಿಗಳನ್ನು ಪರಿಶೀಲಿಸಿ ಅಕ್ರಮವೆಸಗಿರುವ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಲು ತಹಶೀಲ್ದಾರ್‌ಗಳನ್ನು ಒಳಗೊಂಡ ವಿಶೇಷ ತಂಡವನ್ನು ರಚಿಸಿ ಸರ್ಕಾರಿ ಭೂಮಿಗೆ ಅಕ್ರಮ ಹಕ್ಕು ಇಂಡೀಕರಣ ತನಿಖೆ ಕುರಿತಂತೆ ಚಿಕ್ಕಮಗಳೂರು ಜಿಲ್ಲೆಗೆ ನಿಯೋಜಿಸಲಾಗಿತ್ತು. ಅದರಂತೆ ಸಮಗ್ರವಾದ ತನಿಖೆ ಕೈಗೊಂಡು ಅಂತಿಮ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿನ ಅಂಶಗಳು ಸ್ವಯಂವೇದ್ಯವಾಗಿರುತ್ತವೆ.

ತನಿಖಾ ತಂಡವು ನೀಡಿರುವ ಅಂತಿಮ ವರದಿಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಕ್ರಮವಹಿಸಿ 03 ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ. **(ಸದರಿ ಪ್ರಕರಣಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿ / ದಾಖಲೆಗಳನ್ನು ಕಂದಾಯ ಆಯುಕ್ತಾಲಯದಿಂದ ಪಡೆದುಕೊಳ್ಳುವುದು)**

1. ವರದಿಯಲ್ಲಿ ಗುರುತಿಸಿರುವಂತೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿರುವ ಕಡತಗಳ ಬಗ್ಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸೂಕ್ತ ವಿಚಾರಣೆ ನಡೆಸಿ ಪ್ರಕರಣವಾರು ವರದಿ ಸಲ್ಲಿಸುವುದು.
2. ಕಾರ್ಯವೈಫಲ್ಯ ಕಂಡುಬಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖಾ ವರದಿಯಲ್ಲಿನ ಕೋಷ್ಟಕದಲ್ಲಿ ಸೂಚಿಸಿರುವಂತೆ ಕ್ರಮವಹಿಸುವುದು ಹಾಗೂ ಕೈಗೊಂಡ ಕ್ರಮದ ವರದಿ ಸಲ್ಲಿಸುವುದು.

ತಮ್ಮ ನಂಬುಗೆಯ,

(ಮುಕ್ತಾರ್ ಪಾಷ ಹೆಚ್.ಜಿ) 10/4/2024
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3 & ಪಿಸಿ).

| ಜಿಲ್ಲಾಧಿಕಾರಿಗಳ ಕಾರ್ಯಾಲಯ ಚಿಕ್ಕಮಗಳೂರು ಟಪಾಲು(H) | |
|---|---|
| ದಿನಾಂಕ | 22 APR 2024 |
| ಶಾಖೆ | |
| ಡಿ.ಓ. | |
| ಎ.ಡಿ.ಓ. | |
| ಓ.ವಿ. | |
| ಶಿರಸ್ತೆ | |

CONFIDENTIAL

ಕಂದಾಯ ಇಲಾಖೆ

# ಜಿಲ್ಲಾಧಿಕಾರಿಗಳ ಕಾರ್ಯಾಲಯ
# ಚಿಕ್ಕಮಗಳೂರು ಜಿಲ್ಲೆ – 577101

ಮಿಂಚಂಚೆ – ggshastri@gmail.com Mobile – 9632510130

ತನಿಖೆ/ಸಿ ಆರ್ / 025 / 23-24 ದಿ. 20 ಸಪ್ಟೆಂಬರ 2023

ಗೆ,

**ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು**

**ಕಂದಾಯ ಇಲಾಖೆ**

**5ನೇ ಮಹಡಿ, ಬಹುಮಹಡಿ ಕಟ್ಟಡ**

**ಬೆಂಗಳೂರು – 560 001**

ಮಾನ್ಯರೇ,

| | |
|---|---|
| **ವಿಷಯ** | **ಕಡೂರು ತಾಲ್ಲೂಕಿನಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 94 ಎ ಅಡಿಯಲ್ಲಿ ಮಾಡಿರುವ ಮಂಜೂರಾತಿಗಳ ಪರಿಶೀಲನಾ ವರದಿ** |
| **ಉಲ್ಲೇಖ** | 1. ಸರ್ಕಾರದ ಆದೇಶ ಸಂಖ್ಯೆ ಇ-ಆರ್ ಡಿ 78 ಎಟಿಎಸ 2023 ದಿನಾಂಕ 12.09.2023.<br>2. ಸರ್ಕಾರದ ಆದೇಶ ಸಂಖ್ಯೆ ಇ.ಕಂ.ಇ 78 ಎಟಿಎಸ್-2023 ದಿನಾಂಕ 07.08.2023<br>3. ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ ಸಿಬ್ಬಂದಿ ಸಿಆರ್ 83/2022-23 ದಿನಾಂಕ 10.08.2023 |

**ಮುನ್ನುಡಿ:** ಸರ್ಕಾರದ ಆದೇಶ ಸಂಖ್ಯೆ ಇ.ಕಂ.ಇ 78 ಎಟಿಎಸ್-2023 ದಿನಾಂಕ 07.08.2023 ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ ಸಿಬ್ಬಂದಿ ಸಿಆರ್ 83/2022-23 ದಿನಾಂಕ 10.08.2023 ರಂತೆ 13 ಅಧಿಕಾರಿಗಳ ತಂಡವನ್ನು ಕಡೂರು ತಾಲ್ಲೂಕಿನಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 94 ಎ ಅಡಿಯಲ್ಲಿ ಮಾಡಿರುವ ಮಂಜೂರಾತಿಗಳ ಪರಿಶೀಲನ ನಡೆಸಿ ವರದಿಯನ್ನು ನೀಡಲು ನಿಯೋಜಿಸಲಾಗಿದ್ದು, ಸುಮಾರು 25 ದಿನಗಳ ಪರಿಶೀಲನೆಯನ್ನು ನಡೆಸಿದ ತಂಡವು ಈ ಕೆಳಗಿನ ವರದಿಯನ್ನು ತಯಾರಿಸಿರುತ್ತದೆ. **ಉಲ್ಲೇಖ 1 ರ ಸರ್ಕಾರಿ ಆದೇಶದಂತೆ ವರದಿಯನ್ನು ಅಂತಿಮಗೊಳಿಸಲಾಗಿದೆ.**

ಪ್ರಾಥಮಿಕ ವರದಿಯ ಕರಡು ಪ್ರತಿಯನ್ನು ಸಲ್ಲಿಸಿದ ಸಮಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ದಿನಾಂಕ

29 ಅಗಸ್ಟ್ 2023 ರಂದು ನೀಡಿರುವ ಮೌಖಿಕ ನಿರ್ದೇಶನದಂತೆ ವರದಿಯನ್ನು ಪರಿಷ್ಕರಿಸಲು ತನಿಖೆ/ಸಿಆರ್ / 016 / 23-24 ದಿ. 29 ಅಗಸ್ಟ್ 2023 ರಂತೆ ಮಾರ್ಗದರ್ಶನ ಕೋರಲಾಯಿತು.

ದಿನಾಂಕ 31 ಅಗಸ್ಟ್ 2023 ರಂದು ಮಾನ್ಯ ಆಯುಕ್ತರು ಕಂದಾಯ ಇಲಾಖೆ ಅವರು ತನಿಖಾ ತಂಡದೊಂದಿಗೆ ಸುಧೀರ್ಘ ಚರ್ಚೆಯನ್ನು ನಡೆಸಿ ತಂಡದ ಎಲ್ಲ ಅನುಮಾನಗಳಿಗೆ ಸೂಕ್ತ ಸಮಜಾಯಿಸಿ ನಿರ್ದೇಶನವನ್ನು ನೀಡಿರುತ್ತಾರೆ. ತಂಡದ ಸದಸ್ಯರು ಮಾನ್ಯ ಆಯುಕ್ತರೊಂದಿಗೆ ಚರ್ಚಿಸಿದ ನಂತರ ಅನರ್ಹತೆಗಳು, ಅವುಗಳನ್ನು ಗುರುತಿಸುವ ಕಾರ್ಯವಿಧಾನ ಮತ್ತು ಅನರ್ಹತೆಗಳನ್ನು ವರ್ಗೀಕರಿಸುವ, ದಾಖಲೆಗಳನ್ನು ಸಂಗ್ರಹಿಸುವ ವಿಧಾನವನ್ನು ಮಾನ್ಯರ ಸೂಚನೆಯಂತೆ ಅಂತಿಮಗೊಳಿಸಲಾಯಿತು. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಅವರ ಸೂಚನೆಯಂತೆ ಅನರ್ಹ ಪ್ರಕರಣಗಳಲ್ಲಿ ಮಂಜೂರಾತಿಗೆ ಕಾರಣೀಭೂತರಾದ ವ್ಯಕ್ತಿಗಳನ್ನು ವರದಿಯಲ್ಲಿ ಗುರುತಿಸುವ ಬಗ್ಗೆ ಸಹ ಮಾನ್ಯ ಆಯುಕ್ತರು ಕಂದಾಯ ಇಲಾಖೆ ಅವರೊಂದಿಗೆ ಚರ್ಚಿಸಿ ವಿಧಾನವನ್ನು ಅಂತಿಮಗೊಳಿಸಲಾಯಿತು

**ತನಿಖಾ ತಂಡದ ಸದಸ್ಯರು**(ನಿಯೋಜಿತ ತಹಶಿಲ್ದಾರರು)

ಶ್ರೀ. ಗಣಪತಿ ಶಾಸ್ತ್ರಿ
ಶ್ರೀ. ಬಿ.ಎಸ್ ರಾಜೀವ
ಕು. ನೀಲಪ್ರಭಾ
ಕು. ರೇಣುಕಮ್ಮ
ಶ್ರೀ. ವಿಜಯಕುಮಾರ ಜಿ. ಕಡಕೋಳ
ಶ್ರೀ. ಶಿವಕುಮಾರ ಶಾಬಾ
ಶ್ರೀ. ಪಿ.ಆರ್. ಗುರುರಾಜ್
ಶ್ರೀ. ಪರಶುರಾಮ ಸತ್ತಿಗೇರಿ
ಶ್ರೀ. ಅಮರೇಶ ಬಿರಾದಾರ
ಶ್ರೀ. ಸಂಜಯ ಕಾಂಬ್ಳೆ
ಶ್ರೀ. ಬಸವರಾಜ ಎಂ
ಶ್ರೀ. ಎನ್. ಆರ್. ಕರಿಯಾ ನಾಯ್ಕ
ಶ್ರೀ. ಸಿ ರಾಮಲಕ್ಷ್ಮಯ್ಯ

**ಪ್ರಸ್ತಾವನೆ**. ಉಲ್ಲೇಖ 2 ರ ಆದೇಶದಂತೆ ತಂಡವು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಅವರಲ್ಲಿ ವರದಿಮಾಡಿಕೊಂಡ ನಂತರ ಉಲ್ಲೇಖ 3 ರಂತೆ ಕಡೂರು ತಾಲ್ಲೂಕಿನ ಮಂಜೂರಾತಿಗಳನ್ನು ಪರಿಶೀಲಿಸಲು ನಿಯೋಜಿಸಲಾಯಿತು. ಉಲ್ಲೇಖ 3 ರ ಆದೇಶದ 1ನೇ ಪ್ಯಾರಾದಲ್ಲಿ ಸೂಚಿಸಿದಂತೆ 3685 ಮಂಜೂರಾತಿ ಮ್ಯುಟೇಶನ್ ನಮೂದುಗಳ ಪಟ್ಟಿಯನ್ನು ಮಿಂಚಂಚೆಯ ಮೂಲಕ ಒದಗಿಸಲಾಯಿತು (ಮಿಂಚಂಚೆಯ ಪ್ರತಿ ಲಗತ್ತಿಸಿದೆ) ಪ್ರಮುಖವಾಗಿ ತನಿಖೆಯ ಉದ್ದೇಶವು ಸರಕಾರಿ ಜಮೀನನ್ನು

ಅನರ್ಹರಿಗೆ ಕಾನೂನುಬಾಹಿರವಾಗಿ ಮಂಜೂರಾತಿ ನೀಡಿ ಸರಕಾರಕ್ಕೆ ಹಾನಿಯನ್ನು ಉಂಟುಮಾಡಿರುವುದರ ಬಗ್ಗೆ ಪರಿಶೀಲಿಸಿ ವರದಿಸುವುದು ಆಗಿರುವುದರಿಂದ, ತನಿಖೆಯನ್ನು ಆದಷ್ಟು ಸರಳೀಕರಣಗೊಳಿಸುವ ಉದ್ದೇಶದಿಂದ ಅನರ್ಹತೆಗಳನ್ನು ಗುರುತಿಸುವ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಯಿತು. ಗುರುತಿಸಲಾಗಿರುವ ಪ್ರಮುಖ ಕಾರ್ಯಲೋಪಗಳ ಪ್ರಕರಣಗಳನ್ನು ಮರುಪರಿಶೀಲನೆಗೆ ಶಿಪಾರಸು ಮಾಡಲಾಗಿದೆಯೇ ಹೊರತು ಅನರ್ಹ ಎಂದು ಗುರುತಿಸಲಾಗಿಲ್ಲ. ಮುಂದುವರೆದು 31 ಅಗಸ್ಟ 2023 ರಂದು ಮಾನ್ಯ ಆಯುಕ್ತರು ಕಂದಾಯ ಇಲಾಖೆ ಇವರೊಂದಿಗೆ ಚರ್ಚಿಸಿದ ನಂತರ ನಮೂನೆಗಳನ್ನು, ಅನರ್ಹತೆಗಳ ವಿಧಗಳನ್ನು ಚರ್ಚಿಸಿ ಅಂತಿಮಗೊಳಿಸಲಾಯಿತು. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಅವರು ದಿನಾಂಕ 05 ಸಪ್ಟಂಬರ 2023 ರಂದು ತನಿಖಾಧಿಕಾರಿಗಳೊಂದಿಗೆ ಸಭೆ ನಡೆಸಿ ಹೆಚ್ಚಿನ ಸೂಚನೆಗಳನ್ನು ನೀಡಿದರು.

ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಅ ರಂತೆ ಮಂಜೂರಾತಿಯನ್ನು ನೀಡುವಾಗ ಈ ಕೆಳಗಿನ ಕಾಯ್ದೆ ಮತ್ತು ನಿಯಮಗಳಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕಾಗುತ್ತದೆ ಮತ್ತು ಕಾಲಕಾಲಕ್ಕೆ ಸರಕಾರದಿಂದ ಹೊರಡಿಸಿರುವ ಈ ಕೆಳಗಿನ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕಾಗಿರುತ್ತದೆ.

(i) ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 94 ಎ

(ii) ಕರ್ನಾಟಕ ಭೂಕಂದಾಯ ನಿಯಮಗಳು 1966 ನಿಯಮ 108 (ಅಧ್ಯಾಯ 13 ಅ)

(iii) ಕರ್ನಾಟಕ ಭೂಮಂಜೂರಾತಿ ನಿಯಮಗಳು 1969

(iv) ಆರ್.ಡಿ 59 ಎಲ್ ಜಿ ಪಿ 92 ದಿನಾಂಕ 26 ಜೂನ್ 1992 - 94 ಎ ಅಡಿಯಲ್ಲಿ ಭೂಮಂಜೂರಾತಿ ಮಾಡುವ ಬಗ್ಗೆ ಮುಂದುವರೆದ ಸೂಚನೆಗಳು

(v) ಆರ್.ಡಿ 5 ಎಲ್ ಜಿ ಪಿ 92 ದಿನಾಂಕ 14 ಜುಲೈ 1992 - 94 ಎ ಅಡಿಯಲ್ಲಿ ಭೂಮಂಜೂರಾತಿ ಮಾಡುವ ಬಗ್ಗೆ ಸ್ಪಷ್ಟೀಕರಣಗಳು

(vi) ಆರ್.ಡಿ 13 ಎಲ್ ಜಿ ಪಿ 91(ಭಾಗ) ದಿನಾಂಕ 09 ಮೇ 1994 - ಸರ್ವೆ ನಕ್ಷೆ ಇಲ್ಲದೇ ಮಂಜೂರಾತಿ ನೀಡುವ ಬಗ್ಗೆ

(vii) ಆರ್.ಡಿ 94 ಎಲ್ ಜಿ ಪಿ 93 ದಿನಾಂಕ 02 ಫೆಬ್ರುವರಿ 1994 ಗೋಮಾಳ ವಿಸ್ತೀರ್ಣ ತಗ್ಗಿಸುವ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ,

(viii) ಆರ್.ಡಿ 108 ಎಲ್ ಜಿ ಪಿ 93 ದಿನಾಂಕ 19 ಮಾರ್ಚ 1994 - ಅನಧಿಕೃತ ಸಾಗುವಳಿಯ ಅಕ್ರಮ ಮಂಜೂರಿಯನ್ನು ರದ್ದುಪಡಿಸುವ ಬಗ್ಗೆ

(ix) ಆರ್.ಡಿ 38 ಎಲ್ ಜಿ ಪಿ 98 ದಿನಾಂಕ 08 ನವಂಬರ 2000 - ನಮೂನೆ 53 ಅರ್ಜಿಗಳ ಭೂಮಂಜೂರಾತಿ ಮಾಡುವ ಬಗ್ಗೆ ಸ್ಪಷ್ಟೀಕರಣಗಳು

(x) ಆರ್.ಡಿ 168 ಎಲ್ ಜಿ ಪಿ 2014 ದಿನಾಂಕ 18 ಸಪ್ಟಂಬರ 2014 - ನಿರ್ಭಂದಿತ ಅಂತರ ನಿರ್ಧರಣೆ ಮಾಡುವಾಗ ನೇರವಾಗಿ ಅಳತೆ ಮಾಡುವ ಬಗ್ಗೆ ಮತ್ತು ಮಾಹಿತಿಯನ್ನು ಭೂ ಮಾಪನ ಇಲಾಖೆಯಿಂದ ಪಡೆಯುವ ಕುರಿತು

(xi) ಕಂಇ 23 ಎಲ್ ಜಿ ಪಿ 2016 ದಿನಾಂಕ 18 ಜುಲೈ 2016 - ಬಾಕಿ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು

(xii) ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 - ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ನಕ್ಷೆ ತಯಾರಿಸುವ ಕುರಿತು ಹಾಗೂ ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಒಂದೇ ಸರ್ವೆ ನಂಬರಿನಲ್ಲಿ ಇದ್ದಾಗ ಪಕ್ಕಾ ಪೋಡಿ ಆದನಂತರ ಮಂಜೂರಾತಿ ನೀಡುವ ಕುರಿತು

(xiii) ಆರ್ ಡಿ 24 ಎಲ್ ಜಿ ಪಿ 2017(ಭಾಗ-1) ದಿನಾಂಕ 05 ಜೂನ್ 2017 – ಸಿ ಮತ್ತು ಡಿ ವರ್ಗದ ಜಮೀನನ್ನು ಮಂಜೂರು ಮಾಡುವ ಬಗ್ಗೆ

(xiv) ಕಂ. ಇ 40 ಎಲ್ ಜಿ ಪಿ 2018 ದಿನಾಂಕ 25 ಅಕ್ಟೋಬರ 2018 – ನಿರ್ಬಂಧಿತ ಅಂತರ ನಿರ್ಧಾರಣೆ ಮಾಡುವಾಗ ನೇರವಾಗಿ ಅಳತೆ ಮಾಡುವ ಬಗ್ಗೆ ಮತ್ತು ಮಾಹಿತಿಯನ್ನು ಭೂ ಮಾಪನ ಇಲಾಖೆಯಿಂದ ಪಡೆಯುವ ಕುರಿತು.

(xv) ಆರ್ ಡಿ 02 ಎಲ್ ಜಿ ಪಿ 2021 ದಿನಾಂಕ 24 ಫೆಬ್ರುವರಿ 2022 – ನಮೂನ 57 ರಲ್ಲಿ ಗೋಮಾಳ/ಶೇಂದಿವನ ಜಮೀನನ್ನು ಮಂಜೂರು ಮಾಡದೇ ಇರುವ ಕುರಿತು.

(xvi) ಪಿಎಮ್ ಯು/ಮೋಜಿನಿ 10/2008-09 ದಿನಾಂಕ 21-08-2008 – ಪೈಕಿ ಪಹಣಿಗಳನ್ನು ಸರಿಪಡಿಸುವ ಕುರಿತು

(xvii) ಜಮಾಬಂದಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ ಆರ್ ಡಿ 41 ಎಲ್ ಜಿ ಪಿ 2014, ದಿನಾಂಕ 13-03-2014

ಈ ಕೆಳಗಿನ ಅನರ್ಹತೆಯನ್ನು ವರದಿಯಲ್ಲಿ ಪರಿಗಣಿಸಲಾಗಿದ್ದು ಇಂತಹ ಅನರ್ಹತೆಯು ಕಂಡುಬಂದಲ್ಲಿ ಅಂತಹ ಫಲಾನುಭವಿಗಳನ್ನು ಅನರ್ಹ ಎಂದು ಗುರುತಿಸಲಾಗಿದೆ. **(Table 1)**

| ಕ್ರ.ಸಂ | ಅನರ್ಹತೆ | ಕಲಂ / ನಿಯಮ / ಸುತ್ತೋಲೆ |
|---|---|---|
| (i) | ಅರ್ಜಿಯನ್ನು ಸಲ್ಲಿಸಿದ ದಾಖಲಾತಿ ಲಭ್ಯವಿಲ್ಲದ ಪ್ರಕರಣಗಳು | ನಿಯಮ 108(ಸಿ)(2), ನಿಯಮ 108(ಸಿಸಿ)(2) ನಿಯಮ 108(ಸಿಸಿಸಿ)(2) |
| (ii) | ಅರ್ಹತಾ ದಿನಾಂಕದಂದು (ನಮೂನೆ 50 ಮತ್ತು 53 ರಲ್ಲಿ 01 ಏಪ್ರಿಲ್ 1989 (SC/ST), 01 ಏಪ್ರಿಲ್ 1987 (ಇತರೇ)) ಅರ್ಜಿದಾರರು 18 ವರ್ಷ ಪೂರ್ಣೈಸದ ಪ್ರಕರಣಗಳು. | ನಿಯಮ 108(ಎಫ್)(i) |
| (iii) | ಕಡತ ಲಭ್ಯವಿಲ್ಲದೇ ಇರುವ ಮತ್ತು ಭೂಮಿ ತಂತ್ರಾಂಶದಲ್ಲಿ ಸಹ ಹಕ್ಕುಪತ್ರ/ಅಧಿಕೃತ ಜ್ಞಾಪನ ಲಭ್ಯವಿಲ್ಲದ ಪ್ರಕರಣಗಳು | ಕಲಂ 94 ಮತ್ತು 108 |
| (iv) | ನಮೂನೆ 57 ರಲ್ಲಿ ಗೋಮಾಳ/ಶೇಂದಿವನ ಜಮೀನಿನಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು. | ಆರ್‌ಡಿ02 ಎಲ್‌ಜಿಪಿ 2021 ದಿನಾಂಕ 24.02.2022 |
| (v) | ನಿರ್ಬಂಧಿತ ಅಂತರದಲ್ಲಿ ಮಂಜೂರಾತಿಗೊಂಡ ಪ್ರಕರಣಗಳು. | ಕಲಂ 94 (ಎ) (4) |
| (vi) | **ಅರಣ್ಯ ಇಲಾಖೆಯ ವರದಿಯಂತೆ ಅರಣ್ಯ ಭೂಮಿಯಲ್ಲಿ ನೀಡಿರುವ ಮಂಜೂರಾತಿಗಳು** | ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ |

| | | |
|---|---|---|
| | ಆಕಾರಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | 2016 |
| | ಆಕಾರಬಂದನಂತೆ ಪೂರ್ಣ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | |
| (vii) | ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ ಪ್ರಕರಣಗಳು | ಕಲಂ 192 (ಎ) (3) |
| (viii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ಸಮಿತಿಯ ನಡವಳಿಯಲ್ಲಿ ತಿದ್ದುಪಡಿ ಮಾಡಿರುವ ಪ್ರಕರಣಗಳು | ಕಲಂ 192 (ಎ) (3) |
| | ಸಮಿತಿಯಲ್ಲಿ ನಿರ್ಧರಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಮಂಜೂರು ಮಾಡಿದ ಪ್ರಕರಣಗಳು | ಕಲಂ 192 (ಎ) (3) |
| (ix) | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳ ಪೈಕಿ ಕಡತ ಲಭ್ಯವಿಲ್ಲದ ಪ್ರಕರಣಗಳು | ಕಲಂ 192 (ಎ) (3) |

2 ಈ ಕೆಳಗಿನ ಪ್ರಕರಣಗಳನ್ನು ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು **(Table 2)**

| **ಕ್ರ.ಸಂ** | **ಮರುಪರಿಶೀಲನೆಗೆ ಶಿಫಾರಸು ಮಾಡಲು ಕಾರಣ** | **ಕಲಂ / ನಿಯಮ / ಸುತ್ತೋಲೆ** |
|---|---|---|
| (i) | ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | ನಿಯಮ 97(4) |
| (ii) | ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೇ ಭಾಗಶ: ಅರಣ್ಯ ಸಂಬಂಧಿ ವಿಸ್ತೀರ್ಣ ಹೊಂದಿರುವ ಸರ್ವೆನಂಬರುಗಳಲ್ಲಿ ನೀಡಿದ ಮಂಜೂರಾತಿಗಳು. | ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 |
| (iii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ ಪ್ರಕರಣಗಳು | ಕಲಂ 192 (ಎ) (3) |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳು. | ನಿಯಮ 108(ಡಿ) ಕಲಂ 192 (ಎ) (3) |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ಪ್ರಕರಣಗಳು | ಕಲಂ 192 (ಎ) (3) |
| (iv) | ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು | ಕಲಂ 192 (ಎ) (3) |
| (v) | ಅಮೃತಮಹಲ್ ಕಾವಲು ಸರ್ವೆ ನಂಬರುಗಳಲ್ಲಿ ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆಯದೇ ಮಂಜೂರು ಮಾಡಿರುವ ಪ್ರಕರಣಗಳು | ನಿಯಮ 108(ಐ) |
| (vi) | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | ನಿಯಮ 108(ಎಫ್) (v), (vi) |
| (vii) | ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | ನಿಯಮ 108(ಎಫ್)(i) |
| (viii) | **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| | ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | ಕಲಂ 128 |

**ಗೋಮಾಳ ಭೂಮಿಯಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು** ನಮೂನೆ 57 ರಲ್ಲಿ ಮಾತ್ರ ಇವುಗಳನ್ನು ಅನರ್ಹ ಎಂದು ಗುರುತಿಸಲಾಯಿತು ನಮೂನ 53/53ರಲ್ಲಿ ಕಲಂ 97(4) ರಂತೆ ಪರಿಗಣಿಸಲು ಅವಕಾಶ ಇರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮರುಪರಿಶೀಲನಗ ಶಿಫಾರಸು ಮಾಡಲಾಯಿತು

**ಭೂಸಕ್ರಮೀಕರಣ ಸಮಿತಿ ವರದಿ ಲಭ್ಯವಿಲ್ಲದ ಪ್ರಕರಣಗಳು** ಭೂ ಸಕ್ರಮೀಕರಣ ಸಮಿತಿ ನಡವಳಿಯಲ್ಲಿ ತಿದ್ದುಪಡಿ ಮಾಡಿ ಹೆಸರನ್ನು ಸೇರಿಸಿರುವ, ಸಮಿತಿಯ ತೀರ್ಮಾನಕ್ಕಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಹಕ್ಕುಪತ್ರ ನೀಡಿರುವ ಮತ್ತು ಸಮಿತಿಯಲ್ಲಿ ವಜಾ ಆಗಿ ಸಕ್ರಮ ಪ್ರಾಧಿಕಾರದಿಂದ ಮರುಪರಿಶೀಲನೆಗೆ ಆದೇಶವಾಗದ ಪ್ರಕರರಣಗಳನ್ನು ಮಾತ್ರ ಅನರ್ಹ ಎಂದು ಪರಿಗಣಿಸಲಾಯಿತು ಭೂ ಸಕ್ರಮೀಕರಣ ಸಮಿತಿಗೆ ಮಂಡಿಸದೇ / ಮಂಡಿಸದ ದಾಖಲೆ ಇಲ್ಲದೇ ಖಾತೆ ನಮೂದಿಸಿರುವ ಪ್ರಕರಣದಲ್ಲಿ ಕಡತವಿಲ್ಲದ ಪ್ರಕರಣವನ್ನು ಮಾತ್ರ ಅನರ್ಹ ಎಂದು ಗುರುತಿಸಲಾಯಿತು ಒಮ್ಮೆ ಕಡತದಲ್ಲಿ ಕಮಿಟಿಯ ಬಗ್ಗೆ ಮಾಹಿತಿ ಲಭ್ಯವಿದ್ದಲ್ಲಿ ಅವುಗಳನ್ನು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು. ಸಮಿತಿಯ ನಡವಳಿಯ ವಹಿಯ ನಕಲು ಲಭ್ಯವಿದ್ದಲ್ಲಿ ಸಹ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು

**ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆ ಮಾಡದೇ ಇರುವ ಪ್ರಕರಣಗಳು** ಇಂತಹ ಪ್ರಕರಣದಲ್ಲಿ ಮರುಪರಿಶೀಲನೆ ನಡೆಸಿ ದಾಖಲಾತಿ ಪರಿಶೀಲಿಸಿ ಅರ್ಹತಾ ದಿನಾಂಕದಂದು ಉಳುಮೆ ಮಾಡದ ಪ್ರಕರಣಗಳನ್ನು ಮಾತ್ರ ರದ್ದುಪಡಿಸಲು ಪ್ರಕರಣವನ್ನು ಮರುಪರಿಶೀಲಿಸಲು ಶಿಫಾರಸು ಮಾಡಲಾಯಿತು.

**ಅರ್ಹತಾ ದಿನಾಂಕದಂದು 18 ವರ್ಷ ಪೂರ್ಣಸದ ಪ್ರಕರಣಗಳು** ಅರ್ಜಿದಾರರ ವಯಸ್ಸಿನ ದಾಖಲೆ ಲಭ್ಯವಿದ್ದು ದಾಖಲಾತಿಯಂತೆ ಅರ್ಹತಾ ದಿನಾಂಕದಂದು 18 ವರ್ಷ ಪೂರ್ಣಸದ ಪ್ರಕರಣದಲ್ಲಿ ಮಾತ್ರ ಪ್ರಕರಣವನ್ನು ಅನರ್ಹ ಎಂದು ಗುರುತಿಸಲಾಯಿತು. ಅರ್ಜಿದಾರರು ಮೃತರಾಗಿ ವಾರಸುದಾರರಿಗೆ ಮಂಜೂರಾದ ಪ್ರಕರಣದಲ್ಲಿ ಸಹ ಅರ್ಜಿದಾರರ ವಯಸ್ಸನ್ನೇ ಪರಿಗಣಿಸಲಾಗಿದೆ. ದಾಖಲೆ ಲಭ್ಯವಿಲ್ಲದ ಪ್ರಕರಣದಲ್ಲಿ ದಾಖಲಾತಿ ಪಡೆದು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು.

**ಅರ್ಜಿ ವಹಿಯ ದಾಖಲಾತಿಗೂ ಮಂಜೂರಾತಿ/ಪಹಣಿ ನಮೂದಿಗೂ ವ್ಯತ್ಯಯ ಇರುವ ಪ್ರಕರಣಗಳು** ಇಂತಹ ಪ್ರಕರರಣಗಳಲ್ಲಿ ಹಲವು ವರ್ಷಗಳ ಹಿಂದೆ (2010) ಹಕ್ಕುಪತ್ರ ನೀಡಿರುವ ಪ್ರಕರಣದಲ್ಲಿ 2018 ರ ನಂತರ ಖಾತೆ ದಾಖಲಿಸಿರುವುದನ್ನು ಗಮನಿಸಿ, ಇಂತಹ ಪ್ರಕರಣದಲ್ಲಿ 2 ಸಲ ಪಹಣಿ ದಾಕಲಾಗದೇ ಇರುವ ಬಗ್ಗೆ ಖಚಿತಪಡಿಸಿಕೊಳ್ಳು ಶಿಫಾರಸು ಮಾಡಲಾಯಿತು. ಅರ್ಜಿ ವಹಿ ಮತ್ತು ಹಕ್ಕುಪತ್ರದಲ್ಲಿ ಸರ್ವೆ ನಂಬರು ಅಥವಾ ಗ್ರಾಮ ಬದಲಾವಣೆ ಆದಲ್ಲಿ ಸಹ ನಿಯಮಾನುಸಾರ ಮರುಪರಿಶೀಲಿಸಲು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಶಿಫಾರಸು ಮಾಡಲಾಯಿತು.

ಮೇಲಿನ Table 3 ರಲ್ಲಿ ಸೂಚಿಸಿರುವ ಕಾರ್ಯವಿಧಾನ ವೈಫಲ್ಯ ಪ್ರಕರಣದಲ್ಲಿ ತಹಶೀಲ್ದಾರರ / ಉಪವಿಭಾಗಾಧಿಕಾರಿಗಳ ಹಂತದಲ್ಲಿ ಸರಿಪಡಿಸಲು ಶಿಫಾರಸು ಮಾಡಲಾಯಿತು. ಇಂತಹ ಪ್ರಕರಣದಲ್ಲಿ ಇತರ ಯಾವುದೇ ಅನರ್ಹತೆ ಇಲ್ಲದೇ ಇದ್ದಲ್ಲಿ ತನಿಖಾ ತಂಡದ ಅಭಿಪ್ರಾಯದಂತೆ ರದ್ದತಿ ಅಥವಾ ಮರುಪರಿಶೀಲನೆ ಅಗತ್ಯ ಇರುವುದಿಲ್ಲ.

**<u>ಕಾರ್ಯವಿಧಾನ</u>** : ಮೊಟ್ಟಮೊದಲು ಈ ಅವಧಿಯಲ್ಲಿ ಮಂಜೂರು ಆಯ್ಕೆಯನ್ನು ಬಳಸಿ ನಮೂದಿಸಲಾದ ಮ್ಯುಟೇಶನ್‌ಗಳ ಪಟ್ಟಿಯನ್ನು ಭೂಮಿ ಉಸ್ತುವಾರಿ ಕೋಶದಿಂದ ಪಡೆಯಲಾಯಿತು. ತಾಲ್ಲೂಕಿಗೆ ಸಂಬಂಧಿಸಿದಂತೆ ಪರಿಶೀಲನಾ ಅವಧಿಯಲ್ಲಿ 3685 ನಮೂದುಗಳು ಇರುವುದನ್ನು ಗಮನಿಸಲಾಯಿತು. ಈ ಪೈಕಿ 1364 ಜಂಟಿಖಾತೆ ಇರುವುದರಿಂದ 18 ಸರಕಾರಿ ನಮೂದುಗಳು ಇರುವುದರಿಂದ ಹಾಗೂ 60 ಮರುಕಳಿಸಿದ ದಾಖಲೆಗಳು (Duplicate Entry) ಕಂಡುಬಂದಿರುವುದರಿಂದ ಅವುಗಳನ್ನು ಹೊರತುಪಡಿಸಿ **2243** ಕಡತಗಳ ಪರಿಶೀಲನೆ ಅಗತ್ಯವಿರುವುದನ್ನು ಗಮನಿಸಲಾಯಿತು ವಿವಿಧ ಇಲಾಖೆಯಿಂದ ಪರಿಶೀಲನೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಈ ಕೆಳಗಿನಂತೆ ಕೋರಿಕೆಯನ್ನು ನೀಡಲಾಯಿತು. **(Table 4)**

| **ಅಗತ್ಯ ಮಾಹಿತಿ/ದಾಖಲಾತಿ ಮತ್ತು ಸಂಪನ್ಮೂಲ** | **ಒದಗಿಸಬೇಕಾದ ಇಲಾಖೆ** |
|---|---|
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳಿಗೆ ಸಂಬಂಧಿಸಿದಂತೆ (ಪಟ್ಟಿಯನ್ನು ಮಿಂಚಂಚೆಗೆ ಲಗತ್ತಿಸಿದೆ) ಆಕಾರಬಂದು ವಿಸ್ತೀರ್ಣ, ಜಮೀನಿನ ತರಹೆ (ಕದರ್ಮ), ಪೈಕಿ ಪಹಣಿಯೆ? ಕರ್ನಾಟಕ ಭೂಕಂದಾಯ ಅಧಿನಿಯಮ ಸೆಕ್ಷನ್ 94(A)(4) ನಂತೆ ಪ್ರತಿಬಂಧಿತ ಅಂತರದೊಳಗೆ ಇರುವುದೆ? ಎಂಬ ಮಾಹಿತಿ | ಮೋಜಿಣಿ ಇಲಾಖೆ |
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳು ಯಾವುದೇ ತರಹದ ಅರಣ್ಯದ ವ್ಯಾಪ್ತಿಗೆ ಬರುವುದೇ ಎಂಬ ಮಾಹಿತಿ, ವಿಸ್ತೀರ್ಣದೊಂದಿಗೆ | ಅರಣ್ಯ ಇಲಾಖೆ |
| ಅಮೃತ ಮಹಲ್ ಕಾವಲ್ ಒಳಗೊಂಡಂತೆ ಇಲಾಖೆಗೆ ಮೀಸಲಿಟ್ಟಿರುವ ಭೂಮಿಯ ಮಾಹಿತಿ | ಪಶುಸಂಗೋಪನ ಇಲಾಖೆ |
| 1. ಮಿಂಚಂಚೆಯಲ್ಲಿ ರವಾನಿಸಿರುವ ಪಟ್ಟಿಯಂತೆ ಕಡತಗಳೊಂದಿಗೆ ಸಂಬಂಧಿಸಿದ ಸಿಬ್ಬಂದಿಯನ್ನು ನಿಯೋಜಿಸುವುದು<br>2. ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪೈಕಿ ಪಹಣಿಗಳ ಮಾಹಿತಿಯನ್ನು ಪಡೆದು, ಒಗ್ಗೂಡಿಸಿ ಪಹಣಿ ಕಲಂ 3 ರ ಮಾಹಿತಿಯನ್ನು ಒದಗಿಸುವುದು.<br>3. ಸಂಬಂಧಿಸಿದ ಮ್ಯುಟೇಶನ್ನಳಿಗೆ ಭೂಮಿ ತಂತ್ರಾಶದಲ್ಲಿ ಲಗತ್ತಿಸಿರುವ ದಾಖಲೆಯ ಪ್ರತಿಯನ್ನು ಮುದ್ರಿಸಿ ಪರಿಶೀಲನೆ ಕಡತಸಂಖ್ಯೆ ನಮೂದಿಸಿ ನೀಡುವುದು.<br>4. ನಮೂನೆ 50 ಮತ್ತು 53 ವಹಿ.<br>5. ತನಿಖೆಗೆ ಸಂಬಂಧಿಸಿದಂತೆ ಬೂ ಸಕ್ರಮೀಕರಣ ಸಮಿತಿಯ ನಡವಳಿಗಳು ಮತ್ತು ಸಂಬಂಧಿಸಿದ ಮಾಹಿತಿ.<br>6. ಪ್ರತಿ ಕಡತದಲ್ಲಿ ಕಾರ್ಯನಿರ್ವಹಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು. ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಮಾಹಿತಿ<br>7. 2008 ರಿಂದ 2023 ರ ತನಕ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರರ | ತಹಶೀಲ್ದಾರರು |

ಮತ್ತು ನಿಯೋಜಿತ ಸಕ್ರಮೀಕರಣ ಸಮಿತಿಯ ಮಾಹಿತಿ

ಪರಿಶೀಲನೆಗೆ ಈ ಕೆಳಗಿನ ಅಗತ್ಯ ಸಾಮಗ್ರಿ ಹಾಗೂ ಮಾನವ ಸಂಪನ್ಮೂಲವನ್ನು ಒದಗಿಸಲು ಜಿಲ್ಲಾಡಳಿತಕ್ಕೆ ಮನವಿಯನ್ನು ನೀಡಲಾಯಿತು

13 ಅಧಿಕಾರಿಗಳು ಕುಳಿತು ಪರಿಶೀಲನೆ ಕೆಲಸ ಕೈಗೊಳ್ಳಲು ಸೂಕ್ತ ಸ್ಥಳಾವಕಾಶ, 6 ಗಣಕಯಂತ್ರ (ಇಂಟರನೆಟ್ ಮತ್ತು ಅನಿಯಮಿತ ವಿದ್ಯುತ್ ಸಂಪರ್ಕದೊಂದಿಗೆ) 6 ಜನ ನುರಿತ ಮೀಸಲಾದ DEOs, A4 Stickers, Pen, Pencil, Scale, papers, 2 high speed printers, ಕುಡಿಯುವ ನೀರು ಮತ್ತು 2 ಡಿ ದರ್ಜೆ ನೌಕರರು

ತನಿಖೆಗೆ ಒಳಪಡುವ ಎಲ್ಲ ಪ್ರಕರಣಗಳಿಗೆ ಗುರುತಿಸಲು ಪ್ರತ್ಯೇಕ ಕಡತಸಂಖ್ಯೆಯನ್ನು ನೀಡಿ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನ ವಿಭಾಗದಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ ಕ್ರೋಢೀಕರಿಸಲು ತೀರ್ಮಾನಿಸಲಾಯಿತು

- ಕಡತದಲ್ಲಿ ಪರಿಶಿಲಿಸಬೇಕಾದ ಅಂಶಗಳು.
- ಭೂಮಿಯ ತರಹೆಗೆ ಮತ್ತು ನಿಗದಿತ ಅಂತರಕ್ಕೆ ಸಂಬಂಧಿಸಿದಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪಡೆದ ಮಾಹಿತಿ.
- ಭೂದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ತಹಶೀಲ್ದಾರರಿಂದ ಪಡೆದ ಮಾಹಿತಿಯನ್ನು ತಾಳೆಮಾಡಿ ಪಹಣಿ ಮತ್ತು ಆಕಾರಬಂದಿಗೆ ವ್ಯತ್ಯಾಸವಿರುವ ಸರ್ವೆನಂಬರುಗಳ ಮಾಹಿತಿ.
- ಅರಣ್ಯ ಇಲಾಖೆಗೆ ಸಂಬಂಧಿಸಿದ ಭೂಮಿಯ ಮಾಹಿತಿ.
- ಅರ್ಜಿ ವಹಿ ಪರಿಶೀನೆಗೆ ಸಂಬಂಧಿಸಿದ ಮಾಹಿತಿ.
- ಸಮಿತಿ ನಡವಳಿ ಪರಿಶೀಲನೆಗೆ ಸಂಬಂಧಿಸಿದ ಮಾಹಿತಿ

ಕಡತದಲ್ಲಿ ಲಭ್ಯವಿರುವ ಮಾಹಿತಿಯನ್ನು ಕಲೆಹಾಕಲು ಈ ಕೆಳಗಿನ ಚೆಕ್‌ಲಿಷ್ಟ್ ಬಳಸಿ ಮಾಹಿತಿಯನ್ನು ಕಲೆಹಾಕಿ ನಂತರ ಗಣಕೀಕೃತಗೊಳಿಸಲಾಯಿತು. **(Table 5)**

**ಕಡೂರು ತಾಲ್ಲೂಕಿನ ಸಕ್ರಮ ಅರ್ಜಿಗಳ ಪರಿಶೀಲನಾ ಚೆಕ್ ಲಿಸ್ಟ್ : ಕಡತ ಪರಿಶೀಲನೆ**

| | | |
|---|---|---|
| 1 | ಪರಿಶೀಲನ ಕಡತ ಸಂಖ್ಯೆ | |
| 2 | ಪರಿಶೀಲಿಸಿದವರು | |
| 3 | ಈಗಾಗಲೇ ಸಮಿತಿಯಲ್ಲಿ ತಿರಸ್ಕೃತಗೊಂಡು ಸಕ್ಷಮಪ್ರಾಧಿಕಾರದಿಂದ ಮರಳಿಸಿರುವ ದಿನಾಂಕ | |
| 4 | ಅರ್ಹತಾ ದಿನಾಂಕಕ್ಕೆ ಮುಂಚೆ ವಯಸ್ಕರಾಗಿರುವರೇ? (18 ವರ್ಷ) (ಹೌದು / ಇಲ್ಲ / ದಾಖಲೆ ಲಭ್ಯವಿಲ್ಲ) | |
| 5 | ಕುಟುಂಬದ ವರ್ಗದವರು ಹೊಂದಿರುವ ಒಟ್ಟು ಕ್ಷೇತ್ರ | |
| 6 | ಅರ್ಜಿದಾರರ ಜಾತಿ (ಪ.ಜಾ/ಪ.ಪಂ/ಇತರೇ/ನಮೂದಿಸಿಲ್ಲ) | |
| 7 | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕಕ್ಕಿಂತ ಮುಂಚೆ ಸಾಗುವಳಿ ಮಾಡುತ್ತಿದ್ದಾರೆಯೇ? (ಹೌದು / ಇಲ್ಲ / ನಮೂದಿಸಿಲ್ಲ) | |

| | | |
|---|---|---|
| 9 | ಗ್ರಾಮ ಆಡಳಿತಾಧಿಕಾರಿಯ ವರದಿ ಸಕಾರಾತ್ಮಕವಾಗಿರುವುದೆ? (ಹೌದು/ಇಲ್ಲ/ ವರದಿ ಇಲ್ಲ) | |
| 10 | ರಾಜಸ್ವ ನಿರೀಕ್ಷಕರ ಅಭಿಪ್ರಾಯ. (ಹೌದು/ಇಲ್ಲ/ ವರದಿ ಇಲ್ಲ) | |
| 11 | ನಕಾಶೆ ತಯಾರಿಸಿದ ಭೂಮಾಪಕರ ಹೆಸರು | |
| 12 | ಹಾಗಿದ್ದಲ್ಲಿ ಸರ್ವೆ ನಕಾಶೆಯಂತೆ ಅನುಭವದಲ್ಲಿರುವ ಕ್ಷೇತ್ರ | |
| 13 | ವಿಷಯ ನಿರ್ವಾಹಕರು ಸಕಾರಾತ್ಮಕ ಟಿಪ್ಪಣಿ ಮಂಡಿಸಿರುವರೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 14 | ಶಿರಸ್ತೇದಾರರು ಸಕಾರಾತ್ಮಕ ಟಿಪ್ಪಣಿ ಮಂಡಿಸಿರುವರೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 15 | ತಹಸೀಲ್ದಾರರು ಕಡತವನ್ನು ಅನುಮೋದಿಸಿ ಕಡತವನ್ನು ಸಮಿತಿಯ ಮುಂದೆ ಹಾಜರುಪಡಿಸುವುದಕ್ಕೆ ಒಪ್ಪಿದ್ದಾರೆಯೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 16 | ಸಮಿತಿಯ ದಿನಾಂಕ | |
| 17 | ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಿದ ತಿಳುವಳಿಕೆ ಪತ್ರ / ನೋಟೀಸಿನ ಪತ್ರ ಇದೆಯೇ? (ಇದೆ/ಇಲ್ಲ) | |
| 18 | ಹಣ ಸಂದಾಯ ಮಾಡಿದ ಚಲನ್ ಇದೆಯೇ? (ಇದೆ / ಇಲ್ಲ) | |
| 19 | ಸಾಗುವಳಿ ಚೀಟಿ ಕ್ರಮಬದ್ಧವಾಗಿದೆಯೇ? (ಹೌದು/ಇಲ್ಲ) | |
| 20 | ಸಾಗುವಳಿಚೀಟಿಯಂತೆ ಮಂಜೂರಾತಿ ವಿಸ್ತೀರ್ಣ | |
| | ಸಾಗುವಳಿ ಚೀಟಿ ದಿನಾಂಕ | |
| | ತನಿಖಾ ತಂಡದ ಸದಸ್ಯರ ಅಭಿಪ್ರಾಯ. ಯೋಗ್ಯವಿಲ್ಲಾ ಎಂದಾದಲ್ಲಿ ಕಾರಣ ನೀಡುವುದು. (Tick appropriate)<br>1. ಕುಟುಂಬವು ಹೆಚ್ಚುವರಿ ಜಮೀನು ಹೊಂದಿರುತ್ತದೆ<br>2. ಅರ್ಜಿದಾರರು ಅರ್ಹತಾ ದಿನಾಂಕದಂದು 18 ವರ್ಷ ಪೂರೈಸಿರುವುದಿಲ್ಲ<br>3. ಜುಬಾನೆ ಹಿಸ್ಸೆ/ಅನಧಿಕೃತ ವಿಭಾಗ<br>4. ಸರ್ವೆ ನಂಬರು ಬದಲಾಯಿಸಲಾಗಿದೆ<br>5. ಕಛೇರಿ ಟಿಪ್ಪಣಿ ಲಭ್ಯವಿಲ್ಲ / ಅಪೂರ್ಣ<br>6. ಅರ್ಹತಾ ದಿನಾಂಕಕ್ಕಿಂತ ಮುಂಚೆ ಸಾಗುವಳಿ ಇಲ್ಲ<br>7. ರಾಜಸ್ವ ನಿರೀಕ್ಷಕರ ಸಕಾರಾತ್ಮಕ ವರದಿ ಇಲ್ಲ<br>8 ಸರ್ವೆ ನಕಾಶೆ ಇಲ್ಲ<br>9 ಹಣ ಸಂದಾಯ ರಸೀದಿ ಇಲ್ಲ<br>10. ಸಾಗುವಳಿ ಚೀಟಿ ಕ್ರಮಬದ್ಧವಾಗಿಲ್ಲ<br>11. ಇತರೇ(ನಮೂದಿಸಿ) | |

ದಿನಾಂಕ: ಪರಿಶೀಲಿದವರ ಸಹಿ

**ಇಷ್ಟು ಅಧಿಕಪ್ರಮಾಣದ ಪರಿಶೀಲನೆಯನ್ನು ಕೈಗೊಳ್ಳುವಾಗ ವರದಿಯನ್ನು ಕ್ರೋಢೀಕರಿಸಲು ಅಗತ್ಯವಾಗುವಂತೆ ಪೂರ್ವನಿಯೋಜಿತ ಅಂಕಣಗಳನ್ನು ಹೊಂದಿದ (drop down value) google spreadsheet ತಯಾರಿಸಲಾಯಿತು.**

ಈ ಕೆಳಗಿನ ಅಂಕಣಗಳಲ್ಲಿ ಮಾಹಿತಿ ಕಲೆಹಾಕಲಾಯಿತು ಮಾಹಿತಿಯ ಮೂಲ ಮತ್ತು ಕಲೆಹಾಕಿದ ಉದ್ದೇಶ ಈ ಕೆಳಗಿನಂತೆ ಇರುತ್ತದೆ. **(Table 6)**

| **ಕಲಂ ಸಂಖ್ಯೆ** | **ಮಾಹಿತಿ** | **ಪೂರ್ವನಿಯೋಜಿತ ಮೌಲ್ಯ** | **ಮಾಹಿತಿಯ ಮೂಲ** | **ಉದ್ದೇಶ** |
|---|---|---|---|---|
| A | ಕಡತ ಸ್ವೀಕರಿಸಿದೆ | ಹೌದು/ಇಲ್ಲ/ | ಹೊಸ ನಮೂದು | ಪರಿಶೀಲನೆ ಸಮಿತಿಯು ಸ್ವೀಕರಿಸಿದ |

| | | | | |
|---|---|---|---|---|
| | | ಅಗತ್ಯವಿಲ್ಲ | | ಕಡತದ ಮಾಹಿತಿ ಸಂಗ್ರಹಣೆ |
| B | ಮಾಹಿತಿ ದಾಖಲಿಸಿದ DEO | ನಿಯೋಜಿತ DEO ಹೆಸರುಗಳು | ಹೊಸ ನಮೂದು | ಚೆಕ್ ಲಿಷ್ಟಿನ ಮಾಹಿತಿಯನ್ನು ಗಣಕೀಕೃತ ಗೊಳಿಸಿದ DEO ಮಾಹಿತಿ ಸಂಗ್ರಹಿಸುವುದು |
| C | ಪರಿಶೀಲಿಸಿದ ಅಧಿಕಾರಿ | ನಿಯೋಜಿತ ಅಧಿಕಾರಿಗಳ ಹೆಸರು | ಹೊಸ ನಮೂದು | ಕಡತ ಪರಿಶೀಲಿಸಿದ ಅಧಿಕಾರಿಯ ಮಾಹಿತಿ ಸಂಗ್ರಹಿಸುವುದು |
| D | ಪರಿಶೀಲನ ಕಡತ ಸಂಖ್ಯೆ | ಭೂಮಿ ಕೋಶದಿಂದ ಪಡೆದ ಮಾಹಿತಿಗೆ ಪರಿಶೀಲನೆಗೆಂದು ನೀಡಿದ ಸಂಖ್ಯೆ | ಹೊಸ ನಮೂದು | ಪರಿಶೀಲಿಸುವ ದಾಖಲಾತಿಗೆ ಗುರುತಿಗಾಗಿ ನೀಡಿರುವುದು |
| E | hobli_name | ಹೋಬಳಿ ಹೆಸರು | ಭೂಮಿ ಉಸ್ತುವಾರಿ ಕೋಶ | ಹೋಬಳಿ ಹೆಸರು ಗುರುತಿಸುವುದು |
| F | village_name | ಕಂದಾಯ ಗ್ರಾಮದ ಹೆಸರು | ಭೂಮಿ ಉಸ್ತುವಾರಿ ಕೋಶ | ಕಂದಾಯ ಗ್ರಾಮ ಗುರುತಿಸುವುದು |
| G | reg_order_no | ತಂತ್ರಾಂಶದಲ್ಲಿ ಅಳವಡಿಸಿರುವಂತ ಕಡತ ಸಂಖ್ಯೆ | ಭೂಮಿ ಉಸ್ತುವಾರಿ ಕೋಶ | ಮಾಹಿತಿ ಕಲೆಹಾಕಲು ಬಳಸುವ ಅರ್ಜಿದಾರರ ಕಡತ ಸಂಖ್ಯೆ |
| H | Form Type | 50,53,57, Other | ಕಡತ ಸಂಖ್ಯೆಯಿಂದ ಪಡೆದಿರುವ ಮಾಹಿತಿ | ಅರ್ಜಿ ನಮೂನೆಯನ್ನು ಗುರುತಿಸಲು |
| I | mr_no | ಮಂಜೂರು ಪಹಣಿ ನಮೂದಿಸಿದ ಮ್ಯುಟೇಶನ್ ಸಂಖ್ಯೆ | ಭೂಮಿ ಉಸ್ತುವಾರಿ ಕೋಶ | ಮಂಜೂರು ಪಹಣಿ ನಮೂದಿಸಿದ ಮ್ಯುಟೇಶನ್ ಸಂಖ್ಯೆ |
| J | dt_appr_sir | ಮ್ಯುಟೇಶನ್ ಅಂಗೀಕರಿಸಿದ ದಿನಾಂಕ | ಭೂಮಿ ಉಸ್ತುವಾರಿ ಕೋಶ | ಮ್ಯುಟೇಶನ್ ಅಂಗೀಕರಿಸಿದ / ಪಹಣಿ ನಮೂದಾದ ದಿನಾಂಕ ಗುರುತಿಸಲು |
| K | New Owner | ಫಲಾನುಭವಿಯ ಹೆಸರು | ಭೂಮಿ ಉಸ್ತುವಾರಿ ಕೋಶ | ಮಂಜೂರಾತಿ ಪಡೆದ ಫಲಾನುಭವಿಯನ್ನು ಗುರುತಿಸುವುದು |
| L | Relative Name | ಫಲಾನುಭವಿಯ ತಂದೆ / ಗಂಡನ ಹೆಸರು | ಭೂಮಿ ಉಸ್ತುವಾರಿ ಕೋಶ | ಮಂಜೂರಾತಿ ಪಡೆದ ಫಲಾನುಭವಿಯನ್ನು ಗುರುತಿಸುವುದು |
| M | new_acre | ಮಂಜೂರಾತಿ ವಿಸ್ತೀರ್ಣ (ಎಕರೆಗಳು) | ಭೂಮಿ ಉಸ್ತುವಾರಿ ಕೋಶ | ಮಂಜೂರು ಮಾಡಿದ ಒಟ್ಟೂ ವಿಸ್ತೀರ್ಣ ಗುರುತಿಸುವುದು |
| N | new_gunta | ಮಂಜೂರಾತಿ ವಿಸ್ತೀರ್ಣ (ಗುಂಟೆಗಳು) | ಭೂಮಿ ಉಸ್ತುವಾರಿ ಕೋಶ | ಮಂಜೂರು ಮಾಡಿದ ಒಟ್ಟೂ ವಿಸ್ತೀರ್ಣ ಗುರುತಿಸುವುದು |
| O | survey_no | ಭೂಮಿ ಕೋಶದಿಂದ | ಭೂಮಿ ಉಸ್ತುವಾರಿ | ಮಂಜೂರಾದ ಸರ್ವೆ ನಂಬರು |

| | | | | |
|---|---|---|---|---|
| | | ಪಡೆದ ಮಾಹಿತಿ | ಕೋಶ | ಗುರುತಿಸುವುದು |
| P | Surnoc | ಭೂಮಿ ಕೋಶದಿಂದ ಪಡೆದ ಮಾಹಿತಿ | ಭೂಮಿ ಉಸ್ತುವಾರಿ ಕೋಶ | ಮಂಜೂರಾದ ಸರ್ವೆ ನಂಬರು ಗುರುತಿಸುವುದು |
| Q | hissa_no | ಭೂಮಿ ಕೋಶದಿಂದ ಪಡೆದ ಮಾಹಿತಿ | ಭೂಮಿ ಉಸ್ತುವಾರಿ ಕೋಶ | ಮಂಜೂರಾದ ಸರ್ವೆ ನಂಬರು ಗುರುತಿಸುವುದು |
| R | ಅರ್ಜಿ ದಾರರ ಹೆಸರು ಮತ್ತು ತಂದೆಯ ಹೆಸರು | ಇಲ್ಲ | ಅರ್ಜಿ ವಹಿ | ಅರ್ಜಿ ವಹಿ ಮತ್ತು ಮಂಜೂರಾತಿದಾರರ ಹೆಸರು ತಾಳೆ ಇರುವ ಬಗ್ಗೆ ಗುರುತಿಸಲು |
| S | ಶರಾ | ಗ್ರಾಮ ಬದಲಾಗಿದೆ / ಸರ್ವೆ ನಂಬರು ಬದಲಾಗಿದೆ / ಈಗಾಗಲೇ ವಜಾಗೊಂಡಿರುತ್ತದೆ / ಈಗಾಗಲೇ ಮಂಜೂರಾಗಿರುತ್ತದೆ / ವಹಿಯಲ್ಲಿ ತಿದ್ದುಪಡಿ ಮಾಡಲಾಗಿದೆ | ಅರ್ಜಿ ವಹಿ | ಅರ್ಜಿ ವಹಿಯನ್ನು ಪರಿಶೀಲಿಸಿ ಅನರ್ಹತೆಯನ್ನು ಕಂಡುಹಿಡಿಯುವುದು |
| T | ಅರ್ಜಿ ಮತ್ತು ಮಂಜೂರಾತಿ ಹೆಸರು ತಾಳೆ | ಇದೆ / ಇಲ್ಲ / ಶಿಥಿಲಗೊಂಡಿದೆ | ಹೊಸ ನಮೂದು | ಅರ್ಜಿ ವಹಿ ಮತ್ತು ಮಂಜೂರಾತಿ ಹೆಸರು ಪರಿಶೀಲಿಸಿ ತಾಳೆ ಇರುವ ಬಗ್ಗೆ ನಮೂದಿಸುವುದು |
| U | ಪಹಣಿ ಪತ್ರಿಕೆ ಕ್ಷೇತ್ರ | | ತಹಶೀಲ್ದಾರರಿಂದ ಪಡೆದ ಮಾಹಿತಿ | ಪಹಣಿ ಮತ್ತು ಆಕಾರಬಂದ ವಿಸ್ತೀರ್ಣ ಪರಿಶೀಲಿಸುವುದು |
| V | ಆಕಾರಬಂದ್ ಕ್ಷೇತ್ರ | | ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪಡೆದ ಮಾಹಿತಿ | ಪಹಣಿ ಮತ್ತು ಆಕಾರಬಂದ ವಿಸ್ತೀರ್ಣ ಪರಿಶೀಲಿಸುವುದು |
| W | ಆಕಾರಬಂದು ಮತ್ತು ಪಹಣಿಗೆ ತಾಳೆ ಇರುವ ಬಗ್ಗೆ | | ಪಹಣಿ ಮತ್ತು ಆಕಾರಬಂದ ಮಾಹಿತಿ | ಆಕಾರಬಂದಿನಂತೆ ವಿಸ್ತೀರ್ಣ ಲಭ್ಯವಿಲ್ಲದೇ ಮಂಜೂರಾತಿ ನಡೆದಿದ್ದಲ್ಲಿ ಪರಿಶೀಲಿಸುವ ಬಗ್ಗೆ |
| X | ಸರ್ವೆ ದಾಖಲೆಯಂತೆ ಜಮೀನಿನ ತರಹೆ | | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ಮಾಹಿತಿ | ಮಂಜೂರಾತಿಗೆ ಅನರ್ಹ ಜಮೀನನ್ನು ಗುರುತಿಸಲು |
| Y | ಪೈಕಿ ಸರ್ವೆ ನಂಬರೇ? | ಹೌದು / ಇಲ್ಲ | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ | ವಿಸ್ತೀರ್ಣವೇ ಲಭ್ಯವಿಲ್ಲದೇ ಮಂಜೂರಾತಿಯಾಗಿದ್ದಲ್ಲಿ ಕಂಡು ಹಿಡಿಯಲು |

| | | | | |
|---|---|---|---|---|
| | | | ಮಾಹಿತಿ | |
| Z | ನಿರ್ಬಂಧಿತ ದೂರದಲ್ಲಿ ಇರುವುದೇ? | ಹೌದು / ಇಲ್ಲ | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ಮಾಹಿತಿ | ಕಲಂ 94 (ಎ) (4) ಉಲ್ಲಂಘನೆ ಕಂಡುಹಿಡಿಯಲು |
| AA | ಸಕ್ಷಮ ಪ್ರಾಧಿಕಾರದಿಂದ ಹಿಂದಿರುಗಿಸಿದ ದಿನಾಂಕ? | | ಕಡತದಲ್ಲಿ ಲಭ್ಯವಿರುವ ದಾಖಲಾತಿಯಂತೆ | ಅರ್ಜಿ ವಹಿಯಲ್ಲಿ ವಜಾ ಎಂದು ನಮೂದಾಗಿರುವ ಪ್ರಕರಣದಲ್ಲಿ ಮರಳಿ ಮಂಜೂರಾಗಿದ್ದಲ್ಲಿ ಪರಿಶೀಲಿಸಲು, ಮರಳಿಸಿದ ಅಧಿಕಾರಿಯನ್ನು ಗುರುತಿಸಲು |
| AB | ಅರ್ಜಿತಾ ದಿನಾಂಕಕ್ಕೆ ಮುಂಚೆ ವಯಸ್ಕರಾಗಿರುವರೇ ? (18 ವರ್ಷ) | ಹೌದು / ಇಲ್ಲ / ದಾಖಲೆ ಲಭ್ಯವಿಲ್ಲ | ಕಡತದಲ್ಲಿ ಲಭ್ಯವಿರುವ ದಾಖಲಾತಿಯಂತೆ | ನಿಯಮ 108(ಎಫ್)(i) ಉಲ್ಲಂಘನೆ ಕಂಡುಹಿಡಿಯಲು |
| AC | ಪಹಣಿಯಂತೆ ಜಮೀನಿನ ತರಹೆ | | ಭೂಮಿ ಉಸ್ತುವಾರಿ ಕೋಶದ ಮಾಹಿತಿಯಂತೆ | ಮೋಜಣಿ ದಾಖಲೆಯೊಂದಿಗೆ ತಾಳೆ ಮಾಡಿ ಮಂಜೂರಾತಿಗೆ ಅನರ್ಹ ಜಮೀನಿನ ತರಹೆಯನ್ನು ಪರಿಶೀಲಿಸಲು |
| AD | ಅರಣ್ಯ ಜಮೀನು | Section 4 / Deemed Forest /As per revenue record / reserve forest / protected forest / village forest / state forest / ಇಲ್ಲ | ಅರಣ್ಯ ಇಲಾಖೆಯಿಂದ ಪಡೆದ ಮಾಹಿತಿಯಂತೆ | ಅರಣ್ಯ ಭೂಮಿಯಲ್ಲಿ ನೀಡಿದ / ಅರಣ್ಯ ಅಭಿಪ್ರಾಯವಿಲ್ಲದೇ ನೀಡಿದ ಮಂಜೂರಾತಿಯನ್ನು ಕಂಡುಹಿಡಿಯಲು |
| AE | ಪೂರ್ಣ /ಭಾಗಶಃ ಅರಣ್ಯ | ಪೂರ್ಣ / ಭಾಗಶಃ / ಜಾಸ್ತಿ / ಇಲ್ಲ | ಅರಣ್ಯ ಇಲಾಖೆಯ ವಿಸ್ತೀರ್ಣವನ್ನು ಆಕಾರಬಂದಿನ ವಿಸ್ತೀರ್ಣಕ್ಕೆ ತಾಳೆ ಮಾಡಿ | ಸರ್ವೆ ನಂಬರಿನಲ್ಲಿ ಅರಣ್ಯ ವಿಸ್ತೀರ್ಣ ಕಂಡುಹಿಡಿಯಲು |
| AF | ಸರ್ಕಾರಿ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನೇ? | ಹೌದು / ಇಲ್ಲ | ಪಹಣಿಯ ನಮೂದಿನಂತೆ | ನಿಯಮ 108(ಐ) ನಂತೆ ಅನರ್ಹ ಪ್ರಕರಣ ಕಂಡುಹಿಡಿಯಲು |
| AG | ಅಮೃತ ಮಹಲ್ ಕಾವಲು ಪ್ರದೇಶವೇ? | ಹೌದು / ಇಲ್ಲ | ಪಶುಸಂಗೋಪನೆ ಇಲಾಖೆಯ ಮಾಹಿತಿಯಂತೆ | ನಿಯಮ 108(ಐ) ನಂತೆ ಅನರ್ಹ ಪ್ರಕರಣ ಕಂಡುಹಿಡಿಯಲು |

| | | | | |
|---|---|---|---|---|
| AH | ಕುಟುಂಬದ ವರ್ಗದವರು ಹೊಂದಿರುವ ಒಟ್ಟು ಕ್ಷೇತ್ರ | | ಗ್ರಾಮ ಲೆಕ್ಕಿಗರು ನೀಡಿದ ವರದಿಯಂತೆ (ಕಡತ) | ಕಲಂ 94(ಎ) (4) ಉಲ್ಲಂಘನೆ ಪರಿಶೀಲಿಸಲು |
| AI | ಅರ್ಜಿದಾರರ ಜಾತಿ | ಪ.ಜಾ / ಪ.ಪಂ / ಇತರೆ / ದಾಖಲೆ ಲಭ್ಯವಿಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಜಿ), 108(ಎಸ್) ಉಲ್ಲಂಘನೆ ಪ್ರಕರಣ ಪತ್ತುಹಚ್ಚಲು |
| AJ | ಅರ್ಹತಾ ದಿನಾಂಕದಂತೆ ಸಾಗುವಳಿ | ಇದೆ / ಇಲ್ಲ / ನಮೂದಿಸಿಲ್ಲ | ಗ್ರಾಮ ಆಡಳಿತಾಧಿಕಾರಿ ವರದಿಯಂತೆ | ನಿಯಮ 108(ಎಫ್) (v), (vi) ಉಲ್ಲಂಘನೆ ಕಂಡುಹಿಡಿಯಲು |
| AK | ಗ್ರಾಮ ಆಡಳಿತಾಧಿಕಾರಿ ವರದಿ | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AL | ಗ್ರಾಮ ಆಡಳಿತಾಧಿಕಾರಿಯ ಹೆಸರು | | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AM | ರಾಜಸ್ವ ನಿರೀಕ್ಷಕರ ವರದಿ | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AN | ರಾಜಸ್ವ ನಿರೀಕ್ಷಕರ ಹೆಸರು | | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AO | ನಕ್ಷೆ ತಯಾರಿಸಿದ ಭೂಮಾಪಕರು | ತಾಲ್ಲೂಕಿನ ಭೂಮಾಪಕರ ಹೆಸರು | ಕಡತದಲ್ಲಿರುವ ದಾಖಲಾತಿಯಂತೆ | ನಿರ್ಬಂಧಿತ ದೂರ ಮತ್ತು ಅನರ್ಹ ಭೂಮಿ ತರಹೆಯ ಪ್ರಕರಣದಲ್ಲಿ ನಕ್ಷೆ ನೀಡಿದ ಭೂಮಾಪಕರನ್ನು ಗುರುತಿಸಲು |
| AP | ನಕ್ಷೆಯಂತೆ ವಿಸ್ತೀರ್ಣ | | ಕಡತದಲ್ಲಿರುವ ದಾಖಲಾತಿಯಂತೆ | ಮಂಜೂರಾತಿ ವಿಸ್ತೀರ್ಣ, ಸಮಿತಿ ಶಿಫಾರಸು ಮತ್ತು ಹಕ್ಕುಪತ್ರ ವಿಸ್ತೀರ್ಣ ತಾಳೆ ಮಾಡಲು |
| AQ | ವಿಷಯ ನಿರ್ವಾಹಕರ ಟಿಪ್ಪಣಿ (ಸಮಿತಿಗೆ) | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AR | ವಿಷಯ ನಿರ್ವಾಹಕರ ಹೆಸರು | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AS | ಶಿರಸ್ತೇದಾರರ ಟಿಪ್ಪಣಿ (ಸಮಿತಿ ) | ಸಕಾರಾತ್ಮಕ / ನಕಾರಾತ್ಮಕ / | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |

| | | | | |
|---|---|---|---|---|
| | | ಲಭ್ಯವಿಲ್ಲ | | |
| AT | ಶಿರಸ್ತೇದಾರರ ಹೆಸರು | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾರಿಗಳನ್ನು ಕಂಡುಹಿಡಿಯಲು |
| AU | ತಹಶೀಲ್ದಾರರ ಟಿಪ್ಪಣಿ (ಸಮಿತಿಗೆ) | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾರಿಗಳನ್ನು ಕಂಡುಹಿಡಿಯಲು |
| AV | ಸಮಿತಿಯ ದಿನಾಂಕ | | ಕಡತದಲ್ಲಿ ಲಭ್ಯವಿರುವ ದಾಖಲೆಯಂತೆ | ಮಂಜೂರಾತಿಗೆ ಶಿಫಾರಸು ಮಾಡಿದ ತಹಶೀಲ್ದಾರರ, ಸಮಿತಿ ಸದಸ್ಯರ ಮತ್ತು ಅಧ್ಯಕ್ಷರ ಮಾಹಿತಿ ಪಡೆಯಲು |
| AW | ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು (ಹಕ್ಕುಪತ್ರಕ್ಕೆ) | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾರಿಗಳನ್ನು ಕಂಡುಹಿಡಿಯಲು |
| AX | ಟಿಪ್ಪಣಿ ಮಂಡಿಸಿದ ಶಿರಸ್ತೇದಾರರು (ಹಕ್ಕುಪತ್ರಕ್ಕೆ) | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾರಿಗಳನ್ನು ಕಂಡುಹಿಡಿಯಲು |
| AY | ನಡವಳಿ ಪುಸ್ತಕದಲ್ಲಿ ನಮೂದು | ಇದೆ / ಇಲ್ಲ / ಕ್ರಮಬದ್ಧವಾಗಿಲ್ಲ | ನಡವಳಿ ಪುಸ್ತಕ ಪರಿಶೀಲಿಸಿ | ನಿಯಮ 108(ಡಿ) ಉಲ್ಲಂಘನೆ ಮತ್ತು ಕಲಂ 192 (ಎ) (3) ಪ್ರಕರಣ ಕಂಡುಹಿಡಿಯಲು |
| AZ | ಕಾರಣಗಳು | ಸಮಿತಿಯಲ್ಲಿ ವಜಾ ಆಗಿದೆ / ಶಿಫಾರಸಿಗಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಹಕ್ಕುಪತ್ರ / ಹೆಸರನ್ನು ಅನಧಿಕೃತವಾಗಿ ಸೇರಿಸಲಾಗಿದೆ | ನಡವಳಿ ಪುಸ್ತಕ ಪರಿಶೀಲಿಸಿ | ನಿಯಮ 108(ಡಿ) ಉಲ್ಲಂಘನೆ ಮತ್ತು ಕಲಂ 192 (ಎ) (3) ಪ್ರಕರಣ ಕಂಡುಹಿಡಿಯಲು |
| BA | ತಿಳುವಳಿಕೆ ಪತ್ರ | ಇದೆ / ಇಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಡಿ)(1) ಉಲ್ಲಂಘನೆ ಕಂಡುಹಿಡಿಯಲು |
| BB | ಹಣಸಂದಾಯ ರಸೀದಿ ಲಭ್ಯವಿದೆಯೇ? | ಇದೆ / ಇಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಜಿ), 108(ಎಸ್) ಉಲ್ಲಂಘನೆ ಪ್ರಕರಣ ಕಂಡುಹಿಡಿಯಲು |
| BC | ಸಾಗುವಳಿ ಚೀಟಿ ಕ್ರಮಬದ್ಧವಾಗಿದೆಯೇ? | ಇದೆ / ಇಲ್ಲ / ಲಭ್ಯವಿಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ಕಾರ್ಯವೈಖಲ್ಯ ಪ್ರಕರಣದ ಮಾಹಿತಿ ಪಡೆಯಲು |
| BD | ಸಾಗುವಳಿ ಚೀಟಿಯಂತೆ | | ಸಾಗುವಳಿ ಚೀಟಿಯಲ್ಲಿ ನಮೂದಿಸಿದಂತೆ | ಸಮಿತಿ ಶಿಫಾರಸಿಗೆ ತಾಳೆ ಮಾಡಲು |

| | | | | |
|---|---|---|---|---|
| | ವಿಸ್ತೀರ್ಣ | | | |
| BE | ಸಾಗುವಳಿ ಚೀಟಿ ದಿನಾಂಕ | | ಕಡತದಲ್ಲಿ ಲಭ್ಯವಿರುವ ದಾಖಲೆಯಂತೆ | ಮಂಜೂರಾತಿಗೆ ಶಿಫಾರಸು ಮಾಡಿದ ತಹಶೀಲ್ದಾರರ, ಸಮಿತಿ ಸದಸ್ಯರ ಮತ್ತು ಅಧ್ಯಕ್ಷರ ಮಾಹಿತಿ ಪಡೆಯಲು |
| BF | ಕಲಂ 11 ರ ಶರಾ | | ಭೂಮಿ ಉಸ್ತುವಾರಿ ಕೋಶದಿಂದ ನೀಡಿರುವ ಮಾಹಿತಿಯಂತೆ | ನಿಯಮ 108 (ಜೆ)(i) ಉಲ್ಲಂಘನೆ ಪರಿಶೀಲಿಸಲು |
| BG | ಕಲಂ 11 ರಲ್ಲಿ ಶರತ್ತು ನಮೂದಾಗಿದೆಯೇ? | ಹೌದು / ಇಲ್ಲ | ಕಲಂ AU ನಮೂದಿನಂತೆ | ನಿಯಮ 108 (ಜೆ)(i) ಉಲ್ಲಂಘನೆ ಪರಿಶೀಲಿಸಲು |
| BH | ಭೂಮಿ ತಂತ್ರಾಂಶದಲ್ಲಿ ಅಳವಡಿಸಿರುವ ಪ್ರತಿಯು ಕ್ರಮಬದ್ಧವಾಗಿದೆಯೇ? | ಹೌದು / ಇಲ್ಲ / ಲಭ್ಯವಿಲ್ಲ | ಭೂಮಿ ತಂತ್ರಾಂಶದಿಂದ ಪರಿಶೀಲಿಸಿ ತಹಶೀಲ್ದಾರರು ಒದಗಿಸಿದಂತೆ | ಕಾರ್ಯವಿಧಾನ ವೈಫಲ್ಯ ಪ್ರಕರಣ ಪರಿಶೀಲಿಸಲು |
| BI | ಮಂಜೂರಾತಿಗೆ ಅರ್ಹವಿದೆಯೇ? | ಅರ್ಹ / ಅನರ್ಹ / ಸಂಶಯಾಸ್ಪದ / ಕಾರ್ಯವಿಧಾನ ವೈಫಲ್ಯ | ಎಲ್ಲ ಅನರ್ಹತೆಗಳನ್ನು ಪರಿಶೀಲಿಸಿ | ಅನರ್ಹ ಪ್ರಕರಣಗಳನ್ನು ಕಂಡುಹಿಡಿಯಲು |
| BJ | ಕಾರಣಗಳು 1 | ಚೆಕ್ ಲಿಸ್ಟಿನಲ್ಲಿ ನಮೂದಿಸಿದ ಅನರ್ಹತೆಗಳು | ಪ್ರಕರಣದಲ್ಲಿ ಕಂಡುಬಂದ ಎಲ್ಲ ನ್ಯೂನತೆಗಳನ್ನು ನಮೂದಿಸಲು | MailMerge ಮಾಡಿ ಎಲ್ಲ ನ್ಯೂನತೆಗಳನ್ನು ಪಟ್ಟಿಮಾಡಿ ಪರಿಶೀಲಿಸಿದ ಅಧಿಕಾರಿಯ ಸಹಿಯೊಂದಿಗೆ ಪ್ರತಿ ಕಡತದಲ್ಲಿ ಅಳವಡಿಸಲು |
| BK | ಕಾರಣಗಳು 2 | | | |
| BL | ಕಾರಣಗಳು 3 | | | |
| BM | ಕಾರಣಗಳು 4 | | | |
| BN | ಕಾರಣಗಳು 5 | | | |
| BO | ಕಾರಣಗಳು 6 | | | |
| BP | ಕಾರಣಗಳು 7 | | | |
| BQ | ಕಾರಣಗಳು 8 | | | |
| BR | ಕಾರಣಗಳು 9 | | | |
| BS | ಇತರೇ ಕಾರಣಗಳು | | ಪರಿಶೀಲಿಸಿದ ಅಧಿಕಾರಿಯ ಇತರೇ ಟಿಪ್ಪಣಿ ನಮೂದಿಸಲು | |
| BT | **DEO Login** | | ಭೂಮಿ ಉಸ್ತುವಾರಿ ಕೋಶದಿಂದ ಪಡೆದ | ಭೂಮಿ ತಂತ್ರಾಂಶದಲ್ಲಿ ಅಳವಡಿಸಿರುವ ದಾಖಲೆ / |
| BU | DEO Date | | | |

| | | | | |
|---|---|---|---|---|
| BV | Tahsildar Login | | ಮಾಹಿತಿಯಂತೆ | ಕಾರ್ಯವಿಧಾನ ತಪ್ಪಾಗಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಲು |
| BW | Tahsildar Date | | | |
| BX | Upload Login | | | |
| BY | Upload Date | | | |
| BZ | RI login | | | |
| CA | RI Approval date | | | |
| CB | DEO Name | BT ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CC | DEO Upload Name | BX ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CD | RI Name | BZ ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CE | Tah Name | BV ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CF | Tahsildar - Committee | ಸಮಿತಿಗೆ ಮಂಡಿಸಿದ ತಹಶೀಲ್ದಾರರು | ತಹಶೀಲ್ದಾರರಿಂದ ಪಡೆದ ಮಾಹಿತಿ | ಅನರ್ಹ ಪ್ರಕರಣಗಳಲ್ಲಿ ಸಮಿತಿಗೆ ಮಂಡಿಸಿದ ತಹಶೀಲ್ದಾರರ ಮತ್ತು ಸಾಗುವಳಿ ಚೀಟಿ ನೀಡಿದ ತಹಶೀಲ್ದಾರರನ್ನು ಕಂಡುಹಿಡಿಯಲು |
| CG | Tahsildar - Saguvali Chit | ಸಾಗುವಳಿ ಚೀಟಿ ನೀಡಿದ ತಹಶೀಲ್ದಾರರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CH | Committee President | ಅನುಮೋದಿಸಿದ ಸಮಿತಿಯ ಅಧ್ಯಕ್ಷರು | ತಹಶೀಲ್ದಾರರಿಂದ ಪಡೆದ ಮಾಹಿತಿ | ಅನರ್ಹ ಅರ್ಜಿಗಳನ್ನು ಅನುಮೋದಿಸಿದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಕಂಡುಹಿಡಿಯಲು |
| CI | Committee-Member 1 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CJ | Committee Member 2 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CK | Committee Member 3 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |

ತಾಲ್ಲೂಕಿನಿಂದ ನಿಯೋಜಿತ ಸಿಬ್ಬಂದಿಯಿಂದ ಕಡತ / ದಾಖಲೆಗಳನ್ನು ಪರಿಶೀಲನೆಗೆ ಪಡೆದು ಪರಿಶೀಲಿಸಿದ ನಂತರ ಕಡತಗಳನ್ನು ನಿಯೋಜಿತ ಸಿಬ್ಬಂದಿಯ ವಶಕ್ಕೆ ಅದೇ ದಿನ ಹಸ್ತಾಂತರಿಸಲಾಯಿತು.

ತಾಲ್ಲೂಕು ಕಛೇರಿಯಿಂದ ಕಡತವು ಸ್ವೀಕೃತಗೊಂಡಾಗ ಅವುಗಳಿಗೆ ಈ ಕೆಳಗಿನ Sticker ಅಂಟಿಸಿ ತಂತ್ರಾಂಶದಲ್ಲಿ ಕಡತ ಸ್ವೀಕರಿಸಿದ ಬಗ್ಗೆ ನಮೂದಿಸುವ ಕಾರ್ಯವನ್ನು ನಿಯೋಜಿತ ಅಧಿಕಾರಿಗಳ ಪೈಕಿ 2 ಅಧಿಕಾರಿಗಳು ಕೈಗೊಂಡರು

| MR No | MR Date | Verification File No | Verified by | Sign | DEO Name | DEO Sign |
|---|---|---|---|---|---|---|
| | | | | | | |

ಉಳಿದ ಎಲ್ಲ ಅಧಿಕಾರಿಗಳು ಕಡತ ಪರಿಶೀಲನೆಯ ಕೆಲಸವನ್ನು ಕೈಗೊಂಡರು ಕಡತ ಪರಿಶೀಲನೆಯ ನಂತರ ಜಿಲ್ಲಾಡಳಿತದಿಂದ ನಿಯೋಜಿತ DEO ರವರಿಂದ ಮಾಹಿತಿಯನ್ನು ಗಣಕೀಕೃತಗೊಳಿಸಲಾಯಿತು. ಕಡತ ಪರಿಶೀಲನೆಯ ಕೆಲಸ ಪೂರ್ಣಗೊಂಡ ನಂತರ ಸಮಿತಿ ನಡವಳಿ ಪುಸ್ತಕದ ಪರಿಶೀಲನೆ ಮತ್ತು ಅರ್ಜಿವಹಿ ಪರಿಶೀಲನೆಯ ಕೆಲಸವನ್ನು ಅಧಿಕಾರಿಗಳು ಕೈಗೊಂಡರು. ಲಭ್ಯ ಕಡತ ಪರಿಶೀಲನೆ ಸಂಪೂರ್ಣವಾದನಂತರ **ಅಲಭ್ಯ ಕಡತಗಳ ಪಟ್ಟಿಯನ್ನು ವಿಷಯ ನಿರ್ವಾಹಕರಿಗೆ ನೀಡಿ ಕಡತವನ್ನು ಶೋಧಿಸಿ ನೀಡಲು ಅವಕಾಶವನ್ನು ನೀಡಲಾಯಿತು.**

ತದನಂತರ ಅರ್ಜಿ ವಹಿ ಮತ್ತು ಸಮಿತಿ ನಡವಳಿ ಯನ್ನು ಪರಿಶೀಲಿಸಿ Google Spreadsheet ನಲ್ಲಿ ಮಾಹಿತಿಯನ್ನು ನಮೂದಿಸಲಾಯಿತು. **ಪರಿಶೀಲನೆಯ ನಂತರ ನಮೂದು ಕಂಡುಬರದ ಪ್ರಕರಣದ ಮಾಹಿತಿಯನ್ನು ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ನೀಡಿ ಮರುಪರಿಶೀಲನೆಗೆ ಅವಕಾಶವನ್ನು ನೀಡಲಾಯಿತು.**

ಈ ಕೆಳಗಿನ ಮಾಹಿತಿಯನ್ನು ನಮೂದಿಸಿದ ಅಧಿಕಾರಿಗಳಿಂದ/ಇಲಾಖೆಯಿಂದ ಪಡೆದು ಮೇಲಿನ ನಮೂನೆಯಲ್ಲಿ (Googe Spreadsheet) ಕ್ರೋಢೀಕರಿಸಲಾಯಿತು. **(Table 7)**

| **ಅಗತ್ಯ ಮಾಹಿತಿ** | **ಒದಗಿಸಿದ ಇಲಾಖೆ/ಅಧಿಕಾರಿ** |
|---|---|
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳಿಗೆ ಸಂಬಂಧಿಸಿದಂತೆ (ಪಟ್ಟಿಯನ್ನು ಮಿಂಚಂಚೆಗೆ ಲಗತ್ತಿಸಿದೆ) ಆಕಾರಬಂದು ವಿಸ್ತೀರ್ಣ, ಜಮೀನಿನ ತರಹೆ (ಕದಾರ್), ಪೈಕಿ ಪಹಣಿಯೆ?, ಕರ್ನಾಟಕ ಭೂಕಂದಾಯ ಅಧಿನಿಯಮ ಸೆಕ್ಷನ್ 94(A)(4) ನಂತೆ ಪ್ರತಿಬಂಧಿತ ಅಂತರದೊಳಗೆ ಇರುವುದೆ? ಎಂಬ ಮಾಹಿತಿ | ಮೋಜಿಣಿ ಇಲಾಖೆ |
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳು ಯಾವುದೇ ತರಹದ ಅರಣ್ಯದ ವ್ಯಾಪ್ತಿಗೆ ಬರುವುದೇ ಎಂಬ ಮಾಹಿತಿ | ಅರಣ್ಯ ಇಲಾಖೆ |
| ಅಮೃತ ಮಹಲ್ ಕಾವಲ್ ಒಳಗೊಂಡಂತೆ ಇಲಾಖೆಗೆ ಮೀಸಲಿಟ್ಟಿರುವ ಭೂಮಿಯ ಮಾಹಿತಿ | ಪಶುಸಂಗೋಪನ ಇಲಾಖೆ |

| | |
|---|---|
| 1 ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪೈಕಿ ಪಹಣಿಗಳ ಮಾಹಿತಿಯನ್ನು ಪಡೆದು ಒಗ್ಗೂಡಿಸಿ ಪಹಣಿ ಕಲಂ 3 ರ ಮಾಹಿತಿಯನ್ನು ಒದಗಿಸುವುದು<br>2. ಸಂಬಂಧಿಸಿದ ಮ್ಯುಟೇಶನ್‌ಗಳಿಗೆ ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರುವ ದಾಖಲೆಯ ಪ್ರತಿಯನ್ನು ಮುದ್ರಿಸಿ ಪರಿಶೀಲನೆ ಕಡತಸಂಖ್ಯೆ ನಮೂದಿಸಿ ನೀಡುವುದು<br>3 ಪ್ರತಿ ಕಡತದಲ್ಲಿ ಕಾರ್ಯನಿರ್ವಹಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಮಾಹಿತಿ<br>4. 2008 ರಿಂದ 2023 ರ ತನಕ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರರ ಮತ್ತು ನಿಯೋಜಿತ ಸಕ್ರಮೀಕರಣ ಸಮಿತಿಯ ಮಾಹಿತಿ | ತಹಶೀಲ್ದಾರರು |

ವರದಿಯನ್ನು ಸಲ್ಲಿಸಲು ಮಂಜೂರಾತಿ ಕಡತ ತಯಾರಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು, ಶಿರಸ್ತೇದಾರರು, ತಹಶೀಲ್ದಾರರ ಮಾಹಿತಿ ಅಗತ್ಯ ಇರುತ್ತದೆ ಕಡತಗಳನ್ನು ಪರಿಶೀಲಿಸಿದಾಗ ಅನೇಕ ಕಡತಗಳಲ್ಲಿ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕ ವರದಿ, ಸಮಿತಿಗೆ ಮಂಡಿಸಲು ಶಿಫಾರಸು ಮಾಡಿದ ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಹೆಸರು ನಮೂದಿಸಿರುವುದಿಲ್ಲ ಮತ್ತು ವರದಿಯ / ಟಿಪ್ಪಣಿಯ ದಿನಾಂಕ ಸಹ ನಮೂದಾಗಿರುವುದಿಲ್ಲ ಆದುದರಿಂದ ಅಧಿಕಾರಿಗಳ ಹೆಸರನ್ನು ಕಂಡುಹಿಡಿಯುವುದು ತಂಡಕ್ಕೆ ಅಸಾಧ್ಯವಾರುತ್ತದೆ **ಆದುದರಿಂದ ಪ್ರತಿ ಕಡತಕ್ಕೆ ಸಂಬಂಧಿಸಿದಂತೆ ಮಂಜೂರಾತಿಗೆ ಕಡತ ತಯಾರಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ಸಮಿತಿ ಮಂಡಿಸಲು ಶಿಫಾರಸು ಮಾಡಿದ ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಹೆಸರನ್ನು ನಮೂದಿಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರರು ಧೃಢೀಕರಿಸಿ ಒದಗಿಸಲು ಸೂಚಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಲಾಯಿತು.**

ಅನರ್ಹತೆಗೆ ಸಂಬಂಧಿಸಿದಂತ ಈ ಕೆಳಗೆ ನಮೂದಿಸಿದ ಮಾನದಂಡದಂತೆ ತಪ್ಪೆಸಗಿದ ಅಧಿಕಾರಿ/ ಸಿಬ್ಬಂದಿ /ಸಮಿತಿ ಸದಸ್ಯರನ್ನು ಕಂಡುಹಿಡಿಯಲಾಯಿತು **(Table 8)**

| ಅನರ್ಹತೆ | ತಪ್ಪೆಸಗಿದ ಸಿಬ್ಬಂದಿ / ಸಮಿತಿ |
|---|---|
| ಅರ್ಜಿಯನ್ನು ಸಲ್ಲಿಸಿದ ದಾಖಲಾತಿ ಲಭ್ಯವಿಲ್ಲದ ಪ್ರಕರಣಗಳು (ಅರ್ಜಿ ವಹಿಯನ್ನು ಪರಿಶೀಲಿಸಲಾಯಿತು). | ಕಡತ ಲಭ್ಯವಿರುವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ |
| ಅರ್ಹತಾ ದಿನಾಂಕದಂದು (ನಮೂನೆ 50 ಮತ್ತು 53 ರಲ್ಲಿ 01 ಎಪ್ರಿಲ್ 1989 (SC/ST), 01 ಎಪ್ರಿಲ್ 1987 (ಇತರೇ)) ಅರ್ಜಿದಾರರು 18 ವರ್ಷ ಪೂರೈಸದ ಪ್ರಕರಣಗಳು. | ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ |

| | |
|---|---|
| ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ ಪ್ರಕರಣಗಳು. | ವಿಷಯ ನಿರ್ವಾಹಕರು, ಶಿರಸ್ತೇದಾರರು. ಮತ್ತು ತಹಶೀಲ್ದಾರರು ಕಡತ ಲಭ್ಯವಿಲ್ಲದ ಪ್ರಕರಣದಲ್ಲಿ ವಿಷಯ ನಿರ್ವಾಹಕರು ಶಿರಸ್ತೇದಾರರು ಮತ್ತು ತಹಶೀಲ್ದಾರರು. ಸಮಿತಿಯ ಅನುಮೋದನೆ ಪಡೆದಿರುವ ಪ್ರಕರಣದಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು |
| ಅನಧಿಕೃತ ವಿಭಾಗಪತ್ರ ಲಗತ್ತಿಸಿ ಅರ್ಹತೆಗಿಂತ ಹೆಚ್ಚುವರಿ ಭೂಮಿ ಮಂಜೂರು ಮಾಡಿದ ಪ್ರಕರಣಗಳು. | |
| ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | |
| ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | |
| **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | |
| ವಹಿಯಲ್ಲಿ ನಮೂದಿರುವಂತೆ ವಜಾಗೊಂಡಿರುವ ಪ್ರಕರಣಗಳು. | |
| ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಸರ್ವೆ ನಂಬರು ಬದಲಾದ ಪ್ರಕರಣಗಳು | |
| ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಗ್ರಾಮದ ಹೆಸರು ಬದಲಾದ ಪ್ರಕರಣಗಳು | |
| ಆಕಾರಬಂದ ವಿಸ್ತೀರ್ಣಕ್ಕೂ ಹೆಚ್ಚಿನ ವಿಸ್ತೀರ್ಣ ಪಹಣಿಯಲ್ಲಿರುವ ಪ್ರಕಣಗಳು. | |
| ಪೈಕಿ ಪಹಣಿಗಲ್ಲಿ ಮಂಜೂರಾತಿ ನೀಡಿರುವ ಮಂಜೂರಾತಿಗಳು. | |
| ಅರ್ಜಿ ವಹಿ ಶಿಥಿಲವಾಗಿರುವ ಪ್ರಕರಣಗಳು | |
| ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | |
| **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | ಕಡತ ಲಭ್ಯವಿರುವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು. ಮತ್ತು ತಹಶೀಲ್ದಾರರು ಕಡತ ಲಭ್ಯವಿಲ್ಲದ ಪ್ರಕರಣದಲ್ಲಿ |
| ಸಮಿತಿಯ ನಡವಳಿಯಲ್ಲಿ ತಿದ್ದುಪಡಿ ಮಾಡಿರುವ ಪ್ರಕರಣಗಳು. | |
| ಸಮಿತಿಯಲ್ಲಿ ನಿರ್ಧರಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಮಂಜೂರು ಮಾಡಿದ ಪ್ರಕರಣಗಳು | |
| ಭೂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ಪ್ರಕರಣಗಳು | |
| ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ | |

| | |
|---|---|
| ಪ್ರಕರಣಗಳು | ವಿಷಯ ನಿರ್ವಾಹಕರು. |
| ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳು. | ಶಿರಸ್ತೇದಾರರು ಮತ್ತು ತಹಶೀಲ್ದಾರರು |
| ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು. | ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು ತಹಶೀಲ್ದಾರರು. |
| ವರದಿಗಳು ಅಪೂರ್ಣವಾಗಿರುವ ಪ್ರಕರಣಗಳು | |
| ಸರ್ವೆ ನಕಾಶೆ ಲಭ್ಯವಿಲ್ಲದ ಪ್ರಕರಣಗಳು. | |
| ಹಣಸಂದಾಯ ರಸೀದಿ ಲಭ್ಯವಿಲ್ಲದ ಪ್ರಕರಣಗಳು. | |
| ಸಾರ್ವಜನಿಕ ಮಾಹಿತಿ (ಆಕ್ಷೇಪಣೆ ಕೋರುವ) ನಮೂನೆ ಲಭ್ಯವಿಲ್ಲದ ಪ್ರಕರಣಗಳು. | |
| ವಿಷಯ ನಿರ್ವಾಹಕರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | |
| ಶಿರಸ್ತೇದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | |
| ತಹಶೀಲ್ದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | |
| ಒಂದೇ ಮಂಜೂರಾತಿಗೆ ಎರಡುಸಲ ಮ್ಯುಟೇಶನ್ ಮಾಡಿರುವ ಪ್ರಕರಣಗಳು. | |
| ಪಹಣಿಯಲ್ಲಿ ಪರಭಾರೆ ನಿಷೇಧ ನಮೂದಾಗದ ಅಥವಾ ತಪ್ಪಾಗಿ ನಮೂದಾದ ಪ್ರಕರಣಗಳು | ಭೂಮಿ ತಂತ್ರಾಶದಲ್ಲಿ ಇಂಡೀಕರಣ ಮಾಡಿದ ಭೂಮಿ ಆಪರೇಟರ್, ಅನುಮೋದನ ನೀಡಿದ ರಾಜಸ್ವ ನಿರೀಕ್ಷಕರು |
| ಟಿಪ್ಪಣಿ ಲಭ್ಯವಿಲ್ಲದ / ಅಪೂರ್ಣ ಟಿಪ್ಪಣಿ ಇರುವ ಪ್ರಕರಣಗಳು | ಕಡತ ಲಭ್ಯವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು ತಹಶೀಲ್ದಾರರು |
| **ಕಡತ ಲಭ್ಯವಿರುವ ಪ್ರಕರಣಗಳ ಪೈಕಿ ಭೂಮಿ ತಂತ್ರಾಶದಲ್ಲಿ ಅಳವಡಿಸುವಾಗ ಹಕ್ಕುಪತ್ರವನ್ನು ಕ್ರಮಬದ್ಧವಾಗಿ ಲಗತ್ತಿಸದ ಪ್ರಕರಣಗಳು.** | ಭೂಮಿ ತಂತ್ರಾಶದಲ್ಲಿ ಆದೇಶ ಆದೇಶ ಪ್ರತಿ ಲಗತ್ತಿಸಿದ ಆಪರೇಟರು |
| ಹಕ್ಕುಪತ್ರದ ಅಪೂರ್ಣ ಪ್ರತಿ ಲಗತ್ತಿಸಿರುವ ಪ್ರಕರಣಗಳು | |
| ಭೂಮಿ ತಂತ್ರಾಶದಲ್ಲಿ ಲಗತ್ತಿಸಿರು ದಾಖಲೆಯು ಪ್ರಕರಣಕ್ಕೆ | |

| | |
|---|---|
| ಸಂಬಂಧಿಸಿದ್ದಲ್ಲ | |
| ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಬದಲು ತಿಳುವಳಿಕೆ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ | |
| ಭೂಮಿ ತಂತ್ರಾಂಶಕ್ಕೆ ಲಗತ್ತಿಸಿರುವ ಪ್ರತಿ ತಂತ್ರಾಂಶದಲ್ಲಿ ಲಭ್ಯವಿಲ್ಲ | |
| ಕಡತ ಲಭ್ಯವಿಲ್ಲದೇ ಇರುವ ಮತ್ತು ಭೂಮಿ ತಂತ್ರಾಂಶದಲ್ಲಿ ಸಹ ಹಕ್ಕುಪತ್ರ ಲಭ್ಯವಿಲ್ಲದ ಪ್ರಕರಣಗಳು. | ವಿಷಯ ನಿರ್ವಾಹಕರು, ಶಿರಸ್ತೇದಾರರು, ತಹಶೀಲ್ದಾರರು, ಭೂಮಿ ತಂತ್ರಾಂಶದಲ್ಲಿ ಆದೇಶ ಪ್ರತಿ ಲಗತ್ತಿಸಿದ ಆಪರೇಟರು, ಅನುಮೋದಿಸಿದ ತಹಶೀಲ್ದಾರರು, ರಾಜಸ್ವ ನಿರೀಕ್ಷಕರು ಹಾಗೂ ಫಲಾನುಭವಿ |
| ನಮೂನೆ 57 ರಲ್ಲಿ ಗೋಮಾಳ/ಶೇಂದಿವನ ಜಮೀನಿನಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು. | ಕಡತ ಲಭ್ಯವಿರುವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು, ಮತ್ತು ತಹಶೀಲ್ದಾರರು ಕಡತ ಲಭ್ಯವಿಲ್ಲದ ಪ್ರಕರಣದಲ್ಲಿ ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು ತಹಶೀಲ್ದಾರರು, ಸಮಿತಿಯ ಅನುಮೋದನೆ ಪಡೆದಿರುವ ಪ್ರಕರಣದಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು, ನಕ್ಷೆ ನೀಡಿದ ಭೂಮಾಪಕರು |
| ನಿರ್ಭಂದಿತ ಅಂತರದಲ್ಲಿ ಮಂಜೂರಾತಿಗೊಂಡ ಪ್ರಕರಣಗಳು. | |
| **ಅರಣ್ಯ ಇಲಾಖೆಯ ವರದಿಯಂತೆ ಅರಣ್ಯ ಭೂಮಿಯಲ್ಲಿ ನೀಡಿರುವ ಮಂಜೂರಾತಿಗಳು** | |
| ಆಕಾರಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | |
| ಆಕಾರಬಂದನಂತೆ ಪೂರ್ಣ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | |
| ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೇ ಭಾಗಶಃ ಅರಣ್ಯ ಸಂಬಂಧಿ ವಿಸ್ತೀರ್ಣ ಹೊಂದಿರುವ ಸರ್ವೆ ನಂಬರುಗಳಲ್ಲಿ ನೀಡಿದ ಮಂಜೂರಾತಿಗಳು. | |
| ಅಮೃತಮಹಲ್ ಕಾವಲು ಸರ್ವೆ ನಂಬರುಗಳಲ್ಲಿ ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆಯದೇ ಮಂಜೂರು ಮಾಡಿರುವ ಪ್ರಕರಣಗಳು | |

ತಹಶೀಲ್ದಾರರ ವರದಿಯಂತೆ ಮಾಹಿತಿಯನ್ನು ನಮೂದಿಸಿ ಅದರಂತೆ ಅನರ್ಹತೆಯ ಪ್ರತಿ ವರ್ಗದಲ್ಲಿ ಭಾಗಿಯಾದ ಸಿಬ್ಬಂದಿಯ ಪಟ್ಟಿಯನ್ನು ತಯಾರಿಸಲಾಯಿತು Excel ತಂತ್ರಾಂಶವನ್ನು ಬಳಸಿ ಪ್ರತಿ ಸಿಬ್ಬಂದಿ ಎಷ್ಟು ಪ್ರಕರಣದಲ್ಲಿ ತಪ್ಪೆಸಗಿರುತ್ತಾರೆ ಎಂದು ವರ್ಗವಾರು / ಪ್ರಕರಣವಾರು ಪಟ್ಟಿ ತಯಾರಿಸಿ ವರದಿಗೆ ಲಗತ್ತಿಸಲಾಯಿತು

ಸಮಿತಿಯ ಅಧ್ಯಕ್ಷರ, ಸದಸ್ಯರ ಮತ್ತು ತಹಶೀಲ್ದಾರರ ಮಾಹಿತಿಯನ್ನು ಅವರ ಅಧಿಕಾರ ಅವಧಿಯ ಮಾಹಿತಿಯೊಂದಿಗೆ ತಹಶೀಲ್ದಾರರಿಂದ ಪಡೆದು ಮೇಲಿನ ಮಾಹಿತಿಯಲ್ಲಿ ಸಮಿತಿ ನಡೆದ ದಿನಾಂಕ ಮತ್ತು ಹಕ್ಕುಪತ್ರ ನೀಡಿದ ದಿನಾಂಕದೊಂದಿಗೆ ಹೋಲಿಸಿ Excel ತಂತ್ರಾಂಶವನ್ನು ಬಳಸಿ ಪ್ರತಿಯೊಬ್ಬರೂ ಎಷ್ಟು ಪ್ರಕರಣದಲ್ಲಿ ತಪ್ಪೆಸಗಿರುತ್ತಾರೆ ಎಂದು ವರ್ಗವಾರು / ಪ್ರಕರಣವಾರು ಪಟ್ಟಿ ತಯಾರಿಸಿ ವರದಿಗೆ ಲಗತ್ತಿಸಲಾಯಿತು

ಈ ಮೇಲಿನ ಎಲ್ಲ ಮಾಹಿತಿಯನ್ನು ಕ್ರೋಢೀಕರಿಸಿ ಅಂತಿಮ ವರದಿಯನ್ನು ತಯಾರಿಸಲಾಯಿತು ಅಂತಿಮ ವರದಿಯ ಪ್ರತಿಯನ್ನು ಕಡತವಾರು ವಿವರವಾದ ಪರಿಶೀಲನಾ ವರದಿ ಮತ್ತು ಗಮನಿಸಿದ ಅಂಶಗಳೊಂದಿಗೆ "MailMerge" ಮಾಡಿ ಮುದ್ರಿಸಿ ಪ್ರತಿ ಕಡತವಾರು ವಿವರವನ್ನು ಈ ಕೆಳಗಿನ ಮಾದರಿಯಲ್ಲಿ ವರದಿಗೆ ಲಗತ್ತಿಸಲಾಯಿತು. **(ಅನುಬಂಧ 8)**

Verification File No. **«ಪರಿಶೀಲನೆ_ಕಡತ_ಸಂಖ್ಯೆ»**

## <u>ಕಡೂರು ತಾಲ್ಲೂಕಿನ ಸಕ್ರಮ ಅರ್ಜಿಗಳ ಪರಿಶೀಲನಾ ಚೆಕ್ ಲಿಸ್ಟ್</u>

| MR No | MR Date |
|---|---|
| «mr_no» | «dt_appr_sir» |

ಮಂಜೂರುದಾರರ ಹೆಸರು: «New_Owner» ಬಿನ್/ಕೋಂ «Relative_Name»

ಕಡತ ಲಭ್ಯವಿದೆಯೇ: «File_received»

| | | |
|---|---|---|
| 1 | ಅರ್ಜಿದಾರರ ವಿವರ: ನಮೂನೆ ಕಡತ ಸಂಖ್ಯೆ | **«reg_order_no»** |
| | ಹೋಬಳಿಯ ಹೆಸರು: «hobli_name» | ಗ್ರಾಮದ ಹೆಸರು: «village_name» |
| | ಸಾಗುವಳಿ ಚೀಟಿ ದಿನಾಂಕ:<br>«ಸಾಗುವಳಿ_ಚೀಟಿ_ದಿನಾಂಕ» | ಸಕ್ಷಮ ಪ್ರಾಧಿಕಾರದಿಂದ ಹಿಂದಿರುಗಿಸಿದ ದಿನಾಂಕ:<br>«ಸಕ್ಷಮ_ಪ್ರಾಧಿಕಾರದಿಂದ_ಹಿಂದಿರುಗಿಸಿದ_ದಿನಾಂಕ» |
| 2 | ಸರ್ವೆ ನಂ **«survey_no»/«surnoc»/«hissa_no»** ಪಹಣಿ ಪತ್ರಿಕೆ ಕ್ಷೇತ್ರ **«ಪಹಣಿ_ಪತ್ರಿಕೆ_ಕ್ಷೇತ್ರ»** ಆಕಾರಬಂದ್ ಕ್ಷೇತ್ರ **«ಆಕಾರಬಂದ್_ಕ್ಷೇತ್ರ»** ಮಂಜೂರು ವಿಸ್ತೀರ್ಣ: **«new_acre»** ಎಕರೆ **«new_gunta»** ಗುಂಟೆ | |
| | **ಪರಿಶೀಲಿಸಬೇಕಾದ ಅಂಶಗಳು** | **ಹೌದು/ಇಲ್ಲ** |
| 3 | **Form -50, 53, 57ರ ಅರ್ಜಿಗಳು** | «Form_Type» |
| | ಅರ್ಜಿ ವಹಿಯಲ್ಲಿ ದಾಖಲಾತಿ ಇರುವುದೆ? | «ಅರ್ಜಿ_ವಹಿಯಲ್ಲಿ_ದಾಖಲಾತಿ» |
| | Form 50: ದಿನಾಂಕ 19.09.1991 - ಅರ್ಹತಾ ದಿನಾಂಕ 14.04.1987<br>Form 53: ದಿನಾಂಕ 30.04.1999 - ಅರ್ಹತಾ ದಿನಾಂಕ 14.04.1987<br>Form 57: ದಿನಾಂಕ 17.03.2018 ರಿಂದ 16.03.2019 & 30.05.2022 ರಿಂದ 30.05.2023 - | |

| | | |
|---|---|---|
| | ಅರ್ಹತಾ ದಿನಾಂಕ 01.01.2002 | |
| 4 | ಅರ್ಹತಾ ದಿನಾಂಕಕ್ಕೆ ಮುಂಚೆ ವಯಸ್ಕರಾಗಿರುವರೇ? (18 ವರ್ಷ) | «ಅರ್ಹತಾ_ದಿನಾಂಕಕ್ಕೆ_ ಮುಂಚೆ_ವಯಸ್ಕರಾಗಿರುವರೇ_» |
| 5 | **ಅರ್ಜಿದಾರರು ಕೋರಿದ ಜಮೀನಿನ ಸ್ವರೂಪ** | |
| | a) ಸರ್ವೆ ದಾಖಲೆಯಂತೆ ಗೋಮಾಳ / ಸೊಪ್ಪಿನಬೆಟ್ಟ / ದನಗಳಿಗೆ ಮುಫತ್ತು / ಸರ್ಕಾರಿ ಬೀಳು/ ಕಾಫಿ ಬೀಳು ಇತ್ಯಾದಿ ಪಹಣಿಯಂತೆ | «ಜಮೀನಿನ_ತರಹೆ» |
| | b) ಅರಣ್ಯ ಜಮೀನು<br>i) Deemed Forest (ಪರಿಭಾವಿತ ಅರಣ್ಯ). iv) Protected Forest<br>ii) Conservation Forest (ಸಂರಕ್ಷಿತ ಅರಣ್ಯ) v) Notified U/s-4 Fst<br>iii) Reserve Forest (ಮೀಸಲು ಅರಣ್ಯ) | «ಅರಣ್ಯ_ಜಮೀನು» |
| | c) ಅಮೃತ್ ಮಹಲ್ ಕಾವಲ್ ನ ಪ್ರದೇಶದ ಜಮೀನಿನಲ್ಲಿ ಅರ್ಜಿ ಸಲ್ಲಿಸಿರುತ್ತಾರೆಯೇ? | «ಅಮೃತ್_ಮಹಲ್ ಕಾವಲ್ ನ_ಪ್ರದೇಶದ_ಜಮೀನಿನಲ್ಲಿ_ಅರ» |
| 6 | ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 94(3) ರಂತೆ ನಿರ್ದಿಷ್ಟ ಗೊಳಿಸಿದ ನಗರಸಭೆ / ಪುರಸಭೆ / ಮಹಾನಗರಪಾಲಿಕೆ / ಪಟ್ಟಣ ಪಂಚಾಯ್ತಿಗಳ ಪರಿಮಿತಿಯೊಳಗೆ ಬರುವ ಪ್ರದೇಶದ ಜಮೀನೇ? | «ಕರ್ನಾಟಕ_ಭೂಕಂದಾಯ_ಅಧಿನಿಯಮ_1964ರ_ಕಲಂ_943_» |
| 7 | ರಾಜಸ್ವ ನಿರೀಕ್ಷಕರು ಮಂಜೂರಾತಿಗೆ ಸಕಾರಾತ್ಮಕ ಟಿಪ್ಪಣಿ ಸಲ್ಲಿಸಿರುವರೇ? | «ರಾಜಸ್ವ_ನಿರೀಕ್ಷಕರ_ಅಭಿಪ್ರಾಯ_ಮಂಜೂರಾತಿಗಾಗಿ» |
| | ಕುಟುಂಬದ ವರ್ಗದವರು ಹೊಂದಿರುವ ಒಟ್ಟು ಕ್ಷೇತ್ರ | «ಕುಟುಂಬದ_ವರ್ಗದವರು_ಹೊಂದಿರುವ_ಒಟ್ಟು_ಕ್ಷೇತ್ರ» |
| | ಅರ್ಜಿದಾರರ ಜಾತಿ | «ಅರ್ಜಿದಾರರ_ಜಾತಿ» |
| | ಅರ್ಹತಾ ದಿನಾಂಕದಿಂದ ನಿರಂತರವಾಗಿ ಸಾಗುವಳಿ ಮಾಡುತ್ತಿದ್ದಾರೆಯೇ? | «ಕ್ಷೇತ್ರ_ವರದಿಯಂತೆ_ಅರ್ಹತಾ_ದಿನಾಂಕಕ್ಕಿಂತ_ಮುಂ» |
| 8 | ಸರ್ವೆ ಇಲಾಖೆಯಿಂದ ಅನುಭವದ ಸರ್ವೆ ನಕಾಶ ಪಡೆಯಲಾಗಿದೆಯೇ? | «ನಕ್ಷೆ_ಇದೆ» |
| 9 | ಹಾಗಿದ್ದಲ್ಲಿ ಸರ್ವೆ ನಕಾಶೆಯಂತೆ ಅನುಭವದಲ್ಲಿರುವ ಕ್ಷೇತ್ರ | «ಸರ್ವೆ_ನಕಾಶೆಯಂತೆ_ಅನುಭವದಲ್ಲಿರುವ_ಕ್ಷೇತ್ರ» |
| 10 | ಪಹಣಿಯಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೂ ಆಕಾರಬಂದಿನ ವಿಸ್ತೀರ್ಣಕ್ಕೂ ತಾಳೆ ಇದೆಯೇ? | «ಮೇಲಿನ_ಅಂಶಗಳನ್ನಾಧರಿಸಿ_ಮಂಜೂರಿಸಬಹುದಾದ_ಕ್ಷೇತ್ರ» |
| 11 | ಪೈಕಿ ಪಹಣಿಯೇ? | «ಪೈಕಿ_ಸರ್ವೆ_ನಂಬರೇ» |
| 12 | ವಿಷಯನಿರ್ವಾಹಕರು ಶಿರಸ್ತೇದಾರರಿಗೆ ಸಕಾರಾತ್ಮಕ ಟಿಪ್ಪಣಿ ಮಂಡಿಸಿದ್ದಾರೆಯೇ? | «ವಿಷಯ_ನಿರ್ವಾಹಕರು_ಸಕಾರಾತ್ಮಕ_ಟಿಪ್ಪಣಿ_ಮಂಡಿಸಿ» |
| 13 | ಶಿರಸ್ತೇದಾರರು ತಮ್ಮ ಸಹಿ ಮಾಡಿ, ತಮ್ಮ ಷರಾದೊಂದಿಗೆ ತಹಸೀಲ್ದಾರರಿಗೆ/ ಕಾರ್ಯದರ್ಶಿ ಅವರಿಗೆ ಕಡತ ಮಂಡಿಸಿದ್ದಾರೆಯೇ? | «ಶಿರಸ್ತೇದಾರರು_ಸಕಾರಾತ್ಮಕ_ಟಿಪ್ಪಣಿ_ಮಂಡಿಸಿರುವ» |
| 14 | ತಹಸೀಲ್ದಾರರು ಕಡತವನ್ನು ಅನುಮೋದಿಸಿ ಕಡತವನ್ನು ಸಮಿತಿಯ ಮುಂದೆ ಹಾಜರುಪಡಿಸುವುದಕ್ಕೆ ಒಪ್ಪಿದ್ದಾರೆಯೇ? | «ತಹಸೀಲ್ದಾರರು_ಕಡತವನ್ನು_ಅನುಮೋದಿಸಿ_ಕಡತವನ್ನು_» |
| 15 | ಸಮಿತಿಯ ನಡವಳಿಯು ಕ್ರಮಬದ್ಧವಾಗಿರುವುದೆ? | «ಸಮಿತಿಯ_ನಡವಳಿ_ಪುಸ್ತಕದಲ್ಲಿ_ಕ್ರಮಬದ್ಧವಾಗಿ_ನಮ» |
| 16 | ಈ ಒಂದು ಸಮಿತಿಯ ತೀರ್ಮಾನದಂತೆ ಅನುಮೋದಿಸಿದ ಸಮಿತಿಯ ನಡವಳಿಕೆ ಪ್ರತಿಯನ್ನು (Typed Copy) ಆಕ್ಷೇಪಣೆ ಕುರಿತು ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಿದ ತಿಳುವಳಿಕೆ ಪತ್ರ / ನೋಟೀಸಿನ ಪತ್ರ ಇದೆಯೇ? (ನಮೂನೆ-59ನ್ನು ಗ್ರಾಮಛಾವಡಿಯಲ್ಲಿ ಪ್ರಕಟಿಸಲಾಗಿದೆಯೇ? Optional) | «ಸಾರ್ವಜನಿಕರ_ಮಾಹಿತಿಗಾಗಿ_ಪ್ರಚುರಪಡಿಸಿದ_ತಿಳುವ» |
| 17 | ಹಣ ಸಂದಾಯ ಮಾಡಿದ ಚಲನ್ ಇದೆಯೇ? | «ಹಣಸಂದಾಯ_ರಸೀದಿ_ಲಭ್ಯವಿದೆಯೇ» |
| 18 | ತಹಸೀಲ್ದಾರರು ಷರತ್ತುಬದ್ಧ ಸಾಗುವಳಿ ಚೀಟಿ ನೀಡಿದ್ದಾರೆಯೇ? | «ಸಾಗುವಳಿ_ಚೀಟಿ_ಕ್ರಮಬದ್ಧವಾಗಿದೆಯೇ» |
| 19 | ಭೂಮಿ ಆಪರೇಟರ್ / ಶಿರಸ್ತೇದಾರರು ಅನುಮೋದಿಸಿದ ಸಮಯದಲ್ಲಿ ಪಹಣಿ ಪತ್ರಿಕೆ ಕಾಲಂ 11 ರಲ್ಲಿ ಷರತ್ತನ್ನು ನಮೂದಿಸಿದ್ದಾರೆಯೇ? | «ಶರತ್ತು_ನಮೂದಾಗಿದೆಯೇ» |
| 20 | ಭೂಮಿ ತಂತ್ರಾಂಶದಲ್ಲಿ ಅಳವಡಿಸಿರುವ ಪ್ರತಿಯು ಕ್ರಮಬದ್ಧವಾಗಿದೆಯೇ? | «ಭೂಮಿ_ತಂತ್ರಾಂಶದಲ್ಲಿ_ಅಳವಡಿಸಿರುವ_ಪ್ರತಿಯು_ಕ್ರ» |
| 21 | ಮೇಲಿನ ಅಂಶಗಳನ್ನಾಧರಿಸಿ ತನಿಖಾ ತಂಡದ ಸದಸ್ಯರ ಅಭಿಪ್ರಾಯ (ಮಂಜೂರಾತಿಗಾಗಿ ಯೋಗ್ಯವಿದೆ / ಯೋಗ್ಯವಿಲ್ಲ) ಯೋಗ್ಯವಿಲ್ಲಾ ಎಂದಾದಲ್ಲಿ ಕಾರಣ ನೀಡುವುದು | |

«ಮಂಜೂರಾತಿಗೆ_ಯೋಗ್ಯವಿದೆ_ಯೋಗ್ಯವಿಲ್ಲ»

ಕಾರಣಗಳು 1 «ಕಾರಣಗಳು_1»
ಕಾರಣಗಳು_2»
ಕಾರಣಗಳು_3»
ಕಾರಣಗಳು_4»
ಕಾರಣಗಳು_5»
ಕಾರಣಗಳು_6»
ಕಾರಣಗಳು_7»
ಕಾರಣಗಳು_8»
ಕಾರಣಗಳು_9»
ಕಾರಣಗಳು_10»
ಕಾರಣಗಳು»

ಇತರೆ ಕಾರಣಗಳು/ಪರಿಶೀಲನಾಧಿಕಾರಿಯ ಟಿಪ್ಪಣಿ «ಪರಿಶೀಲಿಸಿದ_ಅಧಿಕಾರಿಯ_ಟಿಪ್ಪಣಿ»

## ಕಡತ ನಿರ್ವಹಿಸಿದ ನೌಕರರ ವಿವರ

| | | | |
|---|---|---|---|
| VAO | «ಗ್ರಾಮ_ಆಡಳಿತಾಧಿಕಾರಿಯ_ಹೆಸರು» | Case Worker (Committee) | «ವಿಷಯ_ನಿರ್ವಾಹಕರ_ಹೆಸರು__ಸಮಿತಿ» |
| RI | «ರಾಜಸ್ವ_ನಿರೀಕ್ಷಕರ_ಹೆಸರು» | Shirastedar (Committee) | «ಶಿರಸ್ತೇದಾರರ_ಹೆಸರು__ಸಮಿತಿ» |
| Case Worker (Saguvali Chit) | «ವಿಷಯ_ನಿರ್ವಾಹಕ__ಹಕ್ಕುಪತ್ರ» | Shirastedar (Saguvali Chit) | «ಶಿರಸ್ತೇದಾರ__ಹಕ್ಕುಪತ್ರ» |
| Tahsildar Saguvali Chit | «Tahsildar_Saguvali_Cheet» | Surveyor | «ನಕ್ಷೆ_ತಯಾರಿಸಿದ_ಭೂಮಾಪಕರ_ಹೆಸರು» |
| Saguvali Chit date | «ಸಾಗುವಳಿ_ಚೀಟಿ_ದಿನಾಂಕ» | Remind Date | «ಸಕ್ಷಮ_ಪ್ರಾಧಿಕಾರದಿಂದ_ಹಿಂದಿರುಗಿಸಿದ_ದಿನಾಂಕ» |

## ಸಮಿತಿ ವಿವರ

| | | | |
|---|---|---|---|
| Secretary | «Tahsildar_Committee» | President | «Committee_President» |
| Member 1 | «Committee_Member_1» | Member 2 | «Committee_Member_2» |
| Member 3 | «Committee_Member_3» | Date | «ಸಮಿತಿ_ಅನುಮೋದಿಸಿದ_ದಿನಾಂಕ» |

### ಭೂಮಿ ತಂತ್ರಾಂಶದಲ್ಲಿ_ ಅಳವಡಿಸಿದ ಲಾಗಿನ್ ಗಳ ಮಾಹಿತಿ

| ನಿರ್ವಹಿಸಿದ ಕಾರ್ಯ | ಅಧಿಕಾರಿ | ಹೆಸರು | ಸಮಯ |
|---|---|---|---|
| ದಾಖಲಾತಿ ನಮೂದಿಸಿರುವುದು | «DEO_Login» | «Master_DataDEO_Name1» | «DEO_Date» |

| | | | |
|---|---|---|---|
| [illegible] | «Tah_Login» | «Tah_Name» | «Tah_Date» |
| [illegible] | «DEO_Update_Login» | «DEO_Update_Name» | «DEO_Update_Date» |
| [illegible] | «RI_login» | «RI_Name» | «RI_date» |

ದಿನಾಂಕ 12 ಸೆಪ್ಟೆಂಬರ್ 2023 Verification File No. **«ಪರಿಶೀಲನೆ_ಕಡತ_ಸಂಖ್ಯೆ»**

ಅಂತಿಮವಾಗಿ ಸಮಿತಿಯು ಗುರುತಿಸಿದ ಇತರೇ ಅಂಶಗಳ ಬಗ್ಗೆ, ಟಿಪ್ಪಣಿಯನ್ನು ಮಂಡಿಸಲಾಯಿತು ಹಾಗೂ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮದ ಬಗ್ಗೆ ತನಿಖಾ ತಂಡದ ಅಭಿಪ್ರಾಯವನ್ನು ವರದಿಯೊಂದಿಗೆ ಮಂಡಿಸಿದೆ.

**ಅಂತಿಮ ವರದಿಯನ್ನು ಈ ವರದಿಯ ಕೊನೆಯಲ್ಲಿ ನಮೂದಿಸಿರುವ ಲಗತ್ತುಗಳೊಂದಿಗೆ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರಿಗೆ ಸಲ್ಲಿಸಲಾಯಿತು.**

**ತನಿಖಾ ತಂಡವು ಗುರುತಿಸಿದ ನ್ಯೂನತೆಗಳು**: ಮೇಲಿನ ಅಂಶಗಳನ್ನಾಧರಿಸಿ ಈ ಕೆಳಗಿನಂತೆ ಅನರ್ಹ, ಮರುಪರಿಶೀಲನೆಗೆ ಶಿಫಾರಸುಮಾಡಿದ ಮತ್ತು ಕಾರ್ಯವಿಧಾನ ವೈಫಲ್ಯ ಪ್ರಕರಣಗಳನ್ನು ಗುರುತಿಸಲಾಗಿದೆ

1. **ಅನರ್ಹ ಪ್ರಕರಣಗಳು**: **(Table 9)**

| ಕ್ರ.ಸಂ | ಅನರ್ಹತೆಗೆ ಕಾರಣ | ಒಟ್ಟು ಪ್ರಕರಣಗಳು |
|---|---|---|
| (i) | ಅರ್ಜಿಯನ್ನು ಸಲ್ಲಿಸಿದ ದಾಖಲಾತಿ ಲಭ್ಯವಿಲ್ಲದ ಪ್ರಕರಣಗಳು (ಅರ್ಜಿ ವಹಿಯನ್ನು ಪರಿಶೀಲಿಸಲಾಯಿತು). | 98 |
| (ii) | ಅರ್ಹತಾ ದಿನಾಂಕದಂದು (ನಮೂನೆ 50 ಮತ್ತು 53 ರಲ್ಲಿ 01 ಎಪ್ರಿಲ್ 1989 (SC/ST), 01 ಎಪ್ರಿಲ್ 1987 (ಇತರೆ) ನಮೂನೆ 57 ಕ್ಕೆ | 184 |

01 ಜನವರಿ 2004(SC/ST) 01 ಜನವರಿ 2002 (ಇತರೆ)) ಅರ್ಜಿದಾರರು 18 ವರ್ಷ ಪೂರೈಸದ ಪ್ರಕರಣಗಳು

| | | |
|---|---|---|
| (iii) | ಕಡತ ಲಭ್ಯವಿಲ್ಲದೇ ಇರುವ ಮತ್ತು ಭೂಮಿ ತಂತ್ರಾಂಶದಲ್ಲಿ ಸಹ ಹಕ್ಕುಪತ್ರ ಲಭ್ಯವಿಲ್ಲದ ಪ್ರಕರಣಗಳು | 192 |
| (iv) | ನಮೂನೆ 57 ರಲ್ಲಿ ಗೋಮಾಳ/ಶೇಂದಿವನ/ಶೇಂದಿವನ ಜಮೀನಿನಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು | 173 |
| (v) | ನಿರ್ಬಂಧಿತ ಅಂತರದಲ್ಲಿ ಮಂಜೂರಾತಿಗೊಂಡ ಪ್ರಕರಣಗಳು | 146 |
| (vi) | **ಅರಣ್ಯ ಇಲಾಖೆಯ ವರದಿಯಂತೆ ಅರಣ್ಯ ಭೂಮಿಯಲ್ಲಿ ನೀಡಿರುವ ಮಂಜೂರಾತಿಗಳು** | |
| | ಆಕಾರಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | 185 |
| | ಆಕಾರಬಂದನಂತೆ ಪೂರ್ಣ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | 50 |
| (vii) | ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ ಪ್ರಕರಣಗಳು | 9 |
| (viii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ಸಮಿತಿಯ ನಡವಳಿಯಲ್ಲಿ ತಿದ್ದುಪಡಿ ಮಾಡಿರುವ ಪ್ರಕರಣಗಳು | 156 |
| | ಸಮಿತಿಯಲ್ಲಿ ನಿರ್ಧರಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಮಂಜೂರು ಮಾಡಿದ ಪ್ರಕರಣಗಳು | 46 |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ಪ್ರಕರಣಗಳು | 01 |
| (ix) | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳ ಪೈಕಿ ಕಡತ ಲಭ್ಯವಿಲ್ಲದ ಪ್ರಕರಣಗಳು | 155 |

ಈ ಮೇಲಿನ ಅನರ್ಹತೆಗಳಿರುವ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ಸಿಬ್ಬಂದಿ/ಸಮಿತಿ ಸದಸ್ಯರ ವಿವರಗಳು ಈ ಕೆಳಗಿನಂತಿವೆ. ಪ್ರತಿ ಪ್ರಕರಣವನ್ನು ಬೇರೆ ಬೇರೆಯಾಗಿ ಪರಿಗಣಿಸಿದ್ದು ಮೇಲಿನ **Table 8** ರಲ್ಲಿ ವಿವರಿಸಿರುವ ಅಧಿಕಾರಿಗಳನ್ನು ಮಾತ್ರ ಹೆಸರಿಸಲಾಗಿದೆ. ಪ್ರತಿ ವ್ಯಕ್ತಿಯು ಇಂತಹ ಎಷ್ಟು ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ ಎಂದು ಸಹ ನಮೂದಿಸಲಾಗಿದೆ **(ಪ್ರಕರಣವಾರು ಪಟ್ಟಿಯನ್ನು ಅನುಬಂಧ 1ಅ ರಲ್ಲಿ ಲಗತ್ತಿಸಲಾಗಿದೆ)**

| **ಗ್ರಾಮ ಆಡಳಿತ ಅಧಿಕಾರಿ** | **ಪ್ರಕರಣಗಳ ಸಂಖ್ಯೆ** | **ವಿಸ್ತೀರ್ಣ** |
|---|---|---|
| ಬಿ ಚಂದ್ರಶೇಖರ | 129 | 440.29 |
| ಎಲ್ ಎಮ್ ಮಹೇಶ | 39 | 43.09 |
| ಸುರೇಶ್ ಘಂಟಿ | 31 | 65.15 |
| ಕೆ ಆರ್ ರವಿ | 27 | 46.34 |
| ಎಸ್ ಹೆಚ್ ಓಂಕಾರ | 26 | 60.07 |
| ಉದಯ್ ಕುಮಾರ್ ಚೌಡಕಿ | 24 | 40.09 |
| ಎನ್ ಕೆ ಸಂತೋಷ್ | 17 | 39.28 |
| ಎಮ್ ಎಸ್ ರಘುರಾಮ್ | 16 | 48.09 |
| ಹೆಚ್ ಮಂಜುನಾಥ | 16 | 34.21 |
| ಕೆ ಮೋಹನ್ | 14 | 27.08 |
| ಬಾರಿಕರ ಮೈಲಾರಪ್ಪ | 13 | 19.13 |
| ಡಿ ತೇಜಸ್ವಿನಿ | 13 | 16.26 |
| ಜಿ ಸಿ ಸುನಿಲ್ ಕುಮಾರ್ | 12 | 29.31 |
| ಬಾಲಕೃಷ್ಣ ಅರಸ | 11 | 35.06 |
| ಸಿ ಕೆ ಗಿರೀಶ | 11 | 12.37 |
| ಟಿ ಎಮ್ ಕಾವ್ಯ | 9 | 11.15 |
| ಎನ್ ವಿ ಪುಷ್ಪಲತಾ | 9 | 17.03 |
| ಎಮ್ ಮನುಕುಮಾರ | 9 | 17.08 |
| ರವೀಂದ್ರ | 9 | 30.03 |
| ಕೆ ಚಂದ್ರಶೇಖರ | 9 | 20.28 |
| ಬಿ ದೇವರಾಜಪ್ಪ | 7 | 15.08 |
| ಅಂಬರೀಷ್ | 6 | 10.20 |

| | | |
|---|---|---|
| ಬಿ ರವಿ | 6 | 5.32 |
| ಎ ಎಮ್ ಶೃತಿ | 6 | 10.05 |
| ಪಿ ಪಿ ಲೋಕೇಶ್ | 5 | 7.32 |
| ವಿರೇಶ ತರವಂದ್ | 5 | 12.14 |
| ಜಿತೇಂದ್ರಸಿಂಗ್ ನಾಯ್ಕ | 4 | 9.33 |
| ಶಿಲ್ಪ ಅರಸೀಕೆರೆ | 3 | 6.30 |
| ಜಿ ಕೆ ಶೀಲಾ | 3 | 8.02 |
| ಕೆ ಎಸ್ ರವಿಕುಮಾರ್ | 3 | 9.20 |
| ಕುಮಾರಸ್ವಾಮಿ | 3 | 8.30 |
| ಸಂತೋಷ ಗಸ್ತಿ | 3 | 4.17 |
| ಮಧುಸೂದನ್ | 2 | 2.35 |
| ಕೆ ಮಧುಸೂದನ್ | 2 | 0.37 |
| ಹೆಚ್ ಸಿ ಮಹೇಶ | 2 | 3.26 |
| ಮೋಹನ್ | 2 | 2.36 |
| ಜಿ ಎಮ್ ಕುಮಾರ | 1 | 2.27 |
| ಜಿ ನವೀನ್ ಕುಮಾರ್ | 1 | 3.35 |
| ಪಿ ಆರ್ ರವಿಕುಮಾರ | 1 | 2.20 |
| ಕೆ ಆರ್ ಪ್ರದೀಪಕುಮಾರ್ | 1 | 4.00 |
| ಅಶೋಕ್ ಫ್ರಾನ್ಸಿಸ್ | 1 | 3.20 |
| ಜಿ ಸಿ ಕುಮಾರಸ್ವಾಮಿ | 1 | 2.03 |
| ಪುಷ್ಪಲತಾ | 1 | 0.30 |
| ಕೊಟ್ರೇಶ್ ಹೊಸಮನಿ | 1 | 1.10 |
| ಟಿ ಎಮ್ ಶಿವಕುಮಾರ / ಆರ್ ಹನುಮಂತಪ್ಪ | 1 | 1.20 |
| ಜಿ ಆರ್ ಗಿರೀಶ | 1 | 2.20 |
| ಟಿ ಎಮ್ ಶಿವಕುಮಾರ | 1 | 2.24 |
| ಎಲ್ ಕೆ ಶಿವಣ್ಣ | 1 | 2.20 |
| ಎನ್ ಎಮ್ ಮಹೇಶ | 1 | 0.24 |

| | | |
|---|---|---|
| ಬಿ ಎಸ್ ಕಿರಣ್ ಕುಮಾರ್ | 1 | 2.10 |
| ಎಮ್ ಎಸ್ ಪಾಲಾಕ್ಷಮೂರ್ತಿ | 1 | 1.20 |
| ದತ್ತಾತ್ರೇಯ | 1 | 0.11 |
| ಎಸ್ ಈ ಸುರೇಶ್ | 1 | 2.16 |
| ಹೆಚ್ ಸಿ ಸುರೇಶ್ | 1 | 2.35 |
| ಎನ್ ಸಿ ಮಲ್ಲಿಕಾರ್ಜುನ | 1 | 4.19 |
| ಜಿ ಎಸ್ ದಿನೇಶ | 1 | 3.00 |
| ಮುತ್ತಪ್ಪ ದಶರಥ ಸಂಗೋಗಿ | 1 | 0.35 |

| ರಾಜಸ್ವ ನಿರೀಕ್ಷಕರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| ಕೆ ಎಮ್ ಪ್ರಸನ್ನ | 139 | 436.19 |
| ಜಿತೇಂದ್ರಸಿಂಗ್ ನಾಯ್ಕ | 133 | 254.37 |
| ಬಿ ಸಿ ಕಲ್ಲುರುಡಪ್ಪ | 54 | 138.34 |
| ಬಿ ಚಂದ್ರಶೇಖರ | 44 | 102.39 |
| ಬಿ ಕಿರಣ್ ಕುಮಾರ | 38 | 52.05 |
| ಕೆ ರಮೇಶ | 28 | 45.29 |
| ಬೆಂಕಿರಂಗಶೆಟ್ಟಿ | 25 | 56.38 |
| ಕೆ ಆರ್ ರವಿ | 18 | 28.11 |
| ವೀರಯ್ಯ | 11 | 20.08 |
| ಜಿ ಶ್ರೀನಿವಾಸಮೂರ್ತಿ | 10 | 25.39 |
| ಕ ಬಿ ಶಿವಪ್ರಕಾಶ | 8 | 18.24 |
| ಎನ್ ಜಿ ಮಾರುತಿ ಪ್ರತಾಪ್ | 7 | 12.14 |
| ಸುರೇಶ್ ಘಂಟಿ | 5 | 6.32 |
| ಆರ್ ರವಿಕುಮಾರ್ | 4 | 10.30 |
| ಹೇಮಂತ್ ಕುಮಾರ್ | 3 | 6.30 |
| ಎಮ್ ವಿ ಸಿ ಸ್ವಾಮಿ | 3 | 7.11 |
| ಬಿ ರವಿ | 2 | 4.04 |
| ಅನಂತರಾಮ್ ನಾಯ್ಕ | 2 | 6.01 |
| ಹೆಚ್ ಸಿ ಸುರೇಶ್ | 2 | 5.16 |
| ಟಿ ಸಿ ಶಾಂತ | 1 | 2.20 |
| ಬಿ ವಿ ರವಿಕುಮಾರ | 1 | 2.20 |
| ಎನ್ ಸಿ ಮಲ್ಲಿಕಾರ್ಜನ | 1 | 1.20 |

| ವಿಷಯ ನಿರ್ವಾಹಕರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| ನಾಗಮಣಿ | 210 | 601.07 |

| | | |
|---|---|---|
| ಪಿ ಪಿ ಲೋಕೇಶ್ | 94 | 174.12 |
| ಕೆ ಚಂದ್ರಶೇಖರ್ | 78 | 143.26 |
| ಅಣ್ಣಯ್ಯ | 78 | 204.20 |
| ಜಯರಾಜ್ | 56 | 96.37 |
| ಬಿ ಎನ್ ಚಂದ್ರಶೇಖರ್ | 37 | 110.00 |
| ಪಿ ಗಿರೀಶ | 27 | 47.28 |
| ಹೆಚ್ ತಿಪ್ಪೇಶಪ್ಪ | 14 | 24.03 |
| ಬಿ ಎಸ್ ಚಂದ್ರಮ್ಮ | 9 | 15.09 |
| ಜಿ ಆರ್ ಗಿರೀಶ್ | 9 | 25.39 |
| ಕೆ ಎಮ್ ರಮೇಶಪ್ಪ | 6 | 16.31 |
| ಕೆ ಸಿ ಮಧುರ | 5 | 15.02 |
| ಹೆಚ್ ಸಿ ಸುರೇಶ | 4 | 11.10 |
| ಸುರೇಶ | 1 | 4.23 |
| ಬಿ ಸಿ ಕಲ್ಲರುಡಪ್ಪ | 1 | 1.00 |

| ಶಿರಸ್ತೇದಾರರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| ವೈ ಕೆ ಶಿವಮೂರ್ತಿ | 244 | 665.09 |
| ತಿಪ್ಪೇಸ್ವಾಮಿ | 202 | 468.08 |
| ಬಿ ಸಿ ಕಲ್ಲರುಡಪ್ಪ | 201 | 250.21 |
| ಕೆ ವಿ ನಂಜುಂಡಯ್ಯ | 130 | 369.09 |

| ಭೂಮಿ ಆಪರೇಟರ್ | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| Anjali C S | 85 | 242.13 |
| Shruti K. A | 80 | 253.30 |
| Suma K S | 58 | 150.10 |
| Jayalakshmi L | 43 | 113.21 |

| | | |
|---|---|---|
| Suma R | 23 | 81.25 |
| Ranjitha R | 16 | 56.27 |
| Sangeetha | 10 | 20.03 |
| Spoorthy M. O | 8 | 9.38 |
| Kalmurudappa B. C | 3 | 8.20 |
| G. M. Veerayya | 2 | 5.21 |
| Prasanna K. M | 2 | 4.05 |
| Jnaneshvari | 1 | 3.38 |
| Meenakshi B. K | 1 | 0.32 |
| Ramesh K | 1 | 3.00 |
| Uma | 1 | 1.38 |

| ಕಛೇರಿ ರಾಜಸ್ವ ನಿರೀಕ್ಷಕರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| Suresh H. C | 62 | 200.33 |
| Benki Ranga Shetti | 39 | 112.00 |
| Chndrashekar B. N | 21 | 60.38 |
| Prasanna K. M | 20 | 53.32 |
| Mallikarjun N. C | 16 | 47.03 |
| Ravi K. R | 10 | 29.20 |
| Jithendra Sing Nayak | 8 | 14.27 |
| Ravikumar K. S | 6 | 15.12 |
| Ramesh K | 6 | 15.30 |
| M. V. C. Swami | 6 | 11.10 |
| Kalmurudappa B. C | 5 | 13.31 |
| Nagaraju S | 2 | 8.38 |
| Kiran Kumar | 2 | 2.17 |
| G. M. Veerayya | 2 | 5.21 |
| Ravikumar B. V | 1 | 3.07 |
| Srinivasa Murthy G | 1 | 4.38 |

| | | |
|---|---|---|
| Chndrashekar B. | 1 | 0.32 |
| Ravikumar R | 1 | 0.38 |

| ಭೂಮಾಪಕರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| ಎಸ್.ಗಂಗಾಧರಪ್ಪ | 171 | 347.31 |
| ದಿಲೀಪ ಎಚ್ ಪಿ | 69 | 135.23 |
| ಎಸ್ ಜಿ ಎಸ್ ನಾಯಕ | 47 | 115.14 |
| ಧನರಾಜ ಎಂ.ಟಿ. | 33 | 120.02 |
| ಶ್ರೀನಿವಾಸ ಆರ್ | 30 | 100.02 |
| ಮಂಜೇಗೌಡ ಜಿ ಎನ್ | 11 | 25.07 |
| ವೆಂಕಟೇಶ ಮೂರ್ತಿ ಎ.ಎನ್ | 9 | 27.26 |
| ಎಚ್ ಆರ್ ಪ್ರಸನ್ನ | 8 | 28.14 |
| ಜಿತೇಂದ್ರನಾಯ್ಕ | 7 | 13.19 |
| ಕಾಮೇಗೌಡ ಕೆ.ಸಿ | 5 | 11.25 |
| ಎಚ್.ರುಕ್ಮಾ | 5 | 3.12 |
| ಎಚ್.ಸಿ.ಸುರೇಶ | 4 | 8.10 |
| ಮಂಜುನಾಥ ಎಚ್ | 2 | 5.06 |
| ಟಿ.ಬಿ. ಮೂರ್ತಿ | 2 | 5.16 |
| ಎಚ್.ಮುರಳಿಸಿಂಗ್ | 1 | 2.10 |
| ಸಂತೀಷ ಕುಮಾರ | 1 | 3.30 |
| ಬೈರೇಸ್ವಾಮಿ | 1 | 2.25 |

| ತಹಶೀಲ್ದಾರರು | ಪ್ರಕರಣಗಳ ಸಂಖ್ಯೆ | ವಿಸ್ತೀರ್ಣ (ಎ.ಗುಂ) |
|---|---|---|
| ಎಂ. ಭಾಗ್ಯ | 475 | 1315.02 |
| ಉಮೇಶ ಜಿ. | 413 | 932.06 |
| ವಿಶ್ವನಾಥ ಎಚ್ | 63 | 197.29 |

| | | |
|---|---|---|
| ಕೆ ಮಹೇಶಚಂದ್ರ | 16 | 43.23 |
| ಧರ್ಮೋಜಿ ರಾವ್ | 1 | 3.38 |
| ಲಕ್ಷ್ಮಣಪ್ಪ | 1 | 4.23 |
| ಸಿ. ಚಿನ್ನರಾಜು | 1 | 4.30 |
| ನಂಜುಂಡಪ್ಪ | 1 | 2.24 |

ಸರಕಾರದ ಸುತ್ತೋಲೆ ಆರ್.ಡಿ 19 ಎಲ್ ಜಿ ಪಿ 92 ದಿನಾಂಕ 26 ಜೂನ್ 1992ರಲ್ಲಿ ಸೂಚಿಸಿರುವಂತೆ ಭೂ ಸಕ್ರಮೀಕರಣ ಸಮಿತಿಯು ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರ ವರದಿಯ ಮೇಲೆ ಸಂಪೂರ್ಣವಾಗಿ ಅವಲಂಭಿತರಾಗದೇ ಸ್ವಂತ ತನಿಖೆಯನ್ನು ನಡೆಸುವ ಅಗತ್ಯವಿದೆ ಆದರೆ ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಸಮಿತಿಯು ಯಾವುದೇ ತನಿಖೆಯನ್ನು ನಡೆಸದೇ ಇರುವುದನ್ನು ಗುರುತಿಸಲಾಗಿದೆ ಸರಕಾರದಿಂದ ನಿಯೋಜನೆಗೊಂಡ ಸಮಿತಿಯು ಸರಕಾರಿ ಆಸ್ತಿಯನ್ನು ಉಳಿಸುವ ಮತ್ತು ಅಧಿಕಾರಿಗಳು / ಸಿಬ್ಬಂದಿ ಕಾನೂನಾತ್ಮಕವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವ ಮಹತ್ತರ ಹೊಣೆಯನ್ನು ಹೊಂದಿರುತ್ತದೆ ಆದುದರಿಂದ ಅನರ್ಹ ಪ್ರಕರಣಗಳ ಮಂಜೂರಾತಿಗೆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ನೇರವಾಗಿ ಹೊಣೆಗಾರರಾಗಿರುತ್ತಾರೆ. **ಮೇಲಿನ ಅನರ್ಹ ಪ್ರಕರಣಗಳ ಪೈಕಿ ಸಮಿತಿಗೆ ಮಂಡಿಸಲ್ಪಟ್ಟ ಪ್ರಕರಣಗಳಲ್ಲಿ ಈ ಕೆಳಗಿನ ಅಧ್ಯಕ್ಷರು ಮತ್ತು ಸದಸ್ಯರು ಅವರ ಹೆಸರಿನ ಎದುರಿಗೆ ಗುರಿತಿಸಿರುವಷ್ಟು ಮಂಜೂರಾತಿಗಳಲ್ಲಿ ಸಮಿತಿಯ ನಡವಳಿಗೆ ಸಹಿ ಮಾಡಿರುವುದು ಕಂಡುಬರುತ್ತದೆ. ಆದುದರಿಂದ ಸಮಿತಿಯ ಅಧ್ಯಕ್ಷರ ಮತ್ತು ಸದಸ್ಯರ ವಿವರವನ್ನು ಸರಕಾರದ ಅವಗಾಹನೆಗೆ ಸಲ್ಲಿಸಿದೆ.**

| **ಸಮಿತಿಯ ಅಧ್ಯಕ್ಷರು** | **ಪ್ರಕರಣಗಳ ಸಂಖ್ಯೆ** | **ವಿಸ್ತೀರ್ಣ (ಎ.ಗುಂ)** |
|---|---|---|
| ವೈ.ಎಸ್.ವಿ. ದತ್ತ | 252 | 719.10 |
| ಬಿ.ಎಲ್. ಪ್ರಕಾಶ್ | 141 | 271.30 |
| ಬೆಳ್ಳಿ ಪ್ರಕಾಶ್ | 139 | 250.39 |
| ಸಿ.ಟಿ. ರವಿ | 32 | 80.8 |

| **ಸಮಿತಿಯ ಸದಸ್ಯರು** | **ಪ್ರಕರಣಗಳ ಸಂಖ್ಯೆ** | **ವಿಸ್ತೀರ್ಣ (ಎ.ಗುಂ)** |
|---|---|---|
| ತಿಮ್ಮೇಗೌಡ | 252 | 719.10 |

| | | |
|---|---|---|
| ನಾಗರಾಜ್ | 252 | 719.10 |
| ಪುಷ್ಪ | 252 | 719.10 |
| ಹಂಪಯ್ಯ | 141 | 271.30 |
| ಜ್ಯೋತಿ | 141 | 271.30 |
| ನಂದೀಶ್ | 141 | 271.30 |
| ಎಸ್.ಆರ್. ಸತೀಶ | 139 | 250.39 |
| ಮಂಜಾನಾಯ್ಕ | 139 | 250.39 |
| ಶಶಿಕಲ | 139 | 250.39 |
| ಸಿ.ಸಿ. ಈರೇಗೌಡ | 32 | 80.08 |
| ಶಾಂತಕುಮಾರ್ | 32 | 80.08 |
| ಶೀಲಾ ಜಯರಾಮ್ | 32 | 80.08 |

**ಮೇಲಿನ ಅನರ್ಹತೆಗಳ ಪೈಕಿ ಕೆಲವು ಪ್ರಕರಣಗಳಲ್ಲಿ ಒಂದಕ್ಕಿಂತ ಹೆಚ್ಚಿನ ನ್ಯೂನತೆಗಳು ಇರುವುದರಿಂದ ಒಟ್ಟು 936 ಪ್ರಕರಣಗಳನ್ನು ಅನರ್ಹ ಎಂದು ಪರಿಗಣಿಸಬಹುದಾಗಿದೆ ಇವುಗಳಲ್ಲಿ ಭಾದಿತ ವಿಸ್ತೀರ್ಣ 2349.07 ಎಕರೆ. ಸದರಿ ಮಂಜೂರಾತಿ ಪ್ರಕರಣಗಳನ್ನು ನಿಯಮಾನುಸಾರ ರದ್ದುಪಡಿಸಿ ಜಮೀನನ್ನು ಸರಕಾರದ ವಶಕ್ಕೆ ಪಡೆಯಬಹುದಾಗಿದೆ.** (ಅನರ್ಹ ಪ್ರಕರಣಗಳ ಪಟ್ಟಿಯನ್ನು ಅನುಬಂಧ 2 ರಲ್ಲಿ ಲಗತ್ತಿಸಲಾಗಿದೆ) **ಮೇಲಿನ ಟೇಬಲ್ ನಲ್ಲಿ ಗುರುತಿಸಿರುವ ಅಧಿಕಾರಿ/ಸಿಬ್ಬಂದಿ, ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸರ್ಕಾರವು ತೀರ್ಮಾನಿಸಬೇಕಾಗಿದೆ.**

ಈ ಪೈಕಿ ಕಡತ ಲಭ್ಯವಿಲ್ಲದೇ, ಅರ್ಜಿ ವಹಿಯಲ್ಲಿ ನಮೂದಿಲ್ಲದೇ, ಸಮಿತಿಯಲ್ಲಿ ಮಂಡಿಸದೇ ಪಹಣಿ ನಮೂದಾದ ಪ್ರಕರಣಗಳ ಪಟ್ಟಿಯನ್ನು **ಅನುಬಂಧ** 7 ರಲ್ಲಿ ನೀಡಲಾಗಿದ್ದು ಈ ಪಟ್ಟಿಯಲ್ಲಿರುವ ಫಲಾನುಭವಿಯನ್ನು ಸಹ ತಪ್ಪೆಸಗಿದ ಎಂದು 192(A)(3) ರಲ್ಲಿ ಕ್ರಮ ಜರುಗಿಸಬಹುದು

2. **ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳು: (Table 10)**

| **ಕ್ರ.ಸಂ** | **ಮರುಪರಿಶೀಲನೆಗೆ ಶಿಫಾರಸು ಮಾಡಲು ಕಾರಣ** | **ಒಟ್ಟು ಪ್ರಕರಣಗಳು** |
|---|---|---|
| (i) | ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | 345 |
| (ii) | ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೇ ಭಾಗಶಃ ಅರಣ್ಯ ಸಂಬಂಧಿ ವಿಸ್ತೀರ್ಣ ಹೊಂದಿರುವ ಸರ್ವೆನಂಬರುಗಳಲ್ಲಿ ನೀಡಿದ | 631 |

| | | |
|---|---|---|
| | ಮಂಜೂರಾತಿಗಳು. | |
| (iii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ ಪ್ರಕರಣಗಳು | 224 |
| (iv) | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳ ಪೈಕಿ ಕಡತ ಲಭ್ಯವಿರುವ ಪ್ರಕರಣಗಳು | 727 |
| | ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು. | 42 |
| (v) | ಅಮೃತಮಹಲ್ ಕಾವಲು ಸರ್ವೆ ನಂಬರುಗಳಲ್ಲಿ ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆಯದೇ ಮಂಜೂರು ಮಾಡಿರುವ ಪ್ರಕರಣಗಳು | 197 |
| (vi) | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | 170 |
| (vii) | ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | 330 |
| (viii) | **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| | ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | 35 |
| | ವಹಿಯಲ್ಲಿ ನಮೂದಿರುವಂತೆ ವಜಾಗೊಂಡಿರುವ ಪ್ರಕರಣಗಳು. | 134 |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಸರ್ವೆ ನಂಬರು ಬದಲಾದ ಪ್ರಕರಣಗಳು | 18 |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಗ್ರಾಮದ ಹೆಸರು ಬದಲಾದ ಪ್ರಕರಣಗಳು | 118 |
| (ix) | ಅರ್ಜಿ ವಹಿ ಶಿಥಿಲವಾಗಿರುವ ಪ್ರಕರಣಗಳು | 70 |
| (x) | ಒಂದೇ ಮಂಜೂರಾತಿಗೆ ಎರಡುಸಲ ಮ್ಯುಟೇಶನ್ ಮಾಡಿರುವ ಪ್ರಕರಣಗಳು | 10 |
| (xi) | ಅನಧಿಕೃತ ವಿಭಾಗಪತ್ರ ಲಗತ್ತಿಸಿ ಅರ್ಹತೆಗಿಂತ ಹೆಚ್ಚುವರಿ ಭೂಮಿ ಮಂಜೂರು ಮಾಡಿದ ಪ್ರಕರಣಗಳು. | 114 |
| (xii) | ಸರ್ವೆ ದಾಖಲೆಯಂತೆ ಬೀಳು ಅಥವಾ ಕರ್ದಾ ದಾಖಲಾಗಿರುವ ಭೂಮಿಯಲ್ಲಿ ನೀಡಿರುವ ಮಂಜೂರಾತಿ | 315 |

**ಮೇಲಿನ ಅನರ್ಹತೆಗಳ ಪೈಕಿ ಕೆಲವು ಪ್ರಕರಣಗಳಲ್ಲಿ ಒಂದಕ್ಕಿಂತ ಹೆಚ್ಚಿನ ನ್ಯೂನತೆಗಳು ಇರುವುದರಿಂದ ಮತ್ತು 1 ನೇ ಪಟ್ಟಿಯಲ್ಲಿ ಹೆಸರಿಸಿರುವ ಪ್ರಕರಣ ಹೊರತುಪಡಿಸಿ ಒಟ್ಟು 1062 ಪ್ರಕರಣಗಳನ್ನು ಮರುಪರಿಶೀಲನೆಗೆ ಪರಿಗಣಿಸಬಹುದಾಗಿದೆ ಇವುಗಳಲ್ಲಿ ಬಾಧಿತ ವಿಸ್ತೀರ್ಣ**

2371.36 ಎಕರೆ. **(ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳ ಪಟ್ಟಿಯನ್ನು ಅನುಬಂಧ 4 ರಲ್ಲಿ ಲಗತ್ತಿಸಲಾಗಿದೆ)** ಈ ಭೂಮಿಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಸೂಚಿಸಬಹುದಾಗಿದೆ. ಅರ್ಹ ಫಲಾನುಭವಿಗಳಿಗೆ ಅಧಿಕಾರಿಗಳ ತಪ್ಪಿನಿಂದ ತೊಂದರೆ ಆಗುವುದನ್ನು ತಪ್ಪಿಸಲು ಈ ಅನರ್ಹತೆಗಳನ್ನು ಸರಿಪಡಿಸಲು ಸರಕಾರದ ಹಂತದಲ್ಲಿ ಕೆಳಗಿನ ಪಟ್ಟಿಯಲ್ಲಿ ಸೂಚಿಸಿರುವಂತೆ ಒಂದು ಬಾರಿ ಅವಕಾಶ ಕಲ್ಪಿಸಬಹುದು. **(Table 11)**

| ಕ್ರ.ಸಂ | **ಮರುಪರಿಶೀಲನೆಗೆ ಶಿಫಾರಸು ಮಾಡಲು ಕಾರಣ** | **ಸರಿಪಡಿಸಲು ಕೈಗೊಳ್ಳಬಹುದಾದ ಕ್ರಮ** |
|---|---|---|
| (i) | ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | ನಿಯಮ 97(4) ರಂತೆ ಮಾನ್ಯ ಜಿಲ್ಲಾಧಿಕಾರಿಗಳು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಪರಿಗಣಿಸಬಹುದು |
| (ii) | ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೇ ಭಾಗಶಃ ಅರಣ್ಯ ಸಂಬಂಧಿ ವಿಸ್ತೀರ್ಣ ಹೊಂದಿರುವ ಸರ್ವೆನಂಬರುಗಳಲ್ಲಿ ನೀಡಿದ ಮಂಜೂರಾತಿಗಳು. | ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದು ಕೇವಲ ಅನರ್ಹ ಪ್ರಕರಣಗಳನ್ನು ರದ್ದುಪಡಿಸಬಹುದು |
| (iii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | ಈ ಮೈಕಿ ಅರ್ಹ ಪ್ರಕರಣಗಳನ್ನು ಹೊಸದಾಗಿ ಸಮಿತಿಗೆ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ ಪರಿಗಣಿಸಬಹುದು |
| | ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ ಪ್ರಕರಣಗಳು | |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳು. | |
| (iv) | ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು. | ಕಡತವನ್ನು ಹುಡುಕಿ ಪರಿಶೀಲನೆ ನಡೆಸಬಹುದು. ಅರ್ಹ ಪ್ರಕರಣ ಗುರುತಿಸಿ ಕಡತವನ್ನು ಮರುಸೃಷ್ಟಿ ಮಾಡಬಹುದು |
| (v) | ಅಮೃತಮಹಲ್ ಕಾವಲು ಸರ್ವೆ ನಂಬರುಗಳಲ್ಲಿ ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆಯದೇ ಮಂಜೂರು ಮಾಡಿರುವ ಪ್ರಕರಣಗಳು | ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆದು ಕೇವಲ ಅನರ್ಹ ಪ್ರಕರಣಗಳನ್ನು ರದ್ದುಪಡಿಸಬಹುದು |

| | | |
|---|---|---|
| (vi) | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | ಅರ್ಹತಾ ದಿನಾಂಕದಂದು ಉಳುಮೆ ಮಾಡಿರುವ ಬಗ್ಗೆ ಮರಳಿ ವರದಿ ಪಡೆದು ತೀರ್ಮಾನಿಸಬಹುದು |
| (vii) | ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | ವಯಸ್ಸಿನ ದಾಖಲೆ ಪಡೆದು ತೀರ್ಮಾನಿಸಬಹುದು |
| (viii) | **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| | ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | ಎರಡು ಬಾರಿ ಮ್ಯುಟೇಶನ್ ಆಗದೇ ಇರುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬಹುದು |
| | ವಹಿಯಲ್ಲಿ ನಮೂದಿರುವಂತೆ ವಜಾಗೊಂಡಿರುವ ಪ್ರಕರಣಗಳು | ಸಕ್ಷಮ ಪ್ರಾಧಿಕಾರದಿಂದ ಹಿಂದಿರುಗಿಸಿರುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸಬಹುದು |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಸರ್ವೆ ನಂಬರು ಬದಲಾದ ಪ್ರಕರಣಗಳು | ಕ್ಷೇತ್ರ ಪರಿಶೀಲನೆಯಿಂದ ಸುತ್ತೋಲೆ ಸಂಖ್ಯೆ ಆರ್.ಡಿ 50 ಎಲ್.ಜಿ.ಪಿ 92 ದಿನಾಂಕ 14 ಜುಲೈ 1992 ರ (b) ರಲ್ಲಿ ಸೂಚಿಸಿರುವಂತೆ ಕ್ರಮವಹಿಸಬಹುದು |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಗ್ರಾಮದ ಹೆಸರು ಬದಲಾದ ಪ್ರಕರಣಗಳು | |
| (ix) | ಅರ್ಜಿ ವಹಿ ಶಿಥಿಲವಾಗಿರುವ ಪ್ರಕರಣಗಳು | ಅರ್ಜಿದಾರರಿಂದ ಅರ್ಜಿ ಸ್ವೀಕೃತಿ ಮಾಹಿತಿ ಅಥವಾ ಇತರ ಸೂಕ್ತ ತನಿಖೆಯಿಂದ ಅರ್ಹತೆಯನ್ನು ಖಚಿತಪಡಿಸಿಕೊಳ್ಳಬಹುದು |
| (x) | ಒಂದೇ ಮಂಜೂರಾತಿಗೆ ಎರಡುಸಲ ಮ್ಯುಟೇಶನ್ ಮಾಡಿರುವ ಪ್ರಕರಣಗಳು. | ಉಪವಿಭಾಗಾಧಿಕಾರಿಗಳು ಪರಿಶೀಲಿಸಿ ಇತರೇ ನ್ಯೂನತೆ ಕಂಡುಬರದೇ ಇದ್ದಲ್ಲಿ ಒಂದು ಮ್ಯುಟೇಶನ್ ರದ್ದುಪಡಿಸಬಹುಸು |
| (xi) | ಅನಧಿಕೃತ ವಿಭಾಗಪತ್ರ ಲಗತ್ತಿಸಿ ಅರ್ಹತೆಗಿಂತ ಹೆಚ್ಚುವರಿ ಭೂಮಿ ಮಂಜೂರು ಮಾಡಿದ ಪ್ರಕರಣಗಳು. | ಕುಟುಂಬದ / ವ್ಯಕ್ತಿಯ ಹಿಡುವಳಿಯನ್ನು ನಿಯಮಾನುಸಾರ ಮರುಪರಿಶೀಲಿಸಿ ಮಂಜೂರಾತಿಯ ಬಗ್ಗೆ ತೀರ್ಮಾನ ಕೈಗೊಳ್ಳಬಹುದು |
| (xii) | ಸರ್ವೆ ದಾಖಲೆಯಂತೆ ಬೀಳು ಅಥವಾ ಕರಾರ್ ದಾಖಲಾಗಿರುವ ಭೂಮಿಯಲ್ಲಿ ನೀಡಿರುವ ಮಂಜೂರಾತಿ | ಮಂಜೂರಾತಿಯ ನೈಜತೆಯನ್ನು ಮರುಪರಿಶೀಲಿಸಬಹುದು. ಬೀಳು ಆಗಿರುವ ಬಗ್ಗೆ ಮತ್ತು ಅರ್ಜಿದಾರರೇ ಉಳುಮೆ ಮಾಡುತ್ತಿರುವ ಬಗ್ಗೆ ಹಾಗೂ ಮೂಲ |

| | | |
|---|---|---|
| | | ಮಾಲೀಕರ ತಕರಾರು ಇದೆಯೇ ಎಂದು ಪರಿಶೀಲಿಸಬೇಕು. |

3. **ಕಾರ್ಯವಿಧಾನ ವೈಫಲ್ಯವನ್ನು ಗುರುತಿಸಿರುವ ಪ್ರಕರಣಗಳು: (Table 12)**

| ಕ್ರ.ಸಂ | ಗುರುತಿಸಿರುವ ಕಾರ್ಯವಿಧಾನ ವೈಫಲ್ಯ | ಒಟ್ಟು ಪ್ರಕರಣಗಳು |
|---|---|---|
| (i) | ಮಂಜೂರಾತಿ ವರದಿಗಳು ಅಪೂರ್ಣವಾಗಿರುವ ಪ್ರಕರಣಗಳು. | 55 |
| (ii) | ಟಿಪ್ಪಣಿ ಲಭ್ಯವಿಲ್ಲದ / ಅಪೂರ್ಣ ಟಿಪ್ಪಣಿ ಇರುವ ಪ್ರಕಣಗಳು. | 206 |
| (iii) | ಸರ್ವೆ ನಕಾಶೆ ಲಭ್ಯವಿಲ್ಲದ ಪ್ರಕರಣಗಳು | 196 |
| (iv) | ಹಣಸಂದಾಯ ರಸೀದಿ ಲಭ್ಯವಿಲ್ಲದ ಪ್ರಕರಣಗಳು. | 35 |
| (v) | ಸಾರ್ವಜನಿಕ ಮಾಹಿತಿ (ಆಕ್ಷೇಪಣೆ ಕೋರುವ) ನಮೂನೆ ಲಭ್ಯವಿಲ್ಲದ ಪ್ರಕರಣಗಳು. | 19 |
| (vi) | ಆಕಾರಬಂದ ವಿಸ್ತೀರ್ಣಕ್ಕೂ ಹೆಚ್ಚಿನ ವಿಸ್ತೀರರ್ಣ ಪಹಣಿಯಲ್ಲಿರುವ ಪ್ರಕಣಗಳು. | 391 |
| (vii) | ಪೈಕಿ ಪಹಣಿಗಲ್ಲಿ ಮಂಜೂರಾತಿ ನೀಡಿರುವ ಮಂಜೂರಾತಿಗಳು. | 649 |
| (viii) | **ಕಡತ ಲಭ್ಯವಿರುವ ಪ್ರಕರಣಗಳ ಪೈಕಿ ಭೂಮಿ ತಂತ್ರಾಂಶದಲ್ಲಿ ಅಳವಡಿಸುವಾಗ ಹಕ್ಕುಪತ್ರವನ್ನು ಕ್ರಮಬದ್ಧವಾಗಿ ಲಗತ್ತಿಸದ ಪ್ರಕರಣಗಳು.** | |
| | ಹಕ್ಕುಪತ್ರದ ಅಪೂರ್ಣ ಪ್ರತಿ ಲಗತ್ತಿಸಿರುವ ಪ್ರಕರಣಗಳು | 1389 |
| | ಭೂಮಿ ತಂತ್ರಾಂಶಕ್ಕೆ ಲಗತ್ತಿಸಿರುವ ಪ್ರತಿ ತಂತ್ರಾಂಶದಲ್ಲಿ ಲಭ್ಯವಿಲ್ಲ | 599 |
| (ix) | ವಿಷಯ ನಿರ್ವಾಹಕರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | 122 |
| (x) | ಶಿರಸ್ತೇದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | 138 |
| (xi) | ತಹಶೀಲ್ದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | 303 |
| (xii) | ಪಹಣಿಯಲ್ಲಿ ಪರಭಾರ ನಿಷೇಧ ನಮೂದಾಗದ ಅಥವಾ ತಪ್ಪಾಗಿ ನಮೂದಾದ ಪ್ರಕರಣಗಳು. | 577 |

**ಮೇಲಿನ ಕಾರ್ಯವೈಫಲ್ಯ ಪ್ರಕರಣಗಳ ಪೈಕಿ ಕೆಲವು ಪ್ರಕರಣಗಳಲ್ಲಿ** ಒಂದಕ್ಕಿಂತ **ಹೆಚ್ಚಿನ ನ್ಯೂನತೆಗಳು ಇರುವುದರಿಂದ,** 1 **ನೇ ಮತ್ತು** 2**ನೇ ಪಟ್ಟಿಯಲ್ಲಿ ಹೆಸರಿಸಿರುವ ಪ್ರಕರಣ ಹೊರತುಪಡಿಸಿ** ಒಟ್ಟೂ **245 ಪ್ರಕರಣಗಳಲ್ಲಿ ಕಾರ್ಯವಿಧಾನ ವೈಫಲ್ಯಗಳನ್ನು** ಗುರುತಿಸಲಾಗಿದೆ **ಇವುಗಳಲ್ಲಿ ಭಾದಿತ ವಿಸ್ತೀರ್ಣ** 517.26 ಎಕರೆ. **(ಅನರ್ಹತೆವಾರು ಪಟ್ಟಿಯನ್ನು ಅನುಬಂಧ** 5 ರಲ್ಲಿ **ಮತ್ತು ಕಾರ್ಯವಿಧಾನ ವೈಫಲ್ಯದ ಪ್ರಕರಣಗಳ ಪಟ್ಟಿಯನ್ನು ಅನುಬಂಧ** 6 ರಲ್ಲಿ **ಲಗತ್ತಿಸಲಾಗಿದೆ).** ಈ ಭೂಮಿಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಮಾನ್ಯ

ಉಪವಿಭಾಗಾಧಿಕಾರಿಗಳಿಗೆ ಸೂಚಿಸಬಹುದಾಗಿದೆ. ಇಂತಹ ನ್ಯೂನತೆಗಳನ್ನು ತಡೆಗಟ್ಟಲು ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಮತ್ತು ಅಧಿಕಾರಿಗಳಿಗೆ ಸೂಕ್ತ ತರಬೇತಿಯನ್ನು ನೀಡಬಹುದು. ಅರ್ಹ ಫಲಾನುಭವಿಗಳಿಗೆ ಅಧಿಕಾರಿಗಳ ತಪ್ಪಿನಿಂದ ತೊಂದರೆ ಆಗುವುದನ್ನು ತಪ್ಪಿಸಲು ಈ ಅನರ್ಹತೆಗಳನ್ನು ಸರಿಪಡಿಸಲು ಈ ಕೆಳಗಿನ ಕ್ರಮವಹಿಸಬಹುದು. **(Table 13)**

| ಕ್ರ.ಸಂ | **ಗುರುತಿಸಿರುವ ಕಾರ್ಯವಿಧಾನ ವೈಫಲ್ಯ** | **ಸರಿಪಡಿಸಲು ಕೈಗೊಳ್ಳಬಹುದಾದ ಕ್ರಮ** |
|---|---|---|
| (i) | ಮಂಜೂರಾತಿ ವರದಿ ಅಪೂರ್ಣವಾಗಿರುವ ಪ್ರಕರಣಗಳು. | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಿಂದ ಪೂರ್ಣಪ್ರಮಾಣದ ವರದಿ ಪಡೆದು ಅನರ್ಹ ಪ್ರಕರಣಗಳನ್ನು ರದ್ದುಪಡಿಸಲು ಕ್ರಮವಹಿಸಬಹುದು |
| (ii) | ಟಿಪ್ಪಣಿ ಲಭ್ಯವಿಲ್ಲದ / ಅಪೂರ್ಣ ಟಿಪ್ಪಣಿ ಇರುವ ಪ್ರಕಣಗಳು. | |
| (iii) | ಸರ್ವೆ ನಕಾಶೆ ಲಭ್ಯವಿಲ್ಲದ ಪ್ರಕರಣಗಳು. | ಕೂಡಲೇ ದುರಸ್ತಿಗೆ ಕ್ರಮವಹಿಸಬಹುದು / ಸಾಗುವಳಿ ಚೀಟಿಯಲ್ಲಿ ನಮೂದಿಸಿರುವ ಚಕ್ಕುಬಂದಿ ಮತ್ತು ಸ್ವಾಧೀನದಂತೆ ನಿಯಮಾನುಸಾರ ಕ್ರಮವಹಿಸಬಹುದು |
| (iv) | ಹಣಸಂದಾಯ ರಸೀದಿ ಲಭ್ಯವಿಲ್ಲದ ಪ್ರಕರಣಗಳು. | ಇನ್ನೊಮ್ಮೆ ಹಣ ಸಂದಾಯ ಮಾಡಲು ಕ್ರಮವಹಿಸಬಹುದು / ಸಿಬ್ಬಂದಿಯಿಂದ ಹಣ ವಸೂಲು ಮಾಡಬಹುದು |
| (v) | ಸಾರ್ವಜನಿಕ ಮಾಹಿತಿ (ಆಕ್ಷೇಪಣೆ ಕೋರುವ) ನಮೂನೆ ಲಭ್ಯವಿಲ್ಲದ ಪ್ರಕರಣಗಳು. | ಹೊಸದಾಗಿ ಆಕ್ಷೇಪಣೆ ಕರೆದು ನಿಯಮಾನುಸಾರ ಕ್ರಮವಹಿಸಬಹುದು |
| (vi) | ಆಕಾರಬಂದ ವಿಸ್ತೀರ್ಣಕ್ಕೂ ಹೆಚ್ಚಿನ ವಿಸ್ತೀರ್ಣ ಪಹಣಿಯಲ್ಲಿರುವ ಪ್ರಕಣಗಳು | ಆಕಾರಬಂದಿಗೂ ಪಹಣಿಗೂ ತಾಳೆ ಮಾಡಿ ಮಂಜೂರಾತಿ ವಿಸ್ತೀರ್ಣ ಲಭ್ಯ ವಿಸ್ತೀರ್ಣಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಸ್ವಾಧೀನದಂತೆ ಮಂಜೂರಾತಿ ಕಡಿತಗೊಳಿಸಿ ದುರಸ್ತಿಗೆ ಕ್ರಮವಹಿಸಬಹುದು |
| (vii) | ಪೈಕಿ ಪಹಣಿಗಲ್ಲಿ ಮಂಜೂರಾತಿ ನೀಡಿರುವ ಮಂಜೂರಾತಿಗಳು. | |
| (viii) | **ಕಡತ ಲಭ್ಯವಿರುವ ಪ್ರಕರಣಗಳ ಪೈಕಿ ಭೂಮಿ ತಂತ್ರಾಂಶದಲ್ಲಿ ಅಳವಡಿಸುವಾಗ ಹಕ್ಕುಪತ್ರವನ್ನು ಕ್ರಮಬದ್ಧವಾಗಿ ಲಗತ್ತಿಸದ ಪ್ರಕರಣಗಳು.** | |
| | ಹಕ್ಕುಪತ್ರದ ಅಪೂರ್ಣ ಪ್ರತಿ | ಸರಿಯಾದ ಆದೇಶಪ್ರತಿ ಮತ್ತು ಹಕ್ಕುಪತ್ರವನ್ನು |

| | | |
|---|---|---|
| | ಲಗತ್ತಿಸಿರುವ ಪ್ರಕರಣಗಳು | ಲಗತ್ತಿಸಲು ಅವಕಾಶ ನೀಡಿ ದಾಖಲಾತಿಯನ್ನು ಲಗತ್ತಿಸಲು ಕ್ರಮವಹಿಸಬಹುದು |
| | ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರು ದಾಖಲೆಯು ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ | |
| | ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಬದಲು ತಿಳುವಳಿಕೆ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ | |
| | ಭೂಮಿ ತಂತ್ರಾಂಶಕ್ಕೆ ಲಗತ್ತಿಸಿರುವ ಪ್ರತಿ ತಂತ್ರಾಂಶದಲ್ಲಿ ಲಭ್ಯವಿಲ್ಲ | |
| (ix) | ವಿಷಯ ನಿರ್ವಾಹಕರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | ಮಂಜೂರಾತಿಗಳು ನೈಜವಿದ್ದಲ್ಲಿ ಈ ಕಾರಣಕ್ಕೆ ಯಾವುದೇ ಕ್ರಮವಹಿಸುವ ಅಗತ್ಯ ಇರುವುದಿಲ್ಲ |
| (x) | ಶಿರಸ್ತೇದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | |
| (xi) | ತಹಶೀಲ್ದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | |
| (x) | ಪಹಣಿಯಲ್ಲಿ ಪರಭಾರೆ ನಿಷೇಧ ನಮೂದಾಗದ ಅಥವಾ ತಪ್ಪಾಗಿ ನಮೂದಾದ ಪ್ರಕರಣಗಳು. | ಪಹಣಿಯಲ್ಲಿ ಪರಭಾರೆ ಬಗ್ಗೆ ನಮೂದಿಸಲು ಮತ್ತು ಅಗತ್ಯವಿದ್ದಲ್ಲಿ ಪಿ.ಟಿ.ಸಿ.ಎಲ್ ಫ್ಲಾಗ್ ಲಗತ್ತಿಸಲು ಕ್ರಮವಹಿಸಬಹುದು |

**<u>ತನಿಖಾ ತಂಡವು ಗಮನಿಸಿದ ಇತರ ಅಂಶಗಳು</u>**

➢ ಉಪವಿಭಾಗಾಧಿಕಾರಿಗಳು ಪುನರ್ ಪರಿಶೀಲನೆಗೆ ಆದೇಶ ಹೊರಡಿಸುವಾಗ ಯಾವ ಕಾರಣಕ್ಕೆ ಪ್ರಕರಣವನ್ನು ಈಗಾಗಲೇ ವಿಲೇ ಮಾಡಲಾಗಿತ್ತೋ ಆ ಬಗ್ಗೆ ಪೂರಕ ದಾಖಲೆಯನ್ನು ಪರಿಶೀಲಿಸಿದ ಬಗ್ಗೆ ಆದೇಶದಲ್ಲಿ ನಮೂದಿಸದೇ ಸಮಿತಿಗೆ ಮರಳಿಸಿ ಯಾಂತ್ರಿಕ ಆದೇಶವನ್ನು ಹೊರಡಿಸಿರುತ್ತಾರೆ ಅರ್ಜಿದಾರರ ಭೂ ಮಾಲಿಕತ್ವ ಹೆಚ್ಚಿಗೆ ಇದೆ ಎಂಬ ಪ್ರಕರಣದಲ್ಲಿ ಅವರಿಗೆ ಭೂ ಹಿಡುವಳಿಯನ್ನು ನಿರ್ಧರಿಸಿ ಅವರು ಅರ್ಹರೇ ಎಂಬ ಬಗ್ಗೆ ನಿಖರವಾಗಿ ಆದೇಶವನ್ನು ಹೊರಡಿಸುವ ಬದಲು ಈಗಾಗಲೇ ಹೆಚ್ಚಿನ ಹಿಡುವಳಿ ಇದೆ ಎಂದು ತೀರ್ಮಾನಿಸಿದ ಸಮಿತಿಗೆ ಯಾವುದೇ ನಿಖರ ನಿರ್ದೇಶನ ನೀಡದೇ ಹಿಂದಿರುಗಿಸಿರುವುದು ಸರಿಯಾದ ಕ್ರಮವಲ್ಲ. ಅದೇ ರೀತಿ ಸಾಗುವಳಿ ಇಲ್ಲ ಎಂದು ವಜಾಗೊಂಡ ಪ್ರಕರಣದಲ್ಲಿ ಸಾಗುವಳಿಯ ಬಗ್ಗೆ ನಿಖರವಾಗಿ ಪರಿಶೀಲನೆ ನಡೆಸಿ ಆದೇಶದಲ್ಲಿ ನಮೂದಿಸುವ ಅಗತ್ಯ ಇದೆ. **ಪ್ರಕರಣಗಳನ್ನು ಹಿಂದಿರುಗಿಸಿದ ಉಪವಿಭಾಗಾಧಿಕಾರಿಗಳ ಪಟ್ಟಿಯನ್ನು ಮತ್ತು ಅವರು ಹಿಂದಿರುಗಿಸಿರುವ ಪ್ರಕರಣಗಳ ಸಂಖ್ಯೆಯನ್ನು ಈ ಕೆಳಗೆ ನಮೂದಿಸಲಾಗಿದ್ದು, ಈ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸರಕಾರದ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದಾಗಿದೆ.**

| ಉಪವಿಭಾಗಾಧಿಕಾರಿಗಳ ಹೆಸರು | ಅಧಿಕಾರಾವಧಿ | ಹಿಂದಿರುಗಿಸಿದ ಪ್ರಕರಣಗಳ ಸಂಖ್ಯೆ |
|---|---|---|
| ಜಿ ಅನುರಾಧಾ. ಕೆ.ಎ.ಎಸ್ | 24-09-2012 ಇಂದ 28-08-2014 | 4 |
| ಬಿ ಬಿ ಸರೋಜಾ, ಕೆ.ಎ.ಎಸ್ | 25-07-2016 ಇಂದ 13-08-2018 | 1 |
| ಬಿ ಆರ್ ರೂಪ, ಕೆ.ಎ.ಎಸ್ | 13-08-2018 ಇಂದ 10-03-2020 | 3 |
| ಸಿದ್ಧಲಿಂಗರೆಡ್ಡಿ, ಕೆ ಎ ಎಸ್ | 10-05-2021 ಇಂದ 01-07-2023 | 2 |

- ಹುಜೂರು ಜಮಾಬಂದಿ ಸಮಯದಲ್ಲಿ ಸರಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 41 ಎಲ್ ಜಿ ಪಿ 2014 ದಿನಾಂಕ 13-03-2014 ರಂತೆ ಹುಜೂರು ಜಮಾಬಂಧಿ ಅಧಿಕಾರಿಯ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಿ ಎಲ್ಲ ಕಡತಗಳ ಪರಿಶೀಲನ ನಡೆಸಬೇಕು ಎಂದು ತಿಳಿಸಿರುತ್ತಾರೆ ಅದರಂತೆ ಕಮ್ಮಿ ಜಾಸ್ತಿ ವಹಿ. ಬಂಜರು ತಕ್ತೆ ಇವುಗಳನ್ನು ಪರಿಶೀಲಿಸಬೇಕಾದ ಅಗತ್ಯವಿದೆ ಪರಿಶೀಲಿದ ನಂತರ ಕಂಡುಬಂದ ಅಂಶಗಳ ಬಗ್ಗೆ ಹುಜೂರು ಅಧಿಕಾರಿಯು ವರದಿಯಲ್ಲಿ ಅದನ್ನು ನಮೂದಿಸಬೇಕು ಮತ್ತು ತಪ್ಪಿತಸ್ಥ ವ್ಯಕ್ತಿಯ ಮೇಲೆ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡಬೇಕು ಎಂದು ಸೂಚಿಸಲಾಗಿದೆ. ಹುಜೂರು ಜಮಾಬಂದಿ ದಾಖಲೆಗಳನ್ನು ಪರಿಶೀಲಿಸಲಾಗಿ ಈ ವಹಿಗಳನ್ನು ಪರಿಶಿಲನೆ ನಡೆಸಿದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಭೂಕಂದಾಯ ನಿಯಮ 108 ಸಿ(2) ರಲ್ಲಿ ನಿಗದಿ ಪಡಿಸಿರುವಂತೆ ಭೂಮಿಗಳ ಅನಧಿಕೃತ ಅಧಿಭೋಗದ ಸಕ್ರಮಗೊಳಿಸುವುದಕ್ಕಾಗಿ ರಜಿಷ್ಟರು ನಮೂನೆ 53 ನ್ನು ಜಮಾಬಂದಿ ಸಮಯದಲ್ಲಿ ಪರಿಶೀಲಿಸಬೇಕಾಗ ಅಗತ್ಯವಿತ್ತು. ತಾಲ್ಲೂಕಿನ ರಜಿಷ್ಟರು ಪರಿಶೀಲಿಸಿದಾಗ ರಜಿಷ್ಟರಿನಲ್ಲಿ ಅಗತ್ಯ ಕಲಂಗಳು ಇರುವುದಿಲ್ಲ ಮತ್ತು ಮಾಹಿತಿಯನ್ನು ಕಾಲಕಾಲಕ್ಕೆ ಕಾಲೋಚಿತಗೊಳಿಸಿಲ್ಲ. (ಉದಾಹರಣೆಗೆ ಮಂಜೂರಾತಿ ವಿವರವನ್ನು ಸಹ ನಮೂದಿಸಿಲ್ಲ). **1992 ರಿಂದ 2023 ರ ವರೆಗೆ ಕರ್ತವ್ಯ ನಿರ್ವಹಿಸಿದ ಹುಜೂರು ಜಮಾಬಂದಿ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸರಕಾರದ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.**

- ಭೂಮಿ ತಂತ್ರಾಂಶದಲ್ಲಿ ಪರಿಶೀಲಿಸಲಾಗಿ 01 ಫೆಬ್ರುವರಿ 2023 ರಿಂದ 31 ಮಾರ್ಚ್ 2023 ರ ಅವಧಿಯಲ್ಲಿ ಪರಿಶೀಲನ ನಡೆಸಿದ 2103 ಪ್ರಕರಣಗಳ ಪೈಕಿ 934 ಹಕ್ಕುಪತ್ರದ ದಾಖಲೆಯನ್ನು ಭೂಮಿ ತಂತ್ರಾಂಶದಲ್ಲಿ ಅಳವಡಿಸಿ ಅನುಮೋದಿಸಲಾಯಿತು.

- ಭೂಮಂಜೂರಾತಿಯ ಸಮಯದಲ್ಲಿ ಭೂ ವರ್ಗೀಕರಣ (land classification) ದಂತೆ ಭೂಮಿಯ ವಿಸ್ತೀರ್ಣವನ್ನು ಡಿ ವರ್ಗಕ್ಕೆ ಈ ಕೆಳಗಿನಂತೆ ಪರಿವರ್ತಿಸಿ ಹಿಡುವಳಿ ವಿಸ್ತೀರ್ಣ ನಿಗದಿಪಡಿಸಬೇಕಾಗಿರುತ್ತದೆ.

- 1 ಎಕರೆ ಅ ವರ್ಗದ 8 ಅಣಾಕ್ಕಿಂತ ಹೆಚ್ಚಿನ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ = 5.16 ಎಕರೆ/ಗುಂಟೆ ಡಿ ವರ್ಗದ ಭೂಮಿ
- 1 ಎಕರೆ ಅ ವರ್ಗದ 8 ಅಣಾಕ್ಕಿಂತ ಕಡಿಮೆ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ = 4.06 ಎಕರೆ/ಗುಂಟೆ ಡಿ ವರ್ಗದ ಭೂಮಿ
- 1 ಎಕರೆ ಬ ವರ್ಗದ 8 ಅಣಾಕ್ಕಿಂತ ಹೆಚ್ಚಿನ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ - 3.24 ಎಕರೆ/ಗುಂಟೆ ಡಿ ವರ್ಗದ ಭೂಮಿ
- 1 ಎಕರೆ ಬ ವರ್ಗದ 8 ಅಣಾಕ್ಕಿಂತ ಕಡಿಮೆ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ = 2.28 ಎಕರೆ/ಗುಂಟೆ ಡಿ ವರ್ಗದ ಭೂಮಿ
- 1 ಎಕರೆ ಸಿ ವರ್ಗದ 8 ಅಣಾಕ್ಕಿಂತ ಹೆಚ್ಚಿನ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ = 2.16 ಎಕರೆ/ಗುಂಟೆ ಡಿ ವರ್ಗದ ಭೂಮಿ.
- 1 ಎಕರೆ ಸಿ ವರ್ಗದ 8 ಅಣಾಕ್ಕಿಂತ ಕಡಿಮೆ ಮಣ್ಣಿನ ವರ್ಗೀಕರಣ ಹೊಂದಿದ ಭೂಮಿ = 1.32 ಎಕರೆ/ಗುಂಟೆ ಡಿ ವರ್ಗದ ಭೂಮಿ.

**ಆದರೆ ಕಡತವನ್ನು ತಯಾರಿಸುವಾಗ ಈಗಾಗಲೇ ಹೊಂದಿರುವ ಭೂಮಿಯ ವಿಸ್ತೀರ್ಣವನ್ನು ನಮೂದಿಸುವಾಗ ಮೇಲಿನಂತೆ ಪರಿವರ್ತಿಸಿ ಹಿಡುವಳಿ ವಿಸ್ತೀರ್ಣ ನಿಗದಿಪಡಿಸಿರುವು ಲ್ಲ.**

- ಸರ್ವೆ ಇಲಾಖೆಯಿಂದ ನಕ್ಷೆಯನ್ನು ನೀಡುವಾಗ ನಿರ್ಭಂದಿತ ಅಂತರ ಮತ್ತು ಜಮೀನಿನ ತರಹೆ ಗುರುತಿಸಬೇಕಾಗಿದೆ. ಈ ಮಾಹಿತಿಯನ್ನು ನೀಡಲು ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಕ್ಷಮ ಪ್ರಾಧಿಕಾರ ಆಗಿರುತ್ತಾರೆ. ಅಂದರೆ ಈ ಮಾಹಿತಿಯು ಸರ್ವೆ ಇಲಾಖೆಯಲ್ಲಿಯೇ ಲಭ್ಯ ಇರುತ್ತದೆ. ನಕ್ಷೆ ತಯಾರಿಸುವಾಗ ಭೂಮಾಪಕರು ಅನರ್ಹತೆಗಳನ್ನು ಗುರುತಿಸಿರುವುದಿಲ್ಲ. ಕೆಲವು ಕಡತಗಳಲ್ಲಿ ಈಗಾಗಲೇ ದುರಸ್ತಿ ಆಗಿದ್ದು ದುರಸ್ತಿ ಸಮಯದಲ್ಲಿ ಸಹ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಉಪನಿರ್ದೇಶಕರು ಮತ್ತು ದುರಸ್ತಿ ನಕ್ಷೆ ತಯಾರಿಸಿದ ಭೂಮಾಪಕರು ಈ ಬಗ್ಗೆ ತಕರಾರನ್ನು ನಮೂದಿಸಿರುವುದಿಲ್ಲ. **ಆದುದರಿಂದ ಸಂಬಂಧಿಸಿದ ಭೂಮಾಪಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಭೂದಾಖಲೆಗಳ ಉಪನಿರ್ದೇಶಕರನ್ನು** ಸಹ **ತಪ್ಪಿತಸ್ಥರು ಎಂದು ಪರಿಗಣಿಸಬೇಕಾಗಿದೆ.**

- ಅರಣ್ಯ ಇಲಾಖೆಯು ನೀಡಿದ ವರದಿಯಂತೆ ಅನೇಕ ಸರ್ವೆ ನಂಬರುಗಳಲ್ಲಿ ಆಕಾರುಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣವನ್ನು ಅರಣ್ಯ ಎಂದು ಗುರುತಿಸಿರುವುದು ಕಂಡುಬರುತ್ತದೆ. ಕೆಲವು ಪ್ರಕರಣದಲ್ಲಿ ಅರಣ್ಯ ಇಲಾಖೆಯ ವಿಸ್ತೀರ್ಣವನ್ನು 50 ವರ್ಷಕ್ಕೂ ಹಿಂದಿನ ಅಧಿಸೂಚನೆಯ ಆಧಾರದಲ್ಲಿ ಕೋರುತ್ತಿದ್ದು, ಕಂದಾಯ ದಾಖಲೆಯಲ್ಲಿ ಇಂಡೀಕರಣ ಏಕೆ ಆಗಿಲ್ಲ ಮತ್ತು ಇಂಡೀಕರಣಗೊಳಿಸಲು ಅರಣ್ಯ ಇಲಾಖೆಯ ಸಿಬ್ಬಂದಿ ಯಾವ ಕ್ರಮ ಕೈಗೊಂಡರು ಎಂಬ ಬಗ್ಗೆ ಜಿಜ್ಞಾಸೆ ಉಂಟಾಗುತ್ತದೆ. ಪೂರ್ಣ ವಿಸ್ತೀರ್ಣ ಅಥವಾ ಆಕಾರಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣ ಅರಣ್ಯ

ಎಂದು ವರದಿಸಿರುವ ಪ್ರಕರಣದಲ್ಲಿ ಕೆಲವು ಸರ್ವೆ ನಂಬರುಗಳನ್ನು ದಿಶಾಂಕ ತಂತ್ರಾಂಶದಲ್ಲಿ ಪರಿಶೀಲಿಸಿ ಉಪಗ್ರಹ ನಕ್ಷೆಯನ್ನು ನೋಡಿದಾಗ **(ಅನುಭಂದ 16 ರಲ್ಲಿ ಪ್ರತಿ ಲಗತ್ತಿಸಿದೆ)** ಈ ಸರ್ವೆ ನಂಬರುಗಳಲ್ಲಿ ರೈತರು ಉಳುಮೆ ಮಾಡುತ್ತಿರುವುದು ಕಂಡುಬರುತ್ತದೆ. ಈ ಬಗ್ಗೆ ಕೆಳಗಿನ ಸರ್ವೆನಂಬರುಗಳ ನಕ್ಷೆಗಳನ್ನು ವರದಿಗೆ ಲಗತ್ತಿಸಿದೆ. **(Table 14)**

| ಗ್ರಾಮ | ಸರ್ವೆ ನಂಬರು | ಆಕಾರಬಂದ ವಿಸ್ತೀರ್ಣ | ಅರಣ್ಯ ವಿಸ್ತೀರ್ಣ | ಅರಣ್ಯದ ವಿಧ | ದಿಶಾಂಕ ನಕ್ಷೆ ಪುಟ ಸಂಖ್ಯೆ |
|---|---|---|---|---|---|
| ಅಣ್ಣೇಗರ | 130 | 159.19 | 159.19 | Deemed forest | 1 |
| ಅಣ್ಣೇಗರ | 131 | 127.15 | 127.15 | Deemed forest | 2 |
| ಉಡುಗರ | 114 | 153.21 | 153.21 | Deemed forest | 3 |
| ಎಮ್ಮೆದೊಡ್ಡಿ | 70 | 10599.13 | 10599.13 | Section 4 | 4-8 |
| ಎಮ್ಮೆದೊಡ್ಡಿ | 71 | 566.15 | 566.15 | Section 4 | |
| ಎಮ್ಮೆದೊಡ್ಡಿ | 72 | 2456.14 | 2456.14 | Section 4 | |
| ಎಮ್ಮೆದೊಡ್ಡಿ | 73 | 439.33 | 439.33 | Section 4 | |
| ಎಮ್ಮೆದೊಡ್ಡಿ | 77 | 2179.3 | 2179.3 | Section 4 | |
| ಕಂಬುಗಲ್ | 129 | 402.5 | 402.5 | Protected Forest | 9 |
| ಕುಂಕಾನಾಡು | 28 | 83.24 | 83.24 | Deemed forest | 10 |
| ಕ ಬಸವನಹಳ್ಳಿ | 53 | 32.00 | 32.00 | Deemed forest | 11 |
| ಕ ಬಿದರೆ | 44 | 287.4 | 287.4 | Protected Forest | 12 |
| ಕ ಬಿದರ | 45 | 256.10 | 256.10 | Protected Forest | 13 |
| ಕ.ಬಿದರ | 99 | 284.32 | 284.32 | Protected Forest | 14 |
| ಗುಂಡುಸಾಗರ | 34 | 15.37 | 15.37 | Deemed forest | 15 |
| ಗುಂಡುಸಾಗರ | 35 | 32.20 | 32.20 | Deemed forest | 16 |
| ಮಲ್ಲಾಘಟ್ಟ | 71 | 15.39 | 15.39 | Deemed forest | 17 |
| ಮುಗಳೀಕಟ್ಟೆ | 43 | 93.09 | 93.09 | Deemed forest | 18 |

| | | | | | |
|---|---|---|---|---|---|
| ಯಗಟಿ | 258 | 26.29 | 26.29 | Deemed forest | 19 |
| ಸಾಣೇಹಳ್ಳಿ | 34 | 27.29 | 27.29 | Deemed forest | 20 |

**ಅರಣ್ಯ ಇಲಾಖೆಯು ಭೂಮಿಯನ್ನು ತನ್ನ ಸುಪರ್ದಿಯಲ್ಲಿ ಇಟ್ಟುಕೊಳ್ಳಲು, ಒತ್ತುವರಿ ತೆರವುಗೊಳಿಸಲು, ಅನಧಿಕೃತವಾಗಿ ಮಂಜೂರಾತಿಯಾದಲ್ಲಿ ನಿಯಮ 108(ಕೆ) ಅಡಿಯಲ್ಲಿ ರದ್ದುಪಡಿಸಲು ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದು ಕಂಡುಬಂದಿರುವುದಿಲ್ಲ. ಆದುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ ಸರಕಾರದ ಹಂತದಲ್ಲಿ** ತೀರ್ಮಾನಿಸಬೇಕಾಗಿದೆ.

## <u>ಭೂಮಂಜೂರಾತಿಯಲ್ಲಿ ಅಕ್ರಮಗಳನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳು</u>

ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಸುಧೀರ್ಘ ಪರಿಶೀಲನೆ ನಡೆಸಿದ ನಂತರ ಸಮಿತಿಯು ಇನ್ನುಮುಂದೆ ಕಂದಾಯ ಇಲಾಖೆಯಲ್ಲಿ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ಕೆಳಗಿನಂತೆ ಶಿಫಾರಸು ಮಾಡಿರುತ್ತದೆ

1. ಮಂಜೂರಾತಿ ಪ್ರಕ್ರಿಯೆಯನ್ನು ಗಣಕೀಕೃತಗೊಳಿಸುವುದು
2. ಅಭಿಲೇಖಾಲಯದ ಕಡತ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಮಾಡುವುದು
3. ಭೂಮಿ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳು
4. ಇತರೇ ಕ್ರಮಗಳು

ಮೇಲಿನ ಮೇಲಿನ ಪ್ರತಿ ಅಂಶಗಳ ಬಗ್ಗೆ ಈ ಕೆಳಗಿನಂತೆ ವಿವರವಾದ ಟಿಪ್ಪಣಿಯನ್ನು ತನಿಖಾ ತಂಡವು ಮಂಡಿಸಿದೆ.

## 1. ಮಂಜೂರಾತಿ ಪ್ರಕ್ರಿಯೆಯನ್ನು ಗಣಕೀಕೃತಗೊಳಿಸುವುದು.

ಕಡೂರು ಹಾಗೂ ಮುಡಿಗೆರೆ ತಾಲ್ಲೂಕಿನ ಮಂಜೂರಾತಿಗಳನ್ನು ಪರಿಶೀಲಿಸದಾಗ ಮೇಲಿನ ಅನೇಕ ನ್ಯೂನತೆಗಳನ್ನು ಗಮನಿಸಲಾಗಿದ್ದು, ಇಂತಹ ನ್ಯೂನತೆಗಳು ರಾಜ್ಯದಾದ್ಯಂತ ಕಂಡುಬರುವ ಸಾಧ್ಯತೆ ಇರುತ್ತದೆ. ತಂಡದ ಸದಸ್ಯರು ಈಗಾಗಲೇ ಅನೇಕ ಕಡೆ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿರುವುದರಿಂದ ಇಂತಹ ಸಮಸ್ಯೆಯನ್ನು ತಡೆಗಟ್ಟಲು ಮತ್ತು ಅರ್ಜಿಗಳನ್ನು ಶೀಘ್ರವಾಗಿ ತೀರ್ಮಾನಿಸಲು ಪ್ರತ್ಯೇಕ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಸೂಕ್ತ ಎಂದು ತಂಡದ ಅಭಿಪ್ರಾಯವಾಗಿದೆ. ಈ ತಂತ್ರಾಂಶವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿರಬೇಕು.

- ತಂತ್ರಾಂಶದಲ್ಲಿ ಲಭ್ಯವಿರುವ ಅರ್ಜಿಗಳ ಮೇಲೆ ಮಾತ್ರ ಕ್ರಮವಹಿಸಲು ಅವಕಾಶವಿರಬೇಕು.
- ನಿರ್ಬಂಧಿತ ಅಂತರದಲ್ಲಿ ಮಂಜೂರಾತಿಯನ್ನು ತಡೆಗಟ್ಟಬೇಕು.

- ಅನರ್ಹ ಭೂಮಿ ತರಹ (ನಮೂನ 57 ರಲ್ಲಿ ಗೋಮಾಳ, ಈಗಾಗಲೇ ಕಾಯ್ದಿರಿಸಿದ ಜಮೀನು, ಅರಣ್ಯ ಇತ್ಯಾದಿ) ಯಲ್ಲಿ ಮಂಜೂರಾತಿಗೆ ಅವಕಾಶ ನೀಡಬಾರದು.
- ಅರ್ಹತೆಯ ಬಗ್ಗೆ ಮಾಹಿತಿ ಲಭ್ಯವಿರಬೇಕು (ವಯಸ್ಸು, ಈಗಾಗಲೇ ಹೊಂದಿರುವ ಭೂಮಿ ಇತ್ಯಾದಿ).
- ಅರ್ಹತಾ ದಿನಾಂಕದಂದು ಸಾಗುವಳಿ ಮಾಡಿರುವ ಬಗ್ಗೆ ಮಾಹಿತಿ ಒದಗಿಸಬೇಕು
- ಮಂಜೂರಾತಿಯ ಎಲ್ಲ ಹಂತಗಳು ಸ್ವಯಂಚಾಲಿತವಾಗಿ ದಾಖಲಾಗಬೇಕು (ಕ್ಷೇತ್ರ ವರದಿ ಕಛೇರಿ ಮಾಹಿತಿ, ತಹಶೀಲ್ದಾರರ ಅಭಿಪ್ರಾಯ, ಸಮಿತಿ ನಿರ್ಣಯ ಇತ್ಯಾದಿ)
- ಕಾಲಕಾಲಕ್ಕೆ ಮೇಲಧಿಕಾರಿಗಳಿಗೆ ಅಗತ್ಯವಿರುವ ವರದಿಗಳನ್ನು ನೀಡುವ ಸಾಮರ್ಥ್ಯ ಹೊಂದಿರಬೇಕು

**ಈ ಬಗ್ಗೆ ವಿವರವಾದ ರೂಪುರೇಷೆಯನ್ನು ಅನುಬಂಧ 26 ರಲ್ಲಿ ಲಗತ್ತಿಸಲಾಗಿದೆ.**

## 2. ಅಭಿಲೇಖಾಲಯದ ಕಡತ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಮಾಡುವುದು

**ಹಿನ್ನೆಲೆ:** ಕಂದಾಯ ಇಲಾಖೆಯು ಅತ್ಯಂತ ಪುರಾತನ ಇಲಾಖೆಯಾಗಿದ್ದು, ಭಾರತದ ಬೆನ್ನೆಲುಬಾಗಿರುವ ರೈತರಿಗೆ ಸಂಬಂಧಿಸಿದ ಭೂದಾಖಲೆಗಳನ್ನು ನೀಡಿ ಸಂರಕ್ಷಿಸುವ ಕೆಲಸವನ್ನು ಅನಾದಿಕಾಲದಿಂದ ಮಾಡುತ್ತಿದೆ ಇತ್ತೀಚಿನ ದಿನಗಳಲ್ಲಿ ಸರಕಾರದ ಅನೇಕ ಮಹತ್ವಾಕಾಂಕ್ಷಿ ಯೋಜನೆಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವಲ್ಲಿ ಕಂದಾಯ ಇಲಾಖೆಯ ಪಾತ್ರವು ಅತ್ಯಂತ ಪ್ರಮುಖವಾಗಿದೆ, ಪ್ರತಿದಿನ ತಾಲ್ಲೂಕು ಕಛೇರಿಗೆ 300-400 ರೈತರು ವಿವಿಧ ಕಾರಣಕ್ಕೆ ಭೇಟಿ ನೀಡುತ್ತಾರೆ. ಇವರಲ್ಲಿ ಸುಮಾರು 200 ಜನರು ಭೂಮಿಗೆ ಸಂಬಂಧಿಸಿದ ಹಳೆಯ ದಾಖಲೆಗಳನ್ನು ಪಡೆಯಲು ತಾಲ್ಲೂಕು ಕಛೇರಿಗೆ ಭೇಟಿ ನೀಡುತ್ತಾರೆ. ಕಂದಾಯ ಇಲಾಖೆಯಲ್ಲಿ ಸ್ವಾತಂತ್ರ ಪೂರ್ವದಿಂದ ಇಂದಿನ ತನಕದ ಭೂಮಿಗೆ ಸಂಬಂಧಿಸಿದ ವಿವಿಧ ದಾಖಲೆಗಳು ಲಭ್ಯವಿರುತ್ತವೆ.

**ಭೂದಾಖಲೆಗಳ ನಿರ್ವಹಣೆಯಲ್ಲಿನ ಸಮಸ್ಯೆಗಳು**

- ಸರಕಾರದ ಅನೇಕ ಯೋಜನೆಗಳಲ್ಲಿ ಭೂ ಮಂಜೂರಾತಿಗಳು ನಡೆದಿದ್ದು, ಪ್ರತಿ ತಾಲ್ಲೂಕು ಕಛೇರಿಯು ಅಗಾಧ ಪ್ರಮಾಣದ ದಾಖಲೆಗಳನ್ನು ಹೊಂದಿದೆ.
- ಅನೇಕ ದಾಖಲೆಗಳು ಶಿಥಿಲವಾಗಿವೆ
- ದಾಖಲೆಗಳನ್ನು ವಿವಿಧ ಕಛೇರಿಗಳಿಗೆ / ನ್ಯಾಯಾಲಯಗಳಿಗೆ ಒದಗಿಸಿರುವ ಬಗ್ಗೆ ಸಮಗ್ರ ಮಾಹಿತಿ ಲಭ್ಯವಿರುವದಿಲ್ಲ.
- ಲಭ್ಯವಿರುವ ದಾಖಲೆಗಳು ಸಹ ಸರಿಯಾದ ನಿರ್ವಹಣೆ ಇಲ್ಲದೇ ರೈತರಿಗೆ ಸರಿಯಾದ ಸಮಯದಲ್ಲಿ ದೊರಕುತ್ತಿಲ್ಲ
- ನಕಲಿ ದಾಖಲೆಗಳನ್ನು ಅಭಿಲೇಖಾಲಯದಲ್ಲಿ ಸೇರಿಸಿರುವ ಪ್ರಕರಣಗಳು ಬೆಳಕಿಗೆ ಬಂದಿವೆ
- ಅನೇಕ ದಾಖಲೆಗಳನ್ನು ತಿದ್ದುಪಡಿ ಮಾಡಲಾಗಿದೆ.
- ಅನೇಕ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ನಾಶಮಾಡಲಾಗಿದೆ.

- ದಾಖಲೆಗಳಿಗೆ ಅಗಾಧ ಬೇಡಿಕೆ ಇರುವದರಿಂದ ದಾಖಲೆಗಳನ್ನು ಹುಡುಕಿ ನೀಡುವಲ್ಲಿ ಅವ್ಯವಹಾರ ನಡೆಯುತ್ತಿದೆ.

ಈ ಮೇಲಿನ ಕಾರಣಗಳಿಂದ ಜನಸಾಮಾನ್ಯರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ

**<u>ಪರಿಹಾರ</u>**

- ಲಭ್ಯವಿರುವ ಎಲ್ಲ ಕಡತಗಳನ್ನು ಸ್ಕ್ಯಾನ್ ಮಾಡಿ, ಕೆಟಲಾಗ್ ಇಂಡೆಕ್ಸಿಂಗ್ ಮಾಡಿದಲ್ಲಿ ರೈತರಿಗೆ ದಾಖಲೆಗಳನ್ನು ಕೂಡಲೇ ನೀಡಬಹುದು.
- ಇದಕ್ಕಾಗಿ ಈಗಾಗಲೇ ಲಭ್ಯವಿರುವ ತಂತ್ರಾಂಶವನ್ನು ಬಳಸಬಹುದು ಅಥವಾ ಹೊಸದಾಗಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಬಹುದು.

**<u>ಲಾಭಗಳು</u>**

- ಪ್ರಸ್ತುತ 30 ದಿನ (ಸಕಾಲದಡಿಯಲ್ಲಿ) ಕಾಯುವ ದಾಖಲೆಗಳನ್ನು 1 ದಿನದೊಳಗೆ ನೀಡಬಹುದು.
- ಸುಳ್ಳು ದಾಖಲೆ ಸೃಷ್ಟಿಯಾಗುವದನ್ನು ತಡೆಗಟ್ಟಬಹುದು ಇದರಿಂದ ಬೆಲೆಬಾಳುವ ಸರಕಾರಿ ಭೂಮಿಯನ್ನು ಕಾಪಾಡಬಹುದು.
- ಶಿಥಿಲವಾಗುತ್ತಿರುವ ದಾಖಲೆಗಳನ್ನು ಕಾಪಾಡಬಹುದು ಮತ್ತು ಕಡತಗಳು ಕಳೆದುಹೋಗುವ ಹೆದರಿಕೆ ಇರುವದಿಲ್ಲ
- ದಾಖಲೆಗಳನ್ನು ಮುಚ್ಚಿಟ್ಟು ಕೆಲವು ನೌಕರರು ತೊಂದರೆ ನೀಡುವದನ್ನು ತಪ್ಪಿಸಬಹುದು
- ಅನೇಕ ಆರ್.ಟಿ.ಐ. ಲೋಕಾಯುಕ್ತ ಮತ್ತು ಇತರೇ ನ್ಯಾಯಾಲಯಗಳ ಪ್ರಕರಣಗಳಲ್ಲಿ ಸರಿಯಾದ ದಾಖಲೆಯನ್ನು ಸರಿಯಾದ ಸಮಯದಲ್ಲಿ ಒದಗಿಸಬಹುದು.
- ಭೂಮಂಜೂರಾತಿಗೆ ಸಂಬಂಧಿಸಿದಂತೆ ಕಡತಗಳನ್ನು ತಿದ್ದುಪಡಿ ಮಾಡುವುದು, ನಕಲಿ ಕಡತಗಳನ್ನು ತಯಾರಿಸುವುದು, ದಾಖಲೆಗಳನ್ನು ಮರೆಮಾಚುವುದು, ಕಡತ ಕಳೆದು ಹೋಗುವುದು, ದುರಸ್ತಿ ಮಾಡುವಲ್ಲಿನ ಅನೇಕ ತೊಡಕುಗಳನ್ನು ಇದರಿಂದ ತಡೆಹಿಡಿಯಬಹುದು ಹಾಗೂ ಅಮೂಲ್ಯವಾದ ಸರಕಾರಿ ಭೂಮಿಯನ್ನು ಸಂರಕ್ಷಿಸಬಹುದು

## 3. ಭೂಮಿ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳು

- ಭೂಮಿ ತಂತ್ರಾಂಶದ ತಹಶೀಲ್ದಾರ ಲಾಗಿನ್ ಮತ್ತು ಬಯೋಮೆಟ್ರಿಕ್ ಅನ್ನು ಆಧಾರ ತಂತ್ರಾಂಶದೊಂದಿಗೆ ಜೋಡಿಸಿ ಇನ್ನಷ್ಟು ಬಲಪಡಿಸಿದಲ್ಲಿ, ಬೇರೆ ವ್ಯಕ್ತಿಯ Digital Signature and Biomatric ನೋಂದಾಯಿಸುವುದನ್ನು ತಡೆಗಟ್ಟಬಹುದು.
- ಹೊಸ ತಹಶೀಲ್ದಾರರ ಲಾಗಿನ್ ಸೃಜಿಸುವಾಗ ಉಪವಿಭಾಗಾಧಿಕಾರಿಗಳ ಲಾಗಿನ್ ಬಳಸಬಹುದು

- ಒಂದು ಹುದ್ದೆಗೆ ಹೊಸ ವ್ಯಕ್ತಿಯ ಲಾಗಿನ್ ಸೃಜನೆಗೊಂಡಾಗ ಹಳೆಯ ಲಾಗಿನ್ ಸ್ವಯಂಚಾಲಿತವಾಗಿ ನಿಷ್ಕ್ರಿಯಗೊಳ್ಳುವಂತೆ ಸೂಕ್ತ ಬದಲಾವಣೆ ಮಾಡಬೇಕು. ಇದರಿಂದ ಒಂದೇ ಹುದ್ದೆಯ ಲಾಗಿನ್ ನಲ್ಲಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಬಳಕೆದಾರರು ಇರುವುದನ್ನು ತಡೆಯಬಹುದು.
- ಭೂಮಿ ಶಿರಸ್ತೇದಾರರ ಲಾಗಿನ್ ಮಾಹಿತಿಯು ಪ್ರಸ್ತುತ ತಂತ್ರಾಂಶದಲ್ಲಿ ದಾಖಲಾಗದೇ ಇರುವುದರಿಂದ ಅನುಮೋದನೆ ನೀಡಿದ ಶಿರಸ್ತೇದಾರರನ್ನು ಗುರುತಿಸಲು ಅಸಾಧ್ಯವಾಗಿದೆ ಭೂಮಿ ತಂತ್ರಾಂಶದಲ್ಲಿ ಈ ಮಾಹಿತಿ ಸಹ ಲಭ್ಯವಿರುವಂತೆ ಸೂಕ್ತ ಬದಲಾವಣೆ ಮಾಡಬಹುದು
- ಒಂದೇ ಆದೇಶಸಂಖ್ಯೆ ಬಳಸಿ ಅರ್ಜಿಯನ್ನು ಲಗತ್ತಿಸಿದಲ್ಲಿ ತಂತ್ರಾಂಶವು ಆಪರೇಟರಿಗೆ ಇದರ ಸೂಚನೆಯನ್ನು ನೀಡಬೇಕು ಇದರಿಂದ ಒಂದೇ ಆದೇಶಕ್ಕೆ ಹಲವು ಬಾರಿ ಮ್ಯುಟೇಶನ್ ನಮೂದಾಗುವುದನ್ನು ತಡೆಯಬಹುದು
- ಪಹಣಿಯಲ್ಲಿ ಈಗಾಗಲೇ ಇರುವ ಹೆಸರಿಗೆ ಮತ್ತೆ ಪಹಣಿ ದಾಖಲಾಗುತ್ತಿದ್ದಲ್ಲಿ ತಂತ್ರಾಂಶವು ಆಪರೇಟರಿಗೆ ಇದರ ಸೂಚನೆಯನ್ನು ನೀಡಬೇಕು ಇದರಿಂದ ಒಂದೇ ವ್ಯಕ್ತಿಗೆ ಕಣ್ತಪ್ಪಿನಿಂದ ಹಲವು ಬಾರಿ ಮ್ಯುಟೇಶನ್ ನಮೂದಾಗುವುದನ್ನು ತಡೆಯಬಹುದು.
- ಮಂಜೂರು(ಅಕ್ರಮ ಸಕ್ರಮ) ಆಯ್ಕೆಯಂತೆ ಅರ್ಜಿಯನ್ನು ನಮೂದಿಸಿದಾಗ ಪರಭಾರೆ ನಿಷೇಧವನ್ನು ತಂತ್ರಾಂಶವು ಸ್ವಯಂಚಾಲಿತವಾಗಿ ನಮೂದಿಸಬೇಕು ಇದರಿಂದ ಪರಭಾರೆ ನಿಷೇಧ ನಮೂದು ಆಗದೇ ಇರುವುದನ್ನು ತಡೆಯಬಹುದು.
- ಮಂಜೂರು(ಅಕ್ರಮ ಸಕ್ರಮ) ಆಯ್ಕೆಯಂತೆ ಅರ್ಜಿಯನ್ನು ನಮೂದಿಸುವಾಗ ಮಂಜೂರಾತಿದಾರರ ಜಾತಿಯನ್ನು ಸಹ ನಮೂದಿಸಲು ಅವಕಾಶವನ್ನು ನೀಡಿ ಒಮ್ಮೆ ಅರ್ಜಿದಾರರು ಪ.ಜಾ/ಪ.ಪಂ ಆಗಿದ್ದಲ್ಲಿ ಪಿ.ಟಿ.ಸಿ.ಎಲ್ ಗುರುತು ಸ್ವಯಂಚಾಲಿತವಾಗಿ ನಮೂದಾಗುವಂತೆ ಸೂಕ್ತ ಬದಲಾವಣೆ ಮಾಡಬೇಕು. ಇದರಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಮಂಜೂರಾದ ಜಮೀನಿಗೆ ಪಿ.ಟಿ.ಸಿ.ಎಲ್ ನಮೂದು ಆಗದೇ ಇರುವ ಪ್ರಕರಣವನ್ನು ತಡೆಯಬಹುದು.
- ಭೂಮಿ ತಂತ್ರಾಂಶವು ಸ್ವಯಂಚಾಲಿತವಾಗಿ ಜಮೀನಿನ ತರಹ (Type of land) ಪರಿಶೀಲಿಸಿ ಅನರ್ಹ ವಿಧದ ಭೂಮಿಯಲ್ಲಿ ಮಂಜೂರು ಆಯ್ಕೆಯಂತೆ ಅರ್ಜಿ ನಮೂದಿಸುವುದನ್ನು ನಿಷ್ಕ್ರಿಯಗೊಳಿಸಬೇಕು ಇದರಿಂದ ನಮೂನೆ 57 ರಲ್ಲಿ ಗೋಮಾಳ/ಶೇಂದಿವನ ಪಹಣಿ ನಮೂದಾಗುವುದನ್ನು ತಡೆಗಟ್ಟಬಹುದು
- ಈಗಾಗಲೇ ಆಕಾರಬಂದ ಅನ್ನು ಗಣಕೀಕರಣಗೊಳಿಸಿರುವುದರಿಂದ ಪಹಣಿ ಕಲಂ 3 ಮತ್ತು 9 ನ್ನು ಆಕಾರಬಂದಿಗೆ ತಾಳೆ ಮಾಡಿದಲ್ಲಿ ಪಹಣಿಯಲ್ಲಿನ ಅನೇಕ ತಪ್ಪುಗಳನ್ನು ಕಂಡುಹಿಡಿಯ ಬಹುದು. ಇದರಿಂದ ಆಕಾರಬಂದಿಗೂ ಹೆಚ್ಚಿನ ವಿಸ್ತೀರ್ಣಕ್ಕೆ ಮಂಜೂರಾತಿ ನಡೆಯುವುದನ್ನು ತಡೆಯಬಹುದು

- ಹೊಸ ಮಂಜೂರಾತಿಯನ್ನು ನಮೂದಿಸುವಾಗ ಆಧಾರ ಸಂಖ್ಯೆ ನಮೂದನ್ನು ಕಡ್ಡಾಯಗೊಳಿಸಬೇಕು ಇದರಿಂದ ವ್ಯಕ್ತಿಯ ಹಿಡುವಳಿಯನ್ನು, ಅನೇಕ ಸಲ ಒಂದೇ ವ್ಯಕ್ತಿಗೆ ಮಂಜೂರಾತಿಯಾಗುವುದನ್ನು, ಪಹಣಿ ನಮೂದಾಗುವುದನ್ನು, ಹೆಸರನ್ನು ಸ್ವಲ್ಪ ಬದಲಿಸಿ ದಾಖಲಿಸುವುದನ್ನು ತಡೆಯಬಹುದು
- ಕುಟುಂಬ ಮತ್ತು Fruits ತಂತ್ರಾಂಶದಲ್ಲಿ ಲಭ್ಯ ಮಾಹಿತಿಯನ್ನು ಭೂಮಿ ತಂತ್ರಾಂಶದೊಂದಿಗೆ ಸಮನ್ವಯಿಸಿ ವ್ಯಕ್ತಿಯ / ಕುಟುಂಬದ ಹಿಡುವಳಿಯನ್ನು ಮಂಜೂರು ಪಹಣಿ ನಮೂದಿಸುವ ಪ್ರಕ್ರಿಯೆಯಲ್ಲಿ ಕಂಡುಹಿಡಿಯುವ ಬಗ್ಗೆ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆ ಮಾಡಬಹುದು
- ಅರಣ್ಯ ಭೂಮಿ, ಅಮೃತಮಹಲ್ ಕಾವಲ್ ಅಥವಾ ಇನ್ನಿತರೇ ಕಾಯ್ದಿರಿಸಿದ ಭೂಮಿಗೆ ಹಾಗೂ ನಿರ್ಬಂಧಿತ ಅಂತರದ ಸರ್ವೆ ನಂಬರುಗಳಿಗೆ ವಿಶೇಷ ಫ್ಲಾಗ್ ಅಳವಡಿಸಲು ಮತ್ತು ಈ ಫ್ಲಾಗ್ ಅನ್ನು ಕೇವಲ ಜಿಲ್ಲಾಧಿಕಾರಿಗಳ ಲಾಗಿನ್ ನಲ್ಲಿ ತೆರವುಗೊಳಿಸಲು ಅವಕಾಶ ಕಲ್ಪಿಸಬಹುದು
- ಮಂಜೂರಾತಿಯ (ಅಕ್ರಮ ಸಕ್ರಮ) ಮ್ಯುಟೇಶನ್ ವರದಿ ತಾಲ್ಲೂಕುವಾರು ಪೂರ್ವನಿರ್ಧಾರಿತ ಸಂಖ್ಯೆಗಳನ್ನು ಮೀರಿದಾಗ ಸ್ವಯಂಚಾಲಿತವಾಗಿ ಗುರುತಿಸಿರುವ ಮೇಲಧಿಕಾರಿಗಳಿಗೆ ವರದಿಯಾಗುವಂತೆ (Whatsapp ಮೂಲಕ) ಭೂಮಿ ತಂತ್ರಾಂಶದಲ್ಲಿ ಸೂಕ್ತ ಅವಕಾಶ ಕಲ್ಪಿಸಬೇಕು ಇದರಿಂದ ಒಂದೇ ತಾಲ್ಲೂಕಿನಲ್ಲಿ ಅನೇಕ ಮಂಜೂರಾತಿಗಳಾದಲ್ಲಿ ಶೀಘ್ರವಾಗಿ ನಿಗಾ ವಹಿಸಲು ಸಹಕಾರಿಯಾಗುತ್ತದೆ
- ಕೃತಕ ಬುದ್ಧಿವಂತಿಕೆ ಉಪಯೋಗಿಸಿ (ವಿವಿಧ ಪರಿಶೀಲನೆ / ಮಿತಿ ಲಗತ್ತಿಸಿ) ತಾಲ್ಲೂಕಿನಲ್ಲಿ ನಡೆಯುವಸಂಶಯಾಸ್ಪದ ವ್ಯವಹಾರಗಳ ವರದಿಯು ಸ್ವಯಂಚಾಲಿತವಾಗಿ ಗುರುತಿಸಿರುವ ಮೇಲಧಿಕಾರಿಗಳಿಗೆ ವರದಿಯಾಗುವಂತೆ (Whatsapp ಮೂಲಕ) ಭೂಮಿ ತಂತ್ರಾಂಶದಲ್ಲಿ ಸೂಕ್ತ ಅವಕಾಶ ಕಲ್ಪಿಸಬೇಕು. (ಉದಾಹರಣೆಗೆ ಶಿರಸ್ತೇದಾರರ / ರಾಜಸ್ವ ನಿರೀಕ್ಷಕರ ಲಾಗಿನ್ ಗಳು ಪದೇ ಪದೆ ಬದಲಾದಲ್ಲಿ, ಮಂಜೂರಾತಿ ನಮೂದು ತಿಂಗಳಿಗೆ 50ಕ್ಕಿಂತ ಹೆಚ್ಚಿಗೆ ಆದಲ್ಲಿ ಇತ್ಯಾದಿ)

4. **ಇತರೇ ಕ್ರಮಗಳು**

- ಸಿಬ್ಬಂದಿಗಳಿಗೆ ಕನಿಷ್ಠ 5 ವರ್ಷಗಳಿಗೊಮ್ಮೆ ಕಡ್ಡಾಯ ತರಬೇತಿಯನ್ನು ನೀಡಬೇಕು. ಪ್ರತಿ ಪದೋನ್ನತಿಗೆ ಮುಂಚೆ ತರಬೇತಿಯನ್ನು ಕಡ್ಡಾಯಗೊಳಿಸಬೇಕು. ಪದೋನ್ನತಿಗೆ ಪರೀಕ್ಷೆಗಳನ್ನು ನಡೆಸಿ ಉತ್ತೀರ್ಣರಾದವರನ್ನು ಮಾತ್ರ ಪದೋನ್ನತಿಗೆ ಪರಿಗಣಿಸಬಹುದು. ಪ್ರಸ್ತುತ ಕೇವಲ ಪ್ರೊಬೇಶನರಿ ಅವಧಿ ಘೋಷಣೆಗೆ ಈ ವಿಧಾನವನ್ನು ಅನುಸರಿಸಲಾಗುತ್ತಿದೆ
- ಕಂದಾಯ ಇಲಾಖೆಯು ಮಾತೃ ಇಲಾಖೆಯಾಗಿದ್ದು, ಕಂದಾಯ ವಿಷಯದೊಂದಿಗೆ ಪ್ರಕೃತಿ ವಿಕೋಪ, ಕೃಷಿ ಗಣತಿ, Crop Survey, Crop experiment, ಚುನಾವಣೆ, ಜನಗಣತಿ ಒಳಗೊಂಡಂತೆ ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸಹ ಮುಂಚೂಣಿಯಲ್ಲಿ

ಕಾರ್ಯ ನಿರ್ವಹಿಸುವುದರಿಂದ ಸಿಬ್ಬಂದಿಯ ಕೊರತೆ ಇಲ್ಲದಂತೆ ಕಾಲಕಾಲಕ್ಕೆ ನೇಮಕಾತಿ / ಪದೋನ್ನತಿ ನೀಡಲು ಕ್ರಮ ಕೈಗೊಳ್ಳಬೇಕು

- ಒಬ್ಬ ಸಿಬ್ಬಂದಿಯು ಒಂದೇ ತಾಲ್ಲೂಕಿನಲ್ಲಿ 3-5 ವರ್ಷಕ್ಕಿಂತ ಹೆಚ್ಚಿಗೆ ನಿರಂತರವಾಗಿ ಕಾರ್ಯನಿರ್ವಹಿಸದಂತೆ ಕ್ರಮಕೈಗೊಳ್ಳಬೇಕು
- ಸಿಬ್ಬಂದಿಗಳಿಗೆ ಕೇಂದ್ರಸರಕಾರದ ಮಾದರಿಯಲ್ಲಿ ವೇತನವನ್ನು ನೀಡಿ, ಸೂಕ್ತ ದರದಲ್ಲಿ ಭತ್ಯೆಯನ್ನು ನೀಡಬೇಕು (HRA and DA, etc) ಪ್ರಸ್ತುತ ನೀಡುತ್ತಿರುವ ಮನೆ ಬಾಡಿಗೆ ದರದಲ್ಲಿ ರಾಜ್ಯದ ಯಾವುದೇ ಭಾಗದಲ್ಲಿ ಬಾಡಿಗೆ ಮನೆಯನ್ನು ಪಡೆಯುವುದು ಅಸಾಧ್ಯವಾಗಿದೆ. ಪ್ರಯಾಣ ಭತ್ಯೆ ನೀಡಲು ಕಂದಾಯ ಇಲಾಖೆಗೆ ಸರಿಯಾದ ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡಬೇಕು. ಕ್ಷೇತ್ರ ಸಿಬ್ಬಂದಿಗೆ ಪೋಲೀಸ್ ಮಾದರಿಯಲ್ಲಿ ವಿಶೇಷ ಭತ್ಯೆಯನ್ನು ನೀಡುವ ಬಗ್ಗೆ ಪರಿಗಣಿಸಬಹುದು ಗ್ರಾಮ ಆಡಳಿತಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರಿಗೆ ಕಛೇರಿ ಕಟ್ಟಡ ಮತ್ತು ಕೇಂದ್ರ ಸ್ಥಾನದಲ್ಲಿ ವಸತಿ ವ್ಯವಸ್ಥೆ ಒದಗಿಸಿದಲ್ಲಿ ಕೇಂದ್ರ ಸ್ಥಾನದಲ್ಲಿ ವಾಸವಿರಲು ಉತ್ತೇಜನವನ್ನು ನೀಡಿದಂತೆ ಆಗುತ್ತದೆ. ಕಂದಾಯ ಇಲಾಖೆಯ ಎಲ್ಲ ನೌಕರರಿಗೂ ಕೇಂದ್ರಸ್ಥಾನದಲ್ಲಿ ವಸತಿ ಸಂಕೀರ್ಣ ಒದಗಿಸಬಹುದು ಇದರಿಂದ ಇಲಾಖೆಯ ಸಿಬ್ಬಂದಿಯು ಹೆಚ್ಚಿನ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲು ಅನುಕೂಲವಾಗುತ್ತದೆ.
- ಸರಕಾರವು ಕಾಲಕಾಲಕ್ಕೆ ಅಕ್ರಮ ಮಂಜೂರಾತಿಯನ್ನು ಸಕ್ರಮ ಗೊಳಿಸುವ ತಿದ್ದುಪಡಿಗಳನ್ನು ಜಾರಿಗೆ ತರುವುದರಿಂದ ಸಾರ್ವಜನಿಕರು ಸರಕಾರಿ ಭೂಮಿಯನ್ನು ಒತ್ತುವರಿ ಮಾಡುವುದು ನಮ್ಮ ಅಧಿಕಾರ/ಹಕ್ಕು ಎಂದು ಪರಿಗಣಿಸಿರುವುದರಿಂದ ಸರಕಾರಿ ಭೂಮಿಯನ್ನು ಕಾಪಾಡುವುದು ಕಂದಾಯ ಇಲಾಖೆಗೆ ಅತ್ಯಂತ ಕಷ್ಟಕರ ಕೆಲಸವಾಗಿರುತ್ತದೆ. ಒತ್ತುವರಿಯನ್ನು ತಡೆಗಟ್ಟುವ ಬಗ್ಗೆ ತಹಶೀಲ್ದಾರರಿಗೆ ಹೆಚ್ಚಿನ ಅಧಿಕಾರವನ್ನು ನೀಡಬಹುದು. ಕಲಂ 39 ರಲ್ಲಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಮಾತ್ರ ನೀಡಿರುವುದರಿಂದ ವಿಳಂಬವಾಗುತ್ತಿದೆ. ಪ್ರಸ್ತುತ ಕಲಂ 104 ರಲ್ಲಿ ತಹಶೀಲ್ದಾರರಿಗೆ ಜಿಲ್ಲಾಧಿಕಾರಿಗಳು ಮಂಜೂರು ಮಾಡಲು ಅಧಿಕಾರ ಹೊಂದಿರುವ ಭೂಮಿಗೆ(ಉದಾ ಗೋಮಾಳ, ಸರಕಾರಿ ಖರಾಬು) ನೋಟೀಸು ನೀಡಲು ಅಧಿಕಾರವಿಲ್ಲ. ತಹಶೀಲ್ದಾರರಿಗೇ ಈ ಅಧಿಕಾರವನ್ನು ಪ್ರತ್ಯಾಯೋಜಿಸಿದಲ್ಲಿ ಹೆಚ್ಚಿನ ಹಿಡಿತ ಸಾಧಿಸಬಹುದು.
- ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗೆಯನ್ನು ಭದ್ರಪಡಿಸಬೇಕಾದ ಅಗತ್ಯ ಇರುವುದರಿಂದ ಅರಣ್ಯ ಇಲಾಖೆಗೆ ಸಂಬಂಧಿಸಿದ ಭೂಮಿಯನ್ನು ಕೂಡಲೇ ಭೂಮಿಯಲ್ಲಿ ಇಂಡೀಕರಣಗೊಳಿಸಬೇಕು ಮತ್ತು ಜಂಟಿ ತನಿಖೆಯಿಂದ ಗಡಿಯನ್ನು ಗುರುತಿಸಿ ಸರಕಾರದ ಸುತ್ತೋಲೆ ಕಂ ಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 ರಲ್ಲಿ ಸೂಚಿಸಿರುವಂತೆ ಪಕ್ಕಾಪೋಡಿ ಮಾಡಲು ಕ್ರಮವಹಿಸಬೇಕು. ಅರಣ್ಯ ಇಲಾಖೆಯು ಬೇಲಿಯನ್ನು ನಿರ್ಮಿಸಿ ಅಥವಾ ಕಂದಕವನ್ನು ತೋಡಿ ಗಡಿಯನ್ನು ನಿಖರವಾಗಿ ಗುರುತಿಸಿಕೊಂಡಲ್ಲಿ ಅತಿಕ್ರಮಣ ತಪ್ಪುತ್ತದೆ. ಪರಿಭಾವಿತ ಅರಣ್ಯ (Deemed Forest) ಮತ್ತು ಸೆಕ್ಷನ್ 4 ಅಧಿಸೂಚನೆಯಾದ ಪ್ರಕರಣದಲ್ಲಿ ಕೂಡಲೇ ಸೆಕ್ಷನ್ 5 ಕ್ಕೆ ಕ್ರಮವಹಿಸಿ, ಅರಣ್ಯ ವ್ಯವಸ್ಥಾಪನಾಧಿಕಾರಿಯು

ಮುಂದಿನ ಕ್ರಮಕ್ಕೆಗೊಂಡು ಅರ್ಹ ತಪ್ಪಾಗಿ ಅರಣ್ಯ ಎಂದು ಗುರುತಿಸಿರುವುದನ್ನು ಕೂಡಲೇ ಸರಿಪಡಿಸಲು ಕ್ರಮಕೈಗೊಳ್ಳಬೇಕು


- ಕಲಂ 192 ರಲ್ಲಿ ಪ್ರಕರಣ ದಾಖಲಿಸಲು ಪೋಲೀಸು ಇಲಾಖೆಗೆ ನಿರ್ದೇಶನ ನೀಡಬೇಕು. ಪ್ರಸ್ತುತ ಪೋಲೀಸರಿಗೆ ಈ ಬಗ್ಗೆ ಗೊಂದಲ ಇರುವುದರಿಂದ ನೇರವಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸೂಚಿಸಿ ಹಿಂಬರಹ ನೀಡಿದ ಅನೇಕ ಪ್ರಕರಣಗಳಿವೆ
- ಈಗಾಗಲೇ ರಾಜ್ಯದಾದ್ಯಂತ ಸರಕಾರಿ ಭೂಮಿಯ ಕೊರತೆ ಇರುವುದರಿಂದ ಹೊಸ ಮಂಜೂರಾತಿ ಅವಕಾಶವನ್ನು ನೀಡದೇ ಒತ್ತುವರಿದಾರರಿಗೆ ಮಾತ್ರ ಒಂದು ಬಾರಿ ಅವಕಾಶವನ್ನು ನೀಡಿ ವಾರ್ಷಿಕ ಕೃಷಿ ಗುತ್ತಿಗೆ ನೀಡಬಹುದು. ಹೊಸ ಒತ್ತುವರಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಇದರಿಂದ ಭೂಮಿಯನ್ನು ಮಂಜೂರಾತಿಯ ನಂತರ ಕೃಷಿಗೆ ನೀಡದೇ ಪರಭಾರೆ ಅವಧಿಯ ನಂತರ ಮಾರಾಟ ಮಾಡುವುದನ್ನು ತಡೆಗಟ್ಟಬಹುದು.
- ಈಗಾಗಲೇ ನೀಡಿರುವ ಮಂಜೂರಾತಿ / ಗುತ್ತಿಗೆ (ಗಣಿ ಒಳಗೊಂಡು) ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿ ಜಿಯೋಫೆನ್ಸಿಂಗ್ ಮಾಡಿ ಅವುಗಳನ್ನು ಸೆಟಲೈಟ್ ಆಧಾರಿತ ಕೃತಕ ಬುದ್ಧಿವಂತಿಕೆ (Artificial Intelligence) ಬಳಸಿ ಉದ್ದೇಶ ಬದಲಾವಣೆ ಆದಲ್ಲಿ ಮಾಹಿತಿಯು ಗುರುತಿಸಿದ ಅಧಿಕಾರಿಗೆ ಸ್ವಯಂಚಾಲಿತವಾಗಿ ರವಾನೆಯಾಗುವಂತೆ ಕ್ರಮವಹಿಸಬಹುದು. (ಪ್ರಸ್ತುತ ಅರಣ್ಯ ಬೆಂಕಿ ಕಂಡುಹಿಡಿಯಲು ಈ ವಿಧಾನವನ್ನು ಅನುಸರಿಸಲಾಗುತ್ತಿದೆ) ಇದರಿಂದ ಹೊಸ ಒತ್ತುವರಿಯನ್ನು ಸಹ ಗುರುತಿಸಲು ಸಾಧ್ಯವಿದೆ.

## <u>ಅಂತಿಮ ಸಂಕ್ಷಿಪ್ತ ವರದಿ</u>


ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರವಾದ ವರದಿಯ ಒಂದು ಪ್ರತಿಯನ್ನು ಕಡತದಲ್ಲಿ ಇಡಲು ತಹಶೀಲ್ದಾರರಿಗೆ ಹಸ್ತಾಂತರಿಸಲಾಗಿದ್ದು, ಇನ್ನೊಂದು ಪ್ರತಿಯನ್ನು ಈ ವರದಿಗೆ ಲಗತ್ತಿಸಲಾಗಿದೆ. ಈ ಮೇಲಿನ ವಿಷಯಗಳನ್ನು ಆದರಿಸಿ ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಪ್ರಕರಣಗಳನ್ನು ವರ್ಗೀಕರಣಗೊಳಿಸಿ ತನಿಖಾ ತಂಡವು ವರದಿಸಿರುತ್ತದೆ

| | **ಸಂಖ್ಯೆ** | **ವಿಸ್ತೀರ್ಣ (ಎಕರೆ)** |
|---|---|---|
| **ಒಟ್ಟು ಪ್ರಕರಣಗಳು** | **2243** | **5238.29** |
| **ಮಂಜೂರಾತಿಯಾಗಿರುವ ಅನರ್ಹ ಪ್ರಕರಣಗಳು** | **936** | **2349.07** |
| **ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳು** | **1062** | **2371.36** |
| **ಕಾರ್ಯವಿಧಾನ ವೈಫಲ್ಯ ಕಂಡುಬಂದ ಪ್ರಕರಣಗಳು** | **245** | **517.26** |


## ಕಡೂರು ತಾಲ್ಲುಕು ಭೂ ಮಂಜೂರಾತಿ ಪರಿಶೀಲನಾ ವರದಿ




## ಕಡೂರು ತಾಲ್ಲೂಕು ಪ್ರಕರಣಗಳ ವಿಶ್ಲೇಷಣೆ : ಸಂಖ್ಯಾವಾರು



## ಕಡೂರು ತಾಲ್ಲೂಕು ಪ್ರಕರಣಗಳ ವಿಶ್ಲೇಷಣೆ : ವಿಸ್ತೀರ್ಣ




ಶ್ರೀ. ಗಣಪತಿ ಶಾಸ್ತ್ರಿ    ಶ್ರೀ. ಬಿ.ಎನ್. ರಾಜೀವ    ಕು. ನೀಲಪ್ರಭಾ

ಕು. ರೇಣುಕಮ್ಮ    ಶ್ರೀ. ವಿಜಯಕುಮಾರ ಜಿ. ಕಡಕೋಳ    ಶ್ರೀ. ಶಿವಕುಮಾರ ಬಾಬಾ

ಶ್ರೀ. ಪಿ.ಆರ್. ಗುರುರಾಜ    ಶ್ರೀ. ಶರಣಪ್ಪ ಸುತ್ತಗಟ್ಟಿ    ಶ್ರೀ. ಅಮರೇಶ ಭಂಡಾರ

ಶ್ರೀ. ಸಂಜಯ ಕಾಂಬ್ಳೆ    ಶ್ರೀ. ಬಸವರಾಜ ಎಂ    ಶ್ರೀ. ಎನ್. ಆರ್. ಕರಿಯಾನಾಯ್ಕ

ಶ್ರೀ. ಕೆ. ರಾಮಲಕ್ಷ್ಮಯ್ಯ

**<u>ಈ ವರದಿಗೆ ಈ ಕೆಳಗಿನ ದಾಖಲೆ / ವರದಿಗಳನ್ನು ಲಗತ್ತಿಸಿದೆ</u>**

| ಕ್ರ.ಸಂ | ಅನುಬಂಧದ ಹೆಸರು | ಪುಟಗಳು |
|---|---|---|
| 1 | ಅನರ್ಹ ಪ್ರಕರಣಗಳ ಅನರ್ಹತೆವಾರು ಪಟ್ಟಿ | 47 |
| 1ಅ | ಅನರ್ಹ ಪ್ರಕರಣಗಳಲ್ಲಿ ಭಾಗಿಯಾದ ವ್ಯಕ್ತಿಗಳ ವಿವರ (ಕಡತವಾರು) | 47 |

| | | |
|---|---|---|
| 2 | ಅನರ್ಹ ಪ್ರಕರಣಗಳ ಪಟ್ಟಿ | 38 |
| 3 | ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳ ಅನರ್ಹ ತವಾರು ಪಟ್ಟಿ | 118 |
| 4 | ಮರುಪರಿಶೀಲನೆಗೆ ಶಿಫಾರಸು ಮಾಡಿದ ಪ್ರಕರಣಗಳ ಪಟ್ಟಿ | 43 |
| 5 | ಕಾರ್ಯವಿಧಾನ ವೈಫಲ್ಯ ಕಂಡುಬಂದಿರುವ ಪ್ರಕರಣಗಳ ಅನರ್ಹ ತವಾರು ಪಟ್ಟಿ | 167 |
| 6 | ಕಾರ್ಯವಿಧಾನ ವೈಫಲ್ಯ ಕಂಡುಬಂದಿರುವ ಪ್ರಕರಣಗಳ ಪಟ್ಟಿ | 10 |
| 7 | ಕಡತ ಲಭ್ಯವಿಲ್ಲದೇ, ಅರ್ಜಿ ವಹಿಯಲ್ಲಿ ನಮೂದಿಲ್ಲದೇ, ಸಮಿತಿಯಲ್ಲಿ ಮಂಡಿಸದೇ ಪಹಣಿ ನಮೂದಾದ ಪ್ರಕರಣಗಳ ಪಟ್ಟಿ | 3 |
| 8 | ಪ್ರಕರಣವಾರು ವಿವರವಾದ ವರದಿಯ ಪ್ರತಿ | **4486** |
| 9 | ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಜಮೀನಿನ ತರಹ ಮತ್ತು ಆಕಾರಬಂದಿನ ವಿಸ್ತೀರ್ಣದ ಬಗ್ಗೆ ಪಡೆದ ಮಾಹಿತಿ | ಮಿಂಚಂಚೆ ಮೂಲಕ |
| 10 | ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ನಿರ್ಬಂಧಿತ ಅಂತರದ ಬಗ್ಗೆ ಪಡೆದ ಮಾಹಿತಿ | 5 |
| 11 | ತಹಶೀಲ್ದಾರರಿಂದ ಪಡೆದ ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರುವ ಆದೇಶಪ್ರತಿಯ ಮಾಹಿತಿ | 2699 |
| 12 | ತಹಶೀಲ್ದಾರರಿಂದ ಪಡೆದ ಹಾಜರುಪಡಿಸದೇ ಇರುವ ಕಡತಗಳ ಪಟ್ಟಿ | 11 |
| 13 | ಅರಣ್ಯ ಇಲಾಖೆಯಿಂದ ಪಡೆದ ವಿವಿಧ ಪ್ರಕಾರದ ಅರಣ್ಯ ಭೂಮಿಯ ಬಗೆಗಿನ ಮಾಹಿತಿ | 112 |
| 14 | ಅಮೃತಮಹಲ್ ಕಾವಲು ಭೂಮಿಯ ಮಾಹಿತಿ | 2 |
| 15 | ತನಿಗೆ ಸಂಬಂಧಿಸಿದಂತೆ ನಮೂದಿಸಿರುವ ಆದೇಶಗಳ ಪ್ರತಿ | 14 |
| 16 | ಅರಣ್ಯ ಇಲಾಖಾ ಭೂಮಿಯ ಒತ್ತುವರಿಯ ಬಗ್ಗೆ ದಿಶಾಂಕ ಉಪಗ್ರಹ ನಕ್ಷೆ | 20 |
| 17 | ತನಿಖೆಯ ಸಮಯದಲ್ಲಿ ತನಿಖಾ ತಂಡವು ಜಿಲ್ಲಾಡಳಿತ ಮತ್ತು ಇತರ | 9 |

## ಇಲಾಖೆಗಳಿಗೆ ನೀಡಿದ ಮನವಿಗಳು

| | | |
|---|---|---|
| 8 | ಪಹಣಿ ವಿಸ್ತೀರ್ಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಹಶೀಲ್ದಾರರಿಂದ ಮತ್ತು ಆಕಾರಬಂದು ಹಾಗೂ ಜಮೀನಿನ ತರಹ (ಕರ್ದಾ) ಸಂಬಂಧಿಸಿದ ಮಾಹಿತಿಯನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಮಿಂಚಂಚೆಯ ಮೂಲಕ ಪಡೆಯಲಾಗಿದೆ | ಮಿಂಚಂಚೆ ಮೂಲಕ |
| 19 | ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣವಾರು ಮತ್ತು ವಿಷಯವಾರು ಸಂಗ್ರಹಿಸಿದ ವಿವರವಾದ ಮಾಹಿತಿಯ ಪ್ರತಿಯನ್ನು ಮಿಂಚಂಚೆಯ ಮೂಲಕ Excel Format ನಲ್ಲಿ ರವಾನಿಸಲಾಗಿದೆ ಇದರಿಂದ ವಿವಿಧ ಸಂಯೋಜನೆಯನ್ನು (permutation and combination) ಬಳಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ | ಮಿಂಚಂಚೆ ಮೂಲಕ |

| | | |
|---|---|---|
| 20 | ತಹಶೀಲ್ದಾರರು ಕಡೂರು ಅವರು ನೀಡಿದ ಕಡತ ನಿರ್ವಹಿಸಿದ ನೌಕರರ ಮಾಹಿತಿ | 54 |
| 21 | ಸುತ್ತೋಲೆಗಳ ಪ್ರತಿ | 64 |
| 22 | ತಹಶೀಲ್ದಾರರು ಕಡೂರು ಇವರಿಂದ ಪಡೆದ ಭೂಮಿ ಲಾಗಿನ್, RRT ಮತ್ತು LND ಸಿಬ್ಬಂದಿಗಳ ಮಾಹಿತಿ (ನೌಕರರು) | 9 |
| 23 | ತಹಶೀಲ್ದಾರರು ಕಡೂರು ಮತ್ತು ಇತರೇ ಅಧಿಕಾರಿಗಳಿಂದ ಪಡೆದ ಮಾಹಿತಿಗಳು (ಮಿಂಚಂಚೆ ಮತ್ತು WhatsApp Screenshot ಜೊತೆ) | 36 |
| 24 | ಕಾರ್ಯನಿರ್ವಹಿಸಿದ ತಹಶೀಲ್ದಾರರ ಮತ್ತು ಭೂ ಸಕ್ರಮೀಕರಣ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಮಾಹಿತಿ | 4 |
| 25 | ಸಕ್ಷಮ ಪ್ರಾಧಿಕಾರದಿಂದ ಹಿಂದಿರುಗಿಸಿದ ಕಡತಗಳ ಪಟ್ಟಿ | 1 |
| 26 | ಸಮಿತಿಯು ಶಿಫಾರಸು ಮಾಡಿದ ತಂತ್ರಾಂಶದ ರೂಪುರೇಶೆ | 5 |

ತನಿಖೆಯ ಸಮಯದಲ್ಲಿ ಅಗತ್ಯ ಸಹಕಾರವನ್ನು ನೀಡಿದ ತಾಲ್ಲೂಕು ಕಛೇರಿ ಸಿಬ್ಬಂದಿ, ತಹಶೀಲ್ದಾರರು, ಭೂಮಿ ಸಮಾಲೋಚಕರೊಂದಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾರ್ಯನಿರ್ವಹಿಸಿದವರ ಸೇವೆಯನ್ನು ತನಿಖಾ ತಂಡವು ಸ್ಮರಿಸುತ್ತದೆ. ಜಿಲ್ಲಾಡಳಿತದ ವತಿಯಿಂದ ನೀಡಿದ ಸಹಕಾರ ಮತ್ತು ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಕಾಲಕಾಲಕ್ಕೆ ನೀಡಿದ ಸಲಹೆ ಸೂಚನೆಗಳಿಗೆ ತನಿಖಾ ತಂಡವು ಋಣಿಯಾಗಿರುತ್ತದೆ.

**ಮಾನ್ಯ ಆಯುಕ್ತರು ಕಂದಾಯ ಇಲಾಖೆ ಮತ್ತು ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಅವರು ಕಾಲಕಾಲಕ್ಕೆ ನೀಡಿದ ಸೂಚನೆಯಂತೆ ವರದಿಯನ್ನು ತಯಾರಿಸಲಾಗಿದ್ದು, ವರದಿಯನ್ನು ತಯಾರಿಸಲು ಮಾನ್ಯರ ನಿರ್ದೇಶನಗಳು ಅತ್ಯಂತ ಪ್ರಮುಖವಾಗಿರುತ್ತವೆ. ಕೆಲಸದ ಒತ್ತಡ ನಡುವೆಯೂ ಸಮಯವನ್ನು ನೀಡಿ ತನಿಖಾ ತಂಡದ ಸದಸ್ಯರಿಗೆ ಅತ್ಯಮೂಲ್ಯವಾದ ಕಲಿಕಾ ಅವಕಾಶವನ್ನು ಮಾನ್ಯರು ನೀಡಿರುತ್ತಾರೆ. ತನಿಖಾ ತಂಡವು ಮಾನ್ಯರಿಗೆ ಆಭಾರಿಯಾಗಿದೆ.**

ತನಿಖಾ ತಂಡದ ಪರವಾಗಿ

CONFIDENTIAL

ಕಂದಾಯ ಇಲಾಖೆ

# ಜಿಲ್ಲಾಧಿಕಾರಿಗಳ ಕಾರ್ಯಾಲಯ

# ಚಿಕ್ಕಮಗಳೂರು ಜಿಲ್ಲೆ – 577101

ಮಿಂಚಂಚೆ – ggshastri@gmail.com Mobile – 9632510130

ತನಿಖೆ/ಸಿ ಆರ್ / 026 / 23-24 ದಿ. 20 ಸಪ್ಟಂಬರ 2023

ಗೆ

**ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು**

**ಕಂದಾಯ ಇಲಾಖೆ**

**5ನೇ ಮಹಡಿ, ಬಹುಮಹಡಿ ಕಟ್ಟಡ**

**ಬೆಂಗಳೂರು – 560 001**

ಮಾನ್ಯರೇ,

| | |
|---|---|
| ವಿಷಯ | **ಮುಡಿಗೆರೆ ತಾಲ್ಲೂಕಿನಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 94 ಎ ಅಡಿಯಲ್ಲಿ ಮಾಡಿರುವ ಮಂಜೂರಾತಿಗಳ ಪರಿಶೀಲನಾ ವರದಿ** |
| **ಉಲ್ಲೇಖ** | 1. ಸರ್ಕಾರದ ಆದೇಶ ಸಂಖ್ಯೆ ಇ-ಆರ್ ಡಿ 78 ಎಟಿಎಸ 2023 ದಿನಾಂಕ 12.09.2023.<br>2. ಸರ್ಕಾರದ ಆದೇಶ ಸಂಖ್ಯೆ ಇ.ಕಂ.ಇ 78 ಎಟಿಎಸ್-2023 ದಿನಾಂಕ 07.08.2023<br>3. ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ ಸಿಬ್ಬಂದಿ(1) ಸಿಆರ್ 83/2022-23 ದಿನಾಂಕ 22.08.2023 |

**ಮುನ್ನುಡಿ:** ಸರ್ಕಾರದ ಆದೇಶ ಸಂಖ್ಯೆ ಇ.ಕಂ.ಇ 78 ಎಟಿಎಸ್-2023 ದಿನಾಂಕ 07.08.2023 ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ ಸಿಬ್ಬಂದಿ ಸಿಆರ್ 83/2022-23 ದಿನಾಂಕ 10.08.2023 ರಂತೆ 13 ಅಧಿಕಾರಿಗಳ ತಂಡವನ್ನು ಮುಡಿಗೆರೆ ತಾಲ್ಲೂಕಿನಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 94 ಎ ಅಡಿಯಲ್ಲಿ ಮಾಡಿರುವ ಮಂಜೂರಾತಿಗಳ ಪರಿಶೀಲನ ನಡೆಸಿ ವರದಿಯನ್ನು ನೀಡಲು ನಿಯೋಜಿಸಲಾಗಿದ್ದು, ಸುಮಾರು 15 ದಿನಗಳ ಪರಿಶೀಲನೆಯನ್ನು ನಡೆಸಿದ ತಂಡವು ಈ ಕೆಳಗಿನ ವರದಿಯನ್ನು ತಯಾರಿಸಿರುತ್ತದೆ **ಉಲ್ಲೇಖ 1 ರ ಸರ್ಕಾರಿ ಆದೇಶದಂತೆ ವರದಿಯನ್ನು ಅಂತಿಮಗೊಳಿಸಲಾಗಿದೆ.**

ಪ್ರಾಥಮಿಕ ವರದಿಯ ಕರಡು ಪ್ರತಿಯನ್ನು ಸಲ್ಲಿಸಿದ ಸಮಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ದಿನಾಂಕ

29 ಅಗಸ್ಟ್ 2023 ರಂದು ನೀಡಿರುವ ಮೌಖಿಕ ನಿರ್ದೇಶನದಂತೆ ವರದಿಯನ್ನು ಪರಿಷ್ಕರಿಸಲು ತನಿಖೆ/ಸಿ ಆರ್ / 016 / 23-24 ದಿ: 29 ಅಗಸ್ಟ್ 2023 ರಂತೆ ಮಾರ್ಗದರ್ಶನ ಕೋರಲಾಯಿತು.

ದಿನಾಂಕ 31 ಅಗಸ್ಟ್ 2023 ರಂದು ಮಾನ್ಯ ಆಯುಕ್ತರು ಕಂದಾಯ ಇಲಾಖೆ ಅವರು ತನಿಖಾ ತಂಡದೊಂದಿಗೆ ಸುಧೀರ್ಘ ಚರ್ಚೆಯನ್ನು ನಡೆಸಿ ತಂಡದ ಎಲ್ಲ ಅನುಮಾನಗಳಿಗೆ ಸೂಕ್ತ ಸಮಜಾಯಿಸಿ ನಿರ್ದೇಶನವನ್ನು ನೀಡಿರುತ್ತಾರೆ. ತಂಡದ ಸದಸ್ಯರು ಮಾನ್ಯ ಆಯುಕ್ತರೊಂದಿಗೆ ಚರ್ಚಿಸಿದ ನಂತರ ಅನರ್ಹತೆಗಳು, ಅವುಗಳನ್ನು ಗುರುತಿಸುವ ಕಾರ್ಯವಿಧಾನ ಮತ್ತು ಅನರ್ಹತೆಗಳನ್ನು ವರ್ಗೀಕರಿಸುವ, ದಾಖಲೆಗಳನ್ನು ಸಂಗ್ರಹಿಸುವ ವಿಧಾನವನ್ನು ಮಾನ್ಯರ ಸೂಚನೆಯಂತೆ ಅಂತಿಮಗೊಳಿಸಲಾಯಿತು. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಅವರ ಸೂಚನೆಯಂತೆ ಅನರ್ಹ ಪ್ರಕರಣಗಳಲ್ಲಿ ಮಂಜೂರಾತಿಗೆ ಕಾರಣೀಭೂತರಾದ ವ್ಯಕ್ತಿಗಳನ್ನು ವರದಿಯಲ್ಲಿ ಗುರುತಿಸುವ ಬಗ್ಗೆ ಸಹ ಮಾನ್ಯ ಆಯುಕ್ತರು ಕಂದಾಯ ಇಲಾಖೆ ಅವರೊಂದಿಗೆ ಚರ್ಚಿಸಿ ವಿಧಾನವನ್ನು ಅಂತಿಮಗೊಳಿಸಲಾಯಿತು.

**<u>ತನಿಖಾ ತಂಡದ ಸದಸ್ಯರು</u>**(ನಿಯೋಜಿತ ತಹಶಿಲ್ದಾರರು)

ಶ್ರೀ. ಗಣಪತಿ ಶಾಸ್ತ್ರಿ
ಶ್ರೀ. ಬಿ.ಎಸ್ ರಾಜೀವ
ಕು. ನೀಲಪ್ರಭಾ
ಕು. ರೇಣುಕಮ್ಮ
ಶ್ರೀ. ವಿಜಯಕುಮಾರ ಜಿ. ಕಡಕೋಳ
ಶ್ರೀ. ಶಿವಕುಮಾರ ಶಾಬಾ
ಶ್ರೀ. ಪಿ.ಆರ್. ಗುರುರಾಜ್
ಶ್ರೀ. ಪರಶುರಾಮ ಸತ್ತಿಗೇರಿ
ಶ್ರೀ. ಅಮರೇಶ ಬಿರಾದಾರ
ಶ್ರೀ. ಸಂಜಯ ಕಾಂಬ್ಳೆ
ಶ್ರೀ. ಬಸವರಾಜ ಎಂ
ಶ್ರೀ. ಎನ್. ಆರ್. ಕರಿಯಾ ನಾಯ್ಕ
ಶ್ರೀ. ಸಿ ರಾಮಲಕ್ಷ್ಮಯ್ಯ

**<u>ಪ್ರಸ್ತಾವನೆ</u>**: ಉಲ್ಲೇಖ 2 ರ ಆದೇಶದಂತೆ ತಂಡವು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಅವರಲ್ಲಿ ವರದಿಮಾಡಿಕೊಂಡ ನಂತರ ಉಲ್ಲೇಖ 3 ರಂತೆ ಮುಡಿಗೆರೆ ತಾಲ್ಲೂಕಿನ ಮಂಜೂರಾತಿಗಳನ್ನು ಪರಿಶೀಲಿಸಲು ನಿಯೋಜಿಸಲಾಯಿತು. ಉಲ್ಲೇಖ 3 ರ ಆದೇಶದ 1ನೇ ಪ್ಯಾರಾದಲ್ಲಿ ಸೂಚಿಸಿದಂತೆ 2105 ಮಂಜೂರಾತಿ ಮ್ಯುಟೇಶನ್ ನಮೂದುಗಳ ಪಟ್ಟಿಯನ್ನು ಮಿಂಚಂಚೆಯ ಮೂಲಕ ಒದಗಿಸಲಾಯಿತು (ಮಿಂಚಂಚೆಯ ಪ್ರತಿ ಲಗತ್ತಿಸಿದೆ.) ಪ್ರಮುಖವಾಗಿ ತನಿಖೆಯ ಉದ್ದೇಶವು ಸರಕಾರಿ ಜಮೀನನ್ನು ಅನರ್ಹರಿಗೆ ಕಾನೂನುಬಾಹೀರವಾಗಿ ಮಂಜೂರಾತಿ ನೀಡಿ ಸರಕಾರಕ್ಕೆ ಹಾನಿಯನ್ನು

ಉಂಟುಮಾಡಿರುವುದರ ಬಗ್ಗೆ ಪರಿಶೀಲಿಸಿ ವರದಿಸುವುದು ಆಗಿರುವುದರಿಂದ. ತನಿಖೆಯನ್ನು ಆದಷ್ಟು ಸರಳೀಕರಣಗೊಳಿಸುವ ಉದ್ದೇಶದಿಂದ ಅನರ್ಹತೆಗಳನ್ನು ಗುರುತಿಸುವ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಯಿತು. ಗುರುತಿಸಲಾಗಿರುವ ಪ್ರಮುಖ ಕಾರ್ಯಲೋಪಗಳ ಪ್ರಕರಣಗಳನ್ನು ಮರುಪರಿಶೀಲನೆಗೆ ಶಿಫಾರಸು ಮಾಡಲಾಗಿದೆಯೇ ಹೊರತು ಅನರ್ಹ ಎಂದು ಗುರುತಿಸಲಾಗಿಲ್ಲ. ಮುಂದುವರೆದು 31 ಅಗಷ್ಟ 2023 ರಂದು ಮಾನ್ಯ ಆಯುಕ್ತರು ಕಂದಾಯ ಇಲಾಖೆ ಇವರೊಂದಿಗೆ ಚರ್ಚಿಸಿದ ನಂತರ ನಮೂನೆಗಳನ್ನು, ಅನರ್ಹತೆಗಳ ವಿಧಗಳನ್ನು ಚರ್ಚಿಸಿ ಅಂತಿಮಗೊಳಿಸಲಾಯಿತು. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಅವರು ದಿನಾಂಕ 05 ಸೆಪ್ಟೆಂಬರ 2023 ರಂದು ತನಿಖಾಧಿಕಾರಿಗಳೊಂದಿಗೆ ಸಭೆ ನಡೆಸಿ ಹೆಚ್ಚಿನ ಸೂಚನೆಗಳನ್ನು ನೀಡಿದರು.

ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಅ ರಂತೆ ಮಂಜೂರಾತಿಯನ್ನು ನೀಡುವಾಗ ಈ ಕೆಳಗಿನ ಕಾಯ್ದೆ ಮತ್ತು ನಿಯಮಗಳಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕಾಗುತ್ತದೆ ಮತ್ತು ಕಾಲಕಾಲಕ್ಕೆ ಸರಕಾರದಿಂದ ಹೊರಡಿಸಿರುವ ಈ ಕೆಳಗಿನ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಅನುಸರಿಸಬೇಕಾಗಿರುತ್ತದೆ

(i) ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 94 ಎ

(ii) ಕರ್ನಾಟಕ ಭೂಕಂದಾಯ ನಿಯಮಗಳು 1966 ನಿಯಮ 108 (ಅಧ್ಯಾಯ 13 ಅ)

(iii) ಕರ್ನಾಟಕ ಭೂಮಂಜೂರಾತಿ ನಿಯಮಗಳು 1969

(iv) ಆರ್.ಡಿ 59 ಎಲ್ ಜಿ ಪಿ 92 ದಿನಾಂಕ 26 ಜೂನ್ 1992 - 94 ಎ ಅಡಿಯಲ್ಲಿ ಭೂಮಂಜೂರಾತಿ ಮಾಡುವ ಬಗ್ಗೆ ಮುಂದುವರೆದ ಸೂಚನೆಗಳು

(v) ಆರ್.ಡಿ 5 ಎಲ್ ಜಿ ಪಿ 92 ದಿನಾಂಕ 14 ಜುಲೈ 1992 94 ಎ ಅಡಿಯಲ್ಲಿ ಭೂಮಂಜೂರಾತಿ ಮಾಡುವ ಬಗ್ಗೆ ಸ್ಪಷ್ಟೀಕರಣಗಳು

(vi) ಆರ್.ಡಿ 13 ಎಲ್ ಜಿ ಪಿ 91(ಭಾಗ) ದಿನಾಂಕ 09 ಮೇ 1994 - ಸರ್ವೆ ನಕ್ಷೆ ಇಲ್ಲದೇ ಮಂಜೂರಾತಿ ನೀಡುವ ಬಗ್ಗೆ.

(vii) ಆರ್.ಡಿ 94 ಎಲ್ ಜಿ ಪಿ 93 ದಿನಾಂಕ 02 ಫೆಬ್ರವರಿ 1994 ಗೋಮಾಳ ವಿಸ್ತೀರ್ಣ ತಗ್ಗಿಸುವ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

(viii) ಆರ್.ಡಿ 108 ಎಲ್ ಜಿ ಪಿ 93 ದಿನಾಂಕ 19 ಮಾರ್ಚ 1994 - ಅನಧಿಕೃತ ಸಾಗುವಳಿಯ ಅಕ್ರಮ ಮಂಜೂರಿಯನ್ನು ರದ್ದುಪಡಿಸುವ ಬಗ್ಗೆ.

(ix) ಆರ್.ಡಿ 38 ಎಲ್ ಜಿ ಪಿ 98 ದಿನಾಂಕ 08 ನವಂಬರ 2000 - ನಮೂನೆ 53 ಅರ್ಜಿಗಳ ಭೂಮಂಜೂರಾತಿ ಮಾಡುವ ಬಗ್ಗೆ ಸ್ಪಷ್ಟೀಕರಣಗಳು

(x) ಆರ್.ಡಿ 168 ಎಲ್ ಜಿ ಪಿ 2014 ದಿನಾಂಕ 18 ಸೆಪ್ಟೆಂಬರ 2014 - ನಿರ್ಬಂಧಿತ ಅಂತರ ನಿರ್ಧರಣೆ ಮಾಡುವಾಗ ನೇರವಾಗಿ ಅಳತೆ ಮಾಡುವ ಬಗ್ಗೆ ಮತ್ತು ಮಾಹಿತಿಯನ್ನು ಭೂ ಮಾಪನ ಇಲಾಖೆಯಿಂದ ಪಡೆಯುವ ಕುರಿತು

(xi) ಕಂಇ 23 ಎಲ್ ಜಿ ಪಿ 2016 ದಿನಾಂಕ 18 ಜುಲೈ 2016 – ಬಾಕಿ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಕುರಿತು

(xii) ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 – ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ನಕ್ಷೆ ತಯಾರಿಸುವ ಕುರಿತು ಹಾಗೂ ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಒಂದೇ ಸರ್ವೆ ನಂಬರಿನಲ್ಲಿ ಇದ್ದಾಗ ಪಕ್ಕಾ ಪೋಡಿ ಆದನಂತರ ಮಂಜೂರಾತಿ ನೀಡುವ ಕುರಿತು

(xiii) ಆರ್.ಡಿ 24 ಎಲ್ ಜಿ ಪಿ 2017(ಭಾಗ-1) ದಿನಾಂಕ 05 ಜೂನ್ 2017 – ಸಿ ಮತ್ತು ಡಿ ವರ್ಗದ ಜಮೀನನ್ನು ಮಂಜೂರು ಮಾಡುವ ಬಗ್ಗೆ.

(xiv) ಕಂ. ಇ 40 ಎಲ್ ಜಿ ಪಿ 2018 ದಿನಾಂಕ 25 ಅಕ್ಟೋಬರ 2018 – ನಿರ್ಭಂದಿತ ಅಂತರ ನಿರ್ಧರಣೆ ಮಾಡುವಾಗ ನೇರವಾಗಿ ಅಳತೆ ಮಾಡುವ ಬಗ್ಗೆ ಮತ್ತು ಮಾಹಿತಿಯನ್ನು ಭೂ ಮಾಪನ ಇಲಾಖೆಯಿಂದ ಪಡೆಯುವ ಕುರಿತು.

(xv) ಆರ್ ಡಿ 02 ಎಲ್ ಜಿ ಪಿ 2021 ದಿನಾಂಕ 24 ಫೆಬ್ರುವರಿ 2022 - ನಮೂನೆ 57 ರಲ್ಲಿ ಗೋಮಾಳ/ಶೇಂದಿವನ ಜಮೀನನ್ನು ಮಂಜೂರು ಮಾಡದೇ ಇರುವ ಕುರಿತು.

(xvi) ಪಿಎಮ್ ಯು/ಮೋಜಿನಿ 10/2008-09 ದಿನಾಂಕ 21-08-2008 – ಪೈಕಿ ಪಹಣಿಗಳನ್ನು ಸರಿಪಡಿಸುವ ಕುರಿತು

(xvii) ಜಮಾಬಂದಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ ಆರ್ ಡಿ 41 ಎಲ್ ಜಿ ಪಿ 2014, ದಿನಾಂಕ 13-03-2014

1 ಈ ಕೆಳಗಿನ ಅನರ್ಹತೆಯನ್ನು ವರದಿಯಲ್ಲಿ ಪರಿಗಣಿಸಲಾಗಿದ್ದು ಇಂತಹ ಅನರ್ಹತೆಯು ಕಂಡುಬಂದಲ್ಲಿ ಅಂತಹ ಫಲಾನುಭವಿಗಳನ್ನು ಅನರ್ಹ ಎಂದು ಗುರುತಿಸಲಾಗಿದೆ. **(Table 1)**

| ಕ್ರ.ಸಂ | ಅನರ್ಹತೆ | ಕಲಂ / ನಿಯಮ / ಸುತ್ತೋಲೆ |
|---|---|---|
| (i) | ಅರ್ಜಿಯನ್ನು ಸಲ್ಲಿಸಿದ ದಾಖಲಾತಿ ಲಭ್ಯವಿಲ್ಲದ ಪ್ರಕರಣಗಳು | ನಿಯಮ 108(ಸಿ)(2), ನಿಯಮ 108(ಸಿಸಿ)(2) ನಿಯಮ 108(ಸಿಸಿಸಿ)(2) |
| (ii) | ಅರ್ಹತಾ ದಿನಾಂಕದಂದು (ನಮೂನೆ 50 ಮತ್ತು 53 ರಲ್ಲಿ 01 ಏಪ್ರಿಲ್ 1989 (SC/ST), 01 ಏಪ್ರಿಲ್ 1987 (ಇತರೆ)) ಅರ್ಜಿದಾರರು 18 ವರ್ಷ ಪೂರೈಸದ ಪ್ರಕರಣಗಳು. | ನಿಯಮ 108(ಎಫ್)(i) |
| (iii) | ಕಡತ ಲಭ್ಯವಿಲ್ಲದೇ ಇರುವ ಮತ್ತು ಭೂಮಿ ತಂತ್ರಾಂಶದಲ್ಲಿ ಸಹ ಹಕ್ಕುಪತ್ರ/ಅಧಿಕೃತ ಜ್ಞಾಪನ ಲಭ್ಯವಿಲ್ಲದ ಪ್ರಕರಣಗಳು. | ಕಲಂ 94 ಮತ್ತು 108 |
| (iv) | ನಮೂನೆ 57 ರಲ್ಲಿ ಗೋಮಾಳ/ಶೇಂದಿವನ ಜಮೀನಿನಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು. | ಆರ್‌ಡಿ02 ಎಲ್‌ಜಿಪಿ 2021 ದಿನಾಂಕ 24.02.2022 |
| (v) | ನಿರ್ಭಂದಿತ ಅಂತರದಲ್ಲಿ ಮಂಜೂರಾತಿಗೊಂಡ ಪ್ರಕರಣಗಳು. | ಕಲಂ 94 (ಎ) (4) |
| (vi) | **ಅರಣ್ಯ ಇಲಾಖೆಯ ವರದಿಯಂತೆ ಅರಣ್ಯ ಭೂಮಿಯಲ್ಲಿ ನೀಡಿರುವ ಮಂಜೂರಾತಿಗಳು** | ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 |
| | ಆಕಾರಬಂದು ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | |
| | ಆಕಾರಬಂದನಂತೆ ಪೂರ್ಣ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವ ಪ್ರಕರಣಗಳು | |

| | | |
|---|---|---|
| (vii) | ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ ಪ್ರಕರಣಗಳು. | ಕಲಂ 192 (ಎ) (3) |
| (viii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ಸಮಿತಿಯ ನಡವಳಿಯಲ್ಲಿ ತಿದ್ದುಪಡಿ ಮಾಡಿರುವ ಪ್ರಕರಣಗಳು. | ಕಲಂ 192 (ಎ) (3) |
| | ಸಮಿತಿಯಲ್ಲಿ ನಿರ್ಧರಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಮಂಜೂರು ಮಾಡಿದ ಪ್ರಕರಣಗಳು | ಕಲಂ 192 (ಎ) (3) |
| (ix) | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳ ಪೈಕಿ ಕಡತ ಲಭ್ಯವಿಲ್ಲದ ಪ್ರಕರಣಗಳು | ಕಲಂ 192 (ಎ) (3) |

2. ಈ ಕೆಳಗಿನ ಪ್ರಕರಣಗಳನ್ನು ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು: **(Table 2)**

| **ಕ್ರ.ಸಂ** | **ಮರುಪರಿಶೀಲನೆಗೆ ಶಿಫಾರಸು ಮಾಡಲು ಕಾರಣ** | **ಕಲಂ / ನಿಯಮ / ಸುತ್ತೋಲೆ** |
|---|---|---|
| (i) | ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | ನಿಯಮ 97(4) |
| (ii) | ಅರಣ್ಯ ಇಲಾಖೆಯ ಅಭಿಪ್ರಾಯ ಪಡೆಯದೇ ಭಾಗಶಃ ಅರಣ್ಯ ಸಂಬಂಧಿ ವಿಸ್ತೀರ್ಣ ಹೊಂದಿರುವ ಸರ್ವೆನಂಬರುಗಳಲ್ಲಿ ನೀಡಿದ ಮಂಜೂರಾತಿಗಳು. | ಕಂಇ 23 ಎಲ್ ಜಿ ಪಿ 2016 ದಿನಾಂಕ 05 ಡಿಸೆಂಬರ 2016 |
| (iii) | **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | |
| | ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ ಪ್ರಕರಣಗಳು | ಕಲಂ 192 (ಎ) (3) |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳು. | ನಿಯಮ 108(ಡಿ)<br>ಕಲಂ 192 (ಎ) (3) |
| | ಭೂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ಪ್ರಕರಣಗಳು | ಕಲಂ 192 (ಎ) (3) |
| (iv) | ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು. | ಕಲಂ 192 (ಎ) (3) |
| (v) | ಅಮೃತಮಹಲ್ ಕಾವಲು ಸರ್ವೆ ನಂಬರುಗಳಲ್ಲಿ ಪಶುಸಂಗೋಪನೆ ಇಲಾಖೆಯ ಅಭಿಪ್ರಾಯ ಪಡೆಯದೇ ಮಂಜೂರು ಮಾಡಿರುವ ಪ್ರಕರಣಗಳು | ನಿಯಮ 108(ಐ) |
| (vi) | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | ನಿಯಮ 108(ಎಫ್) (v), (vi) |
| (vii) | ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | ನಿಯಮ 108(ಎಫ್)(i) |
| (viii) | **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| | ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | ಕಲಂ 128 |
| | ವಹಿಯಲ್ಲಿ ನಮೂದಿರುವಂತೆ ವಜಾಗೊಂಡಿರುವ ಪ್ರಕರಣಗಳು. | ಕಲಂ 192 (ಎ) (3) |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಸರ್ವೆ ನಂಬರು ಬದಲಾದ ಪ್ರಕರಣಗಳು | ಕಲಂ 192 (ಎ) (3) |
| | ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಗ್ರಾಮದ | ಕಲಂ 192 (ಎ) (3) |

| | | |
|---|---|---|
| | ಹೆಸರು ಬದಲಾದ ಪ್ರಕರಣಗಳು | |
| (ix) | ಅರ್ಜಿ ವಹಿ ಶಿಥಿಲವಾಗಿರುವ ಪ್ರಕರಣಗಳು | ನಿಯಮ 108(ಸಿ)(2), ನಿಯಮ 108(ಸಿಸಿ)(2) ನಿಯಮ 108(ಸಿಸಿಸಿ)(2) |
| (x) | ಅನಧಿಕೃತ ವಿಭಾಗಪತ್ರ ಲಗತ್ತಿಸಿ ಅರ್ಹತೆಗಿಂತ ಹೆಚ್ಚುವರಿ ಭೂಮಿ ಮಂಜೂರು ಮಾಡಿದ ಪ್ರಕರಣಗಳು | ಕಲಂ 94(ಎ) (4) ಕಲಂ 192 (ಎ) (3) |
| (xi) | ಒಂದೇ ಮಂಜೂರಾತಿಗೆ ಎರಡುಸಲ ಮ್ಯುಟೇಶನ್ ಮಾಡಿರುವ ಪ್ರಕರಣಗಳು. | ಕಲಂ 128 |
| (xii) | ಸರ್ವೆ ದಾಖಲೆಯಂತೆ ಬೀಳು ಅಥವಾ ಕದರ್ ದಾಖಲಾಗಿರುವ ಭೂಮಿಯಲ್ಲಿ ನೀಡಿರುವ ಮಂಜೂರಾತಿ | ನಿಯಮ 108(ಐ) |

3 ಈ ಮೇಲಿನ ಅಂಶಗಳನ್ನು ಹೊರತುಪಡಿಸಿ ಈ ಕೆಳಗಿನ ಕಾರ್ಯವಿಧಾನ ವೈಫಲ್ಯವನ್ನು ಸಹ ಗುರುತಿಸಲಾಗಿದೆ. **(Table 3)**

| ಕ್ರ.ಸಂ | ಗುರುತಿಸಿರುವ ಕಾರ್ಯವಿಧಾನ ವೈಫಲ್ಯ | ಕಲಂ / ನಿಯಮ / ಸುತ್ತೋಲೆ |
|---|---|---|
| (i) | ಮಂಜೂರಾತಿ ವರದಿಗಳಿರುವ ಅಪೂರ್ಣವಾಗಿರುವ ಪ್ರಕರಣಗಳು. | ನಿಯಮ 108(ಸಿ) (2), ನಿಯಮ 108(ಸಿಸಿಸಿ) (3) |
| (ii) | ಟಿಪ್ಪಣಿ ಲಭ್ಯವಿಲ್ಲದ / ಅಪೂರ್ಣ ಟಿಪ್ಪಣಿ ಇರುವ ಪ್ರಕಣಗಳು. | ನಿಯಮ 108(ಸಿ) (2), ನಿಯಮ 108(ಸಿಸಿಸಿ) (3) |
| (iii) | ಸರ್ವೆ ನಕಾಶೆ ಲಭ್ಯವಿಲ್ಲದ ಪ್ರಕರಣಗಳು. | ಕಲಂ 128 |
| (iv) | ಹಣಸಂದಾಯ ರಸೀದಿ ಲಭ್ಯವಿಲ್ಲದ ಪ್ರಕರಣಗಳು. | ನಿಯಮ 108(ಜಿ), ನಿಯಮ 108(ಎಸ್) |
| (v) | ಸಾರ್ವಜನಿಕ ಮಾಹಿತಿ (ಆಕ್ಷೇಪಣೆ ಕೋರುವ) ನಮೂನೆ ಲಭ್ಯವಿಲ್ಲದ ಪ್ರಕರಣಗಳು. | ನಿಯಮ 108(ಡಿ)(1) |
| (vi) | ಆಕಾರಬಂದ ವಿಸ್ತೀರ್ಣಕ್ಕೂ, ಹೆಚ್ಚಿನ ವಿಸ್ತೀರರ್ಣ ಪಹಣಿಯಲ್ಲಿರುವ ಪ್ರಕಣಗಳು. | ಪಿಎಮ್ ಯು/ಮೋಜಿನಿ 10/2008-09 ದಿನಾಂಕ 21-08-2008 |
| (vii) | ಪೈಕಿ ಪಹಣಿಗಲ್ಲಿ ಮಂಜೂರಾತಿ ನೀಡಿರುವ ಮಂಜೂರಾತಿಗಳು. | ಪಿಎಮ್ ಯು/ಮೋಜಿನಿ 10/2008-09 ದಿನಾಂಕ 21-08-2008 |
| (viii) | **ಕಡತ ಲಭ್ಯವಿರುವ ಪ್ರಕರಣಗಳ ಪೈಕಿ ಭೂಮಿ ತಂತ್ರಾಂಶದಲ್ಲಿ ಅಳವಡಿಸುವಾಗ ಹಕ್ಕುಪತ್ರವನ್ನು ಕ್ರಮಬದ್ಧವಾಗಿ ಲಗತ್ತಿಸದ ಪ್ರಕರಣಗಳು.** | |
| | ಹಕ್ಕುಪತ್ರದ ಅಪೂರ್ಣ ಪ್ರತಿ ಲಗತ್ತಿಸಿರುವ ಪ್ರಕರಣಗಳು | ಕಲಂ 128 |
| | ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರು ದಾಖಲೆಯು ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ | ಕಲಂ 128 |
| | ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಬದಲು ತಿಳುವಳಿಕೆ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ | ಕಲಂ 128 |
| | ಭೂಮಿ ತಂತ್ರಾಂಶಕ್ಕೆ ಲಗತ್ತಿಸಿರುವ ಪ್ರತಿ ತಂತ್ರಾಂಶದಲ್ಲಿ ಲಭ್ಯವಿಲ್ಲ | ಕಲಂ 128 |
| (ix) | ವಿಷಯ ನಿರ್ವಾಹಕರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | ನಿಯಮ 108(ಸಿ) (2), ನಿಯಮ 108(ಸಿಸಿಸಿ) (3) |
| (x) | ಶಿರಸ್ತೇದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | ನಿಯಮ 108(ಸಿ) (2), |

| | | |
|---|---|---|
| | | ನಿಯಮ 108(ಸಿಸಿಸಿ) (3) |
| (xi) | ತಹಶೀಲ್ದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | ನಿಯಮ 108(ಸಿ) (2), ನಿಯಮ 108(ಸಿಸಿಸಿ) (3) |
| (xii) | ಪಹಣಿಯಲ್ಲಿ ಪರಭಾರೆ ನಿಷೇಧ ನಮೂದಾಗದ ಅಥವಾ ತಪ್ಪಾಗಿ ನಮೂದಾದ ಪ್ರಕರಣಗಳು. | ನಿಯಮ 108 (ಜೆ)(i) |

**ಮೇಲಿನ ಅನರ್ಹತೆಗಳನ್ನು ವರ್ಗೀಕರಿಸುವಾಗ ಅರ್ಹ ಫಲಾನುಭವಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕೇವಲ ಸಂಪೂರ್ಣ ಅನರ್ಹ ಪ್ರಕರಣಗಳನ್ನು ಮಾತ್ರ ವಿಭಜಿಸಿ ತಿರಸ್ಕೃತಿಸಲು ಅನರ್ಹ ಎಂದು ಗುರುತಿಸಲು ಕ್ರಮವಹಿಸಲಾಯಿತು. ಪ್ರತಿ ಅನರ್ಹತೆಯನ್ನು ವಿಭಜಿಸುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಲಾಯಿತು.**

<u>**ಅರಣ್ಯ ಭೂಮಿಯಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು**</u> ಅರಣ್ಯ ಪ್ರಕರಣಗಳ ಪೈಕಿ ಯಾವುದೇ ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣ ಅರಣ್ಯ ಇಲಾಖೆಯ ವರದಿಯಂತೆ ಅರಣ್ಯ ಇಲಾಖೆಗೆ ಸೇರಿರುವ ಪ್ರಕರಣದಲ್ಲಿ ಮಾತ್ರ ಪ್ರಕರಣವನ್ನು ಅನರ್ಹ ಎಂದು ಪರಿಗಣಿಸಲಾಯಿತು. ಭಾಗಶಃ ಅರಣ್ಯ ಇರುವ ಸರ್ವೆ ನಂಬರುಗಳನ್ನು ಮಾನ್ಯ ಉಪವಿಭಾಗಾದಿಕಾರಿಗಳ ಮೇಲುಸ್ತುವಾರಿಯಲ್ಲಿ ಪರಿಶೀಲಿಸಿ, ಜಂಟಿ ತನಿಖೆ ನಡೆಸಿ ಅನರ್ಹ ಪ್ರಕರಣಗಳನ್ನು ಮಾತ್ರ ತಿರಸ್ಕರಿಸಲು ಶಿಫಾರಸು ಮಾಡಲಾಯಿತು

<u>**ಅರ್ಜಿ ಸಲ್ಲಿಸಿದ ದಾಖಲೆ ಇಲ್ಲದ ಪ್ರಕರಣಗಳು**</u>: ನಮೂನ 50/53 ರಲ್ಲಿ ಮೂಲ ಅರ್ಜಿಗಳು ಲಭ್ಯವಿಲ್ಲದೇ ಇದ್ದಾಗ್ಯೂ ಅರ್ಜಿ ವಹಿಯಲ್ಲಿ ನಮೂದಿದ್ದಲ್ಲಿ ಸರಿಯಾಗಿದೆ ಎಂದು ಪರಿಗಣಿಸಲಾಯಿತು ಅರ್ಜಿ ವಹಿಯಲ್ಲಿ ನಮೂದಿಲ್ಲದ ಮತ್ತು ತಿದ್ದುಪಡಿ ಮಾಡಿದ ಪ್ರಕರಣಗಳನ್ನು ಮಾತ್ರ ಅನರ್ಹ ಎಂದು ಪರಿಗಣಿಸಲಾಯಿತು. ಅರ್ಜಿ ವಹಿ ಲಭ್ಯವಿಲ್ಲದೇ ಇರುವ ಅಥವಾ ಶಿಥಿಲಗೊಂಡಿರುವ ಪ್ರಕರಣದಲ್ಲಿ ಅರ್ಜಿ ನೀಡಿದ ದಾಖಲೆಯನ್ನು ಒದಗಿಸಲು ಅರ್ಜಿದಾರರನಿಗೆ ಅವಕಾಶವನ್ನು ನೀಡುವ ಉದ್ದೇಶದಿಂದ ಪ್ರಕರಣವನ್ನು ಮಾನ್ಯ ಉಪವಿಭಾಗಾಧಿಕಾರಿಗಳ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು.

<u>**ಮಂಜೂರಾತಿ ಕಡತ ಲಭ್ಯವಿಲ್ಲದ ಪ್ರಕರಣಗಳು**</u> ಕಡತ ಲಭ್ಯವಿಲ್ಲದೇ ಇದ್ದಾಗ್ಯೂ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ(ಅಪೂರ್ಣವಾಗಿದ್ದಾಗ್ಯೂ) ಅಥವಾ ಅಧಿಕೃತ ಜ್ಞಾಪನ ಲಭ್ಯವಿರುವ ಪ್ರಕರಣದಲ್ಲಿ ಕಡತವನ್ನು ಹುಡುಕಲು ಇನ್ನೊಮ್ಮೆ ಅವಕಾಶವನ್ನು ನೀಡುವ / ಫಲಾನುಭವಿಗೆ ದಾಖಲೆ ಹಾಜರುಪಡಿಸಲು ಅವಕಾಶ ನೀಡುವ ಉದ್ದೇಶದಿಂದ ಪ್ರಕಣವನ್ನು ಮಾನ್ಯ ಉಪವಿಭಾಗಾಧಿಕಾರಿಗಳ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು. ಭೂಮಿ ತಂತ್ರಾಂಶದಲ್ಲಿ ಸಹ ಯಾವುದೇ ದಾಖಲೆ ಲಭ್ಯವಿಲ್ಲದ ಪ್ರಕರಣದಲ್ಲಿ ಮಾತ್ರ ಅನರ್ಹ ಎಂದು ಗುರುತಿಸಲಾಯಿತು.

<u>**ಗೋಮಾಳ ಭೂಮಿಯಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳು**</u> ನಮೂನೆ 57 ರಲ್ಲಿ ಮಾತ್ರ ಇವುಗಳನ್ನು ಅನರ್ಹ ಎಂದು ಗುರುತಿಸಲಾಯಿತು. ನಮೂನೆ 53/53ರಲ್ಲಿ ಕಲಂ 97(4) ರಂತೆ ಪರಿಗಣಿಸಲು ಅವಕಾಶ ಇರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು

**ಭೂಸಕ್ರಮೀಕರಣ ಸಮಿತಿ ವರದಿ ಲಭ್ಯವಿಲ್ಲದ ಪ್ರಕರಣಗಳು** ಭೂ ಸಕ್ರಮೀಕರಣ ಸಮಿತಿ ನಡವಳಿಯಲ್ಲಿ ತಿದ್ದುಪಡಿ ಮಾಡಿ ಹೆಸರನ್ನು ಸೇರಿಸಿರುವ, ಸಮಿತಿಯ ತೀರ್ಮಾನಕ್ಕಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಹಕ್ಕುಪತ್ರ ನೀಡಿರುವ ಮತ್ತು ಸಮೀತಿಯಲ್ಲಿ ವಜಾ ಆಗಿ ಸಕ್ರಮ ಪ್ರಾಧಿಕಾರದಿಂದ ಮರುಪರಿಶೀಲನೆಗೆ ಆದೇಶವಾಗದ ಪ್ರಕರರಣಗಳನ್ನು ಮಾತ್ರ ಅನರ್ಹ ಎಂದು ಪರಿಗಣಿಸಲಾಯಿತು. ಭೂ ಸಕ್ರಮೀಕರಣ ಸಮೀತಿಗೆ ಮಂಡಿಸದೇ / ಮಂಡಿಸದ ದಾಖಲೆ ಇಲ್ಲದೇ ಖಾತೆ ನಮೂದಿಸಿರುವ ಪ್ರಕರಣದಲ್ಲಿ ಕಡತವಿಲ್ಲದ ಪ್ರಕರಣವನ್ನು ಮಾತ್ರ ಅನರ್ಹ ಎಂದು ಗುರುತಿಸಲಾಯಿತು ಒಮ್ಮೆ ಕಡತದಲ್ಲಿ ಕಮೀಟಿಯ ಬಗ್ಗೆ ಮಾಹಿತಿ ಲಭ್ಯವಿದ್ದಲ್ಲಿ ಅವುಗಳನ್ನು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು. ಸಮೀತಿಯ ನಡವಳಿಯ ವಹಿಯ ನಕಲು ಲಭ್ಯವಿದ್ದಲ್ಲಿ ಸಹ ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು.

**ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆ ಮಾಡದೇ ಇರುವ ಪ್ರಕರಣಗಳು** ಇಂತಹ ಪ್ರಕರಣದಲ್ಲಿ ಮರುಪರಿಶೀಲನ ನಡೆಸಿ ದಾಖಲಾತಿ ಪರಿಶೀಲಿಸಿ ಅರ್ಹತಾ ದಿನಾಂಕದಂದು ಉಳುಮೆ ಮಾಡದ ಪ್ರಕರಣಗಳನ್ನು ಮಾತ್ರ ರದ್ದುಪಡಿಸಲು ಪ್ರಕರಣವನ್ನು ಮರುಪರಿಶೀಲಿಸಲು ಶಿಫಾರಸು ಮಾಡಲಾಯಿತು

**ಅರ್ಹತಾ ದಿನಾಂಕದಂದು 18 ವರ್ಷ ಪೂರ್ಣಗೊಳ್ಳದ ಪ್ರಕರಣಗಳು** : ಅರ್ಜಿದಾರರ ವಯಸ್ಸಿನ ದಾಖಲೆ ಲಭ್ಯವಿದ್ದು ದಾಖಲಾತಿಯಂತೆ ಅರ್ಹತಾ ದಿನಾಂಕದಂದು 18 ವರ್ಷ ಪೂರ್ಣಗೊಳ್ಳದ ಪ್ರಕರಣದಲ್ಲಿ ಮಾತ್ರ ಪ್ರಕರಣವನ್ನು ಅನರ್ಹ ಎಂದು ಗುರುತಿಸಲಾಯಿತು. ಅರ್ಜಿದಾರರು ಮೃತರಾಗಿ ವಾರಸುದಾರರಿಗೆ ಮಂಜೂರಾದ ಪ್ರಕರಣದಲ್ಲಿ ಸಹ ಅರ್ಜಿದಾರರ ವಯಸ್ಸನ್ನೇ ಪರಿಗಣಿಸಲಾಗಿದೆ. ದಾಖಲೆ ಲಭ್ಯವಿಲ್ಲದ ಪ್ರಕರಣದಲ್ಲಿ ದಾಖಲಾತಿ ಪಡೆದು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಮರುಪರಿಶೀಲನೆಗೆ ಶಿಫಾರಸು ಮಾಡಲಾಯಿತು

**ಅರ್ಜಿ ವಹಿಯ ದಾಖಲಾತಿಗೂ ಮಂಜೂರಾತಿ/ಪಹಣಿ ನಮೂದಿಗೂ ವ್ಯತ್ಯಯ ಇರುವ ಪ್ರಕರಣಗಳು**: ಇಂತಹ ಪ್ರಕರರಣಗಳಲ್ಲಿ ಹಲವು ವರ್ಷಗಳ ಹಿಂದೆ (2010) ಹಕ್ಕುಪತ್ರ ನೀಡಿರುವ ಪ್ರಕರಣದಲ್ಲಿ 2018 ರ ನಂತರ ಖಾತೆ ದಾಖಲಿಸಿರುವುದನ್ನು ಗಮನಿಸಿ, ಇಂತಹ ಪ್ರಕರಣದಲ್ಲಿ 2 ಸಲ ಪಹಣಿ ದಾಕಲಾಗದೇ ಇರುವ ಬಗ್ಗೆ ಖಚಿತಪಡಿಸಿಕೊಳ್ಳಲು ಶಿಫಾರಸು ಮಾಡಲಾಯಿತು. ಅರ್ಜಿ ವಹಿ ಮತ್ತು ಹಕ್ಕುಪತ್ರದಲ್ಲಿ ಸರ್ವೆ ನಂಬರು ಅಥವಾ ಗ್ರಾಮ ಬದಲಾವಣೆ ಆದಲ್ಲಿ ಸಹ ನಿಯಮಾನುಸಾರ ಮರುಪರಿಶೀಲಿಸಲು ಮಾನ್ಯ ಉಪವಿಭಾಗಾಧಿಕಾರಿಗಳಿಗೆ ಶಿಫಾರಸು ಮಾಡಲಾಯಿತು.

ಮೇಲಿನ Table 3 ರಲ್ಲಿ ಸೂಚಿಸಿರುವ ಕಾರ್ಯವಿಧಾನ ವೈಫಲ್ಯ ಪ್ರಕರಣದಲ್ಲಿ ತಹಶೀಲ್ದಾರರ / ಉಪವಿಭಾಗಾಧಿಕಾರಿಗಳ ಹಂತದಲ್ಲಿ ಸರಿಪಡಿಸಲು ಶಿಫಾರಸು ಮಾಡಲಾಯಿತು. ಇಂತಹ ಪ್ರಕರಣದಲ್ಲಿ ಇತರ ಯಾವುದೇ ಅನರ್ಹತೆ ಇಲ್ಲದೇ ಇದ್ದಲ್ಲಿ ತನಿಖಾ ತಂಡದ ಅಭಿಪ್ರಾಯದಂತೆ ರದ್ದತಿ ಅಥವಾ ಮರುಪರಿಶೀಲನೆ ಅಗತ್ಯ ಇರುವುದಿಲ್ಲ.

**ಕಾರ್ಯವಿಧಾನ** : ಮೊಟ್ಟಮೊದಲು ಈ ಅವಧಿಯಲ್ಲಿ ಮಂಜೂರು ಆಯ್ಕೆಯನ್ನು ಬಳಸಿ ನಮೂದಿಸಲಾದ ಮ್ಯುಟೇಶನ್‌ಗಳ ಪಟ್ಟಿಯನ್ನು ಭೂಮಿ ಉಸ್ತುವಾರಿ ಕೋಶದಿಂದ ಪಡೆಯಲಾಯಿತು ತಾಲ್ಲೂಕಿಗೆ ಸಂಬಂಧಿಸಿದಂತೆ ಪರಿಶೀಲನಾ ಅವಧಿಯಲ್ಲಿ 2103 ನಮೂದುಗಳು ಇರುವುದನ್ನು ಗಮನಿಸಲಾಯಿತು. ಈ ಪೈಕಿ 16 ಜಂಟಿಖಾತೆ ಇರುವುದರಿಂದ, 90 ಸರಕಾರಿ ನಮೂದುಗಳು ಇರುವುದರಿಂದ ಹಾಗೂ 36 ಮರುಕಳಿಸಿದ ದಾಖಲೆಗಳು (Duplicate Entry) ಕಂಡುಬಂದಿರುವುದರಿಂದ ಅವುಗಳನ್ನು ಹೊರತುಪಡಿಸಿ **1961** ಕಡತಗಳ ಪರಿಶೀಲನೆ ಅಗತ್ಯವಿರುವುದನ್ನು ಗಮನಿಸಲಾಯಿತು ವಿವಿಧ ಇಲಾಖೆಯಿಂದ ಪರಿಶೀಲನೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಈ ಕೆಳಗಿನಂತೆ ಕೋರಿಕೆಯನ್ನು ನೀಡಲಾಯಿತು. **(Table 4)**

| **ಅಗತ್ಯ ಮಾಹಿತಿ/ದಾಖಲಾತಿ ಮತ್ತು ಸಂಪನ್ಮೂಲ** | **ಒದಗಿಸಬೇಕಾದ ಇಲಾಖೆ** |
|---|---|
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳಿಗೆ ಸಂಬಂಧಿಸಿದಂತೆ (ಪಟ್ಟಿಯನ್ನು ಮಿಂಚಂಚೆಗೆ ಲಗತ್ತಿಸಿದೆ) ಆಕಾರಬಂದು ವಿಸ್ತೀರ್ಣ, ಜಮೀನಿನ ತರಹೆ (ಕರ್ದಾ), ಪೈಕಿ ಪಹಣಿಯೆ?, ಕರ್ನಾಟಕ ಭೂಕಂದಾಯ ಅಧಿನಿಯಮ ಸೆಕ್ಷನ್ 94(A)(4) ನಂತೆ ಪ್ರತಿಬಂಧಿತ ಅಂತರದೊಳಗೆ ಇರುವುದೆ? ಎಂಬ ಮಾಹಿತಿ | ಮೋಜಿಣಿ ಇಲಾಖೆ |
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳು ಯಾವುದೇ ತರಹದ ಅರಣ್ಯದ ವ್ಯಾಪ್ತಿಗೆ ಬರುವುದೇ ಎಂಬ ಮಾಹಿತಿ, ವಿಸ್ತೀರ್ಣದೊಂದಿಗೆ | ಅರಣ್ಯ ಇಲಾಖೆ |
| ಅಮೃತ ಮಹಲ್ ಕಾವಲ್ ಒಳಗೊಂಡಂತೆ ಇಲಾಖೆಗೆ ಮೀಸಲಿಟ್ಟಿರುವ ಭೂಮಿಯ ಮಾಹಿತಿ | ಪಶುಸಂಗೋಪನೆ ಇಲಾಖೆ |
| 1. ಮಿಂಚಂಚೆಯಲ್ಲಿ ರವಾನಿಸಿರುವ ಪಟ್ಟಿಯಂತೆ ಕಡತಗಳೊಂದಿಗೆ ಸಂಬಂಧಿಸಿದ ಸಿಬ್ಬಂದಿಯನ್ನು ನಿಯೋಜಿಸುವುದು<br>2. ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪೈಕಿ ಪಹಣಿಗಳ ಮಾಹಿತಿಯನ್ನು ಪಡೆದು, ಒಗ್ಗೂಡಿಸಿ ಪಹಣಿ ಕಲಂ 3 ರ ಮಾಹಿತಿಯನ್ನು ಒದಗಿಸುವುದು.<br>3. ಸಂಬಂಧಿಸಿದ ಮ್ಯುಟೇಶನ್ನಳಿಗೆ ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರುವ ದಾಖಲೆಯ ಪ್ರತಿಯನ್ನು ಮುದ್ರಿಸಿ ಪರಿಶೀಲನೆ ಕಡತಸಂಖ್ಯೆ ನಮೂದಿಸಿ ನೀಡುವುದು.<br>4. ನಮೂನೆ 50 ಮತ್ತು 53 ವಹಿ.<br>5. ತನಿಖೆಯ ಅವಧಿಯಲ್ಲಿ ನಡೆದ ಬೂ ಸಕ್ರಮೀಕರಣ ಸಮಿತಿಯ ನಡವಳಿಗಳು ಮತ್ತು ಸಂಬಂಧಿಸಿದ ಮಾಹಿತಿ.<br>6. ಪ್ರತಿ ಕಡತದಲ್ಲಿ ಕಾರ್ಯನಿರ್ವಹಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಮಾಹಿತಿ<br>7. 2008 ರಿಂದ 2023 ರ ತನಕ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರರ ಮತ್ತು ನಿಯೋಜಿತ ಸಕ್ರಮೀಕರಣ ಸಮಿತಿಯ ಮಾಹಿತಿ | ತಹಶೀಲ್ದಾರರು |

ಪರಿಶೀಲನೆಗೆ ಈ ಕೆಳಗಿನ ಅಗತ್ಯ ಸಾಮಗ್ರಿ ಹಾಗೂ ಮಾನವ ಸಂಪನ್ಮೂಲವನ್ನು ಒದಗಿಸಲು ಜಿಲ್ಲಾಡಳಿತಕ್ಕೆ ಮನವಿಯನ್ನು ನೀಡಲಾಯಿತು

| |
|---|
| 13 ಅಧಿಕಾರಿಗಳು ಕುಳಿತು ಪರಿಶೀಲನೆ ಕೆಲಸ ಕೈಗೊಳ್ಳಲು ಸೂಕ್ತ ಸ್ಥಳಾವಕಾಶ. 6 ಗಣಕಯಂತ್ರ (ಇಂಟರನೆಟ್ ಮತ್ತು ಅನಿಯಮಿತ ವಿದ್ಯುತ್ ಸಂಪರ್ಕದೊಂದಿಗೆ) 6 ಜನ ನುರಿತ ಮೀಸಲಾದ |

DEOs, A4 Stickers, Pen, Pencil, Scale, papers, 2 high speed printers, ಕುಡಿಯುವ ನೀರು ಮತ್ತು ಇಬ್ಬರು ಡಿ ದರ್ಜೆ ನೌಕರರು.

ತನಿಖೆಗೆ ಒಳಪಡುವ ಎಲ್ಲ ಪ್ರಕರಣಗಳಿಗೆ ಗುರುತಿಸಲು ಪ್ರತ್ಯೇಕ ಕಡತಸಂಖ್ಯೆಯನ್ನು ನೀಡಿ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನ ವಿಭಾಗದಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ ಕ್ರೋಢೀಕರಿಸಲು ತೀರ್ಮಾನಿಸಲಾಯಿತು:

- ಕಡತದಲ್ಲಿ ಪರಿಶಿಲಿಸಬೇಕಾದ ಅಂಶಗಳು.
- ಭೂಮಿಯ ತರಹೆಗೆ ಮತ್ತು ನಿಗದಿತ ಅಂತರಕ್ಕೆ ಸಂಬಂಧಿಸಿದಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪಡೆದ ಮಾಹಿತಿ.
- ಭೂದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ತಹಶೀಲ್ದಾರರಿಂದ ಪಡೆದ ಮಾಹಿತಿಯನ್ನು ತಾಳೆಮಾಡಿ ಪಹಣಿ ಮತ್ತು ಆಕಾರಬಂದಿಗೆ ವ್ಯತ್ಯಾಸವಿರುವ ಸರ್ವೆನಂಬರುಗಳ ಮಾಹಿತಿ
- ಅರಣ್ಯ ಇಲಾಖೆಗೆ ಸಂಬಂಧಿಸಿದ ಭೂಮಿಯ ಮಾಹಿತಿ
- ಅರ್ಜಿ ವಹಿ ಪರಿಶಿನೆಗೆ ಸಂಬಂಧಿಸಿದ ಮಾಹಿತಿ.
- ಸಮಿತಿ ನಡವಳಿ ಪರಿಶೀಲನೆಗೆ ಸಂಬಂಧಿಸಿದ ಮಾಹಿತಿ.

ಕಡತದಲ್ಲಿ ಲಭ್ಯವಿರುವ ಮಾಹಿತಿಯನ್ನು ಕಲೆಹಾಕಲು ಈ ಕೆಳಗಿನ ಚೆಕ್‌ಲಿಷ್ಟ ಬಳಸಿ ಮಾಹಿತಿಯನ್ನು ಕಲೆಹಾಕಿ ನಂತರ ಗಣಕೀಕೃತಗೊಳಿಸಲಾಯಿತು. **(Table 5)**

**<u>ಮುಡಿಗೆರೆ ತಾಲ್ಲೂಕಿನ ಸಕ್ರಮ ಅರ್ಜಿಗಳ ಪರಿಶೀಲನಾ ಚೆಕ್ ಲಿಸ್ಟ್ : ಕಡತ ಪರಿಶೀಲನೆ</u>**

| | | |
|---|---|---|
| 1 | ಪರಿಶೀಲನೆ ಕಡತ ಸಂಖ್ಯೆ | |
| 2 | ಪರಿಶೀಲಿಸಿದವರು | |
| 3 | ಈಗಾಗಲೇ ಸಮಿತಿಯಲ್ಲಿ ತಿರಸ್ಕೃತಗೊಂಡು ಸಕ್ಷಮಪ್ರಾಧಿಕಾರದಿಂದ ಮರಳಿಸಿರುವ ದಿನಾಂಕ | |
| 4 | ಅರ್ಹತಾ ದಿನಾಂಕಕ್ಕೆ ಮುಂಚೆ ವಯಸ್ಕರಾಗಿರುವರೇ? (18 ವರ್ಷ) (ಹೌದು / ಇಲ್ಲ / ದಾಖಲೆ ಲಭ್ಯವಿಲ್ಲ) | |
| 5 | ಕುಟುಂಬದ ವರ್ಗದವರು ಹೊಂದಿರುವ ಒಟ್ಟು ಕ್ಷೇತ್ರ | |
| 6 | ಅರ್ಜಿದಾರರ ಜಾತಿ (ಪ.ಜಾ/ಪ.ಪಂ/ಇತರೇ/ನಮೂದಿಸಿಲ್ಲ) | |
| 7 | ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕಕ್ಕಿಂತ ಮುಂಚೆ ಸಾಗುವಳಿ ಮಾಡುತ್ತಿದ್ದಾರೆಯೇ? (ಹೌದು / ಇಲ್ಲ / ನಮೂದಿಸಿಲ್ಲ) | |
| 9 | ಗ್ರಾಮ ಆಡಳಿತಾಧಿಕಾರಿಯ ವರದಿ ಸಕಾರಾತ್ಮಕವಾಗಿರುವುದೆ? (ಹೌದು/ಇಲ್ಲ/ ವರದಿ ಇಲ್ಲ) | |
| 10 | ರಾಜಸ್ವ ನಿರೀಕ್ಷಕರ ಅಭಿಪ್ರಾಯ: (ಹೌದು/ಇಲ್ಲ/ ವರದಿ ಇಲ್ಲ) | |
| 11 | ನಕಾಶೆ ತಯಾರಿಸಿದ ಭೂಮಾಪಕರ ಹೆಸರು | |
| 12 | ಹಾಗಿದ್ದಲ್ಲಿ ಸರ್ವೆ ನಕಾಶೆಯಂತೆ ಅನುಭವದಲ್ಲಿರುವ ಕ್ಷೇತ್ರ | |
| 13 | ವಿಷಯ ನಿರ್ವಾಹಕರು ಸಕಾರಾತ್ಮಕ ಟಿಪ್ಪಣಿ ಮಂಡಿಸಿರುವರೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 14 | ಶಿರಸ್ತೇದಾರರು ಸಕಾರಾತ್ಮಕ ಟಿಪ್ಪಣಿ ಮಂಡಿಸಿರುವರೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 15 | ತಹಸೀಲ್ದಾರರು ಕಡತವನ್ನು ಅನುಮೋದಿಸಿ ಕಡತವನ್ನು ಸಮಿತಿಯ ಮುಂದೆ ಹಾಜರುಪಡಿಸುವುದಕ್ಕೆ ಒಪ್ಪಿದ್ದಾರೆಯೇ? (ಹೌದು/ಇಲ್ಲ/ಟಿಪ್ಪಣಿ ಇಲ್ಲ) | |
| 16 | ಸಮಿತಿಯ ದಿನಾಂಕ | |
| 17 | ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಿದ ತಿಳುವಳಿಕೆ ಪತ್ರ / ನೋಟೀಸಿನ ಪತ್ರ | |

| | | |
|---|---|---|
| | ಇದೆಯೇ? (ಇದೆ/ಇಲ್ಲ) | |
| 18 | ಹಣ ಸಂದಾಯ ಮಾಡಿದ ಚಲನ್ ಇದೆಯೇ? (ಇದೆ / ಇಲ್ಲ) | |
| 19 | ಸಾಗುವಳಿ ಚೀಟಿ ಕ್ರಮಬದ್ಧವಾಗಿದೆಯೇ? (ಹೌದು/ಇಲ್ಲ) | |
| 20 | ಸಾಗುವಳಿಚೀಟಿಯಂತೆ ಮಂಜೂರಾತಿ ವಿಸ್ತೀರ್ಣ | |
| | ಸಾಗುವಳಿ ಚೀಟಿ ದಿನಾಂಕ | |
| | ತನಿಖಾ ತಂಡದ ಸದಸ್ಯರ ಅಭಿಪ್ರಾಯ. ಯೋಗ್ಯವಿಲ್ಲಾ ಎಂದಾದಲ್ಲಿ ಕಾರಣ ನೀಡುವುದು. (Tick appropriate)<br>1. ಕುಟುಂಬವು ಹೆಚ್ಚುವರಿ ಜಮೀನು ಹೊಂದಿರುತ್ತದೆ<br>2. ಅರ್ಜಿದಾರರು ಅರ್ಹತಾ ದಿನಾಂಕದಂದು 18 ವರ್ಷ ಪೂರೈಸಿರುವುದಿಲ್ಲ<br>3. ಜುಬಾನೆ ಹಿಸ್ಸ/ಅನಧಿಕೃತ ವಿಭಾಗ<br>4. ಸರ್ವೆ ನಂಬರು ಬದಲಾಯಿಸಲಾಗಿದೆ<br>5. ಕಛೇರಿ ಟಿಪ್ಪಣಿ ಲಭ್ಯವಿಲ್ಲ / ಅಪೂರ್ಣ<br>6. ಅರ್ಹತಾ ದಿನಾಂಕಕ್ಕಿಂತ ಮುಂಚೆ ಸಾಗುವಳಿ ಇಲ್ಲ<br>7. ರಾಜಸ್ವ ನಿರೀಕ್ಷಕರ ಸಕಾರಾತ್ಮಕ ವರದಿ ಇಲ್ಲ<br>8 ಸರ್ವೆ ನಕಾಶೆ ಇಲ್ಲ<br>9 ಹಣ ಸಂದಾಯ ರಸೀದಿ ಇಲ್ಲ<br>10. ಸಾಗುವಳಿ ಚೀಟಿ ಕ್ರಮಬದ್ಧವಾಗಿಲ್ಲ<br>11. ಇತರೇ(ನಮೂದಿಸಿ) | |

ದಿನಾಂಕ: ಪರಿಶೀಲಿದವರ ಸಹಿ

**ಇಷ್ಟು ಅಧಿಕಪ್ರಮಾಣದ ಪರಿಶೀಲನೆಯನ್ನು ಕೈಗೊಳ್ಳುವಾಗ ವರದಿಯನ್ನು ಕ್ರೋಢೀಕರಿಸಲು ಅಗತ್ಯವಾಗುವಂತೆ ಪೂರ್ವನಿಯೋಜಿತ ಅಂಕಣಗಳನ್ನು ಹೊಂದಿದ (drop down value) google spreadsheet ತಯಾರಿಸಲಾಯಿತು.**

ಈ ಕೆಳಗಿನ ಅಂಕಣಗಳಲ್ಲಿ ಮಾಹಿತಿ ಕಲೆಹಾಕಲಾಯಿತು. ಮಾಹಿತಿಯ ಮೂಲ ಮತ್ತು ಕಲೆಹಾಕಿದ ಉದ್ದೇಶ ಈ ಕೆಳಗಿನಂತೆ ಇರುತ್ತದೆ. **(Table 6)**

| **ಕಲಂ ಸಂಖ್ಯೆ** | **ಮಾಹಿತಿ** | **ಪೂರ್ವನಿಯೋಜಿತ ಮೌಲ್ಯ** | **ಮಾಹಿತಿಯ ಮೂಲ** | **ಉದ್ದೇಶ** |
|---|---|---|---|---|
| A | ಕಡತ ಸ್ವೀಕರಿಸಿದೆ | ಹೌದು/ಇಲ್ಲ/ ಅಗತ್ಯವಿಲ್ಲ | ಹೊಸ ನಮೂದು | ಪರಿಶೀಲನೆ ಸಮಿತಿಯು ಸ್ವೀಕರಿಸಿದ ಕಡತದ ಮಾಹಿತಿ ಸಂಗ್ರಹಣೆ |
| B | ಮಾಹಿತಿ ದಾಖಲಿಸಿದ DEO | ನಿಯೋಜಿತ DEO ಹೆಸರುಗಳು | ಹೊಸ ನಮೂದು | ಚೆಕ್ ಲಿಸ್ಟಿನ ಮಾಹಿತಿಯನ್ನು ಗಣಕೀಕೃತ ಗೊಳಿಸಿದ DEO ಮಾಹಿತಿ ಸಂಗ್ರಹಿಸುವುದು |
| C | ಪರಿಶೀಲಿಸಿದ ಅಧಿಕಾರಿ | ನಿಯೋಜಿತ ಅಧಿಕಾರಿಗಳ ಹೆಸರು | ಹೊಸ ನಮೂದು | ಕಡತ ಪರಿಶೀಲಿಸಿದ ಅಧಿಕಾರಿಯ ಮಾಹಿತಿ ಸಂಗ್ರಹಿಸುವುದು |
| D | ಪರಿಶೀಲನೆ ಕಡತ ಸಂಖ್ಯೆ | ಭೂಮಿ ಕೋಶದಿಂದ ಪಡೆದ ಮಾಹಿತಿಗೆ ಪರಿಶೀಲನೆಗೆಂದು ನೀಡಿದ ಸಂಖ್ಯೆ | ಹೊಸ ನಮೂದು | ಪರಿಶೀಲಿಸುವ ದಾಖಲಾತಿಗೆ ಗುರುತಿಗಾಗಿ ನೀಡಿರುವುದು |

| | | | | |
|---|---|---|---|---|
| E | hobli_name | ಹೋಬಳಿ ಹೆಸರು | ಭೂಮಿ ಉಸ್ತುವಾರಿ ಕೋಶ | ಹೋಬಳಿ ಹೆಸರು ಗುರುತಿಸುವುದು |
| F | village_name | ಕಂದಾಯ ಗ್ರಾಮದ ಹೆಸರು | ಭೂಮಿ ಉಸ್ತುವಾರಿ ಕೋಶ | ಕಂದಾಯ ಗ್ರಾಮ ಗುರುತಿಸುವುದು |
| G | reg_order_no | ತಂತ್ರಾಂಶದಲ್ಲಿ ಅಳವಡಿಸಿರುವಂತೆ ಕಡತ ಸಂಖ್ಯೆ | ಭೂಮಿ ಉಸ್ತುವಾರಿ ಕೋಶ | ಮಾಹಿತಿ ಕಲೆಹಾಕಲು ಬಳಸುವ ಅರ್ಜಿದಾರರ ಕಡತ ಸಂಖ್ಯೆ |
| H | Form Type | 50,53,57, Other | ಕಡತ ಸಂಖ್ಯೆಯಿಂದ ಪಡೆದಿರುವ ಮಾಹಿತಿ | ಅರ್ಜಿ ನಮೂನೆಯನ್ನು ಗುರುತಿಸಲು |
| I | mr_no | ಮಂಜೂರು ಪಹಣಿ ನಮೂದಿಸಿದ ಮ್ಯುಟೇಶನ್ ಸಂಖ್ಯೆ | ಭೂಮಿ ಉಸ್ತುವಾರಿ ಕೋಶ | ಮಂಜೂರು ಪಹಣಿ ನಮೂದಿಸಿದ ಮ್ಯುಟೇಶನ್ ಸಂಖ್ಯೆ |
| J | dt_appr_sir | ಮ್ಯುಟೇಶನ್ ಅಂಗೀಕರಿಸಿದ ದಿನಾಂಕ | ಭೂಮಿ ಉಸ್ತುವಾರಿ ಕೋಶ | ಮ್ಯುಟೇಶನ್ ಅಂಗೀಕರಿಸಿದ / ಪಹಣಿ ನಮೂದಾದ ದಿನಾಂಕ ಗುರುತಿಸಲು |
| K | New Owner | ಫಲಾನುಭವಿಯ ಹೆಸರು | ಭೂಮಿ ಉಸ್ತುವಾರಿ ಕೋಶ | ಮಂಜೂರಾತಿ ಪಡೆದ ಫಲಾನುಭವಿಯನ್ನು ಗುರುತಿಸುವುದು |
| L | Relative Name | ಫಲಾನುಭವಿಯ ತಂದೆ / ಗಂಡನ ಹೆಸರು | ಭೂಮಿ ಉಸ್ತುವಾರಿ ಕೋಶ | ಮಂಜೂರಾತಿ ಪಡೆದ ಫಲಾನುಭವಿಯನ್ನು ಗುರುತಿಸುವುದು |
| M | new_acre | ಮಂಜೂರಾತಿ ವಿಸ್ತೀರ್ಣ (ಎಕರೆಗಳು) | ಭೂಮಿ ಉಸ್ತುವಾರಿ ಕೋಶ | ಮಂಜೂರು ಮಾಡಿದ ಒಟ್ಟು ವಿಸ್ತೀರ್ಣ ಗುರುತಿಸುವುದು |
| N | new_gunta | ಮಂಜೂರಾತಿ ವಿಸ್ತೀರ್ಣ (ಗುಂಟೆಗಳು) | ಭೂಮಿ ಉಸ್ತುವಾರಿ ಕೋಶ | ಮಂಜೂರು ಮಾಡಿದ ಒಟ್ಟು ವಿಸ್ತೀರ್ಣ ಗುರುತಿಸುವುದು |
| O | survey_no | ಭೂಮಿ ಕೋಶದಿಂದ ಪಡೆದ ಮಾಹಿತಿ | ಭೂಮಿ ಉಸ್ತುವಾರಿ ಕೋಶ | ಮಂಜೂರಾದ ಸರ್ವೆ ನಂಬರು ಗುರುತಿಸುವುದು |
| P | Surnoc | ಭೂಮಿ ಕೋಶದಿಂದ ಪಡೆದ ಮಾಹಿತಿ | ಭೂಮಿ ಉಸ್ತುವಾರಿ ಕೋಶ | ಮಂಜೂರಾದ ಸರ್ವೆ ನಂಬರು ಗುರುತಿಸುವುದು |
| Q | hissa_no | ಭೂಮಿ ಕೋಶದಿಂದ ಪಡೆದ ಮಾಹಿತಿ | ಭೂಮಿ ಉಸ್ತುವಾರಿ ಕೋಶ | ಮಂಜೂರಾದ ಸರ್ವೆ ನಂಬರು ಗುರುತಿಸುವುದು |
| R | ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರು | ಇಲ್ಲ | ಅರ್ಜಿ ವಹಿ | ಅರ್ಜಿ ವಹಿ ಮತ್ತು ಮಂಜೂರಾತಿದಾರರ ಹೆಸರು ತಾಳೆ ಇರುವ ಬಗ್ಗೆ ಗುರುತಿಸಲು |
| S | ಷರಾ | ಗ್ರಾಮ ಬದಲಾಗಿದೆ / ಸರ್ವೆ ನಂಬರು ಬದಲಾಗಿದೆ / | ಅರ್ಜಿ ವಹಿ | ಅರ್ಜಿ ವಹಿಯನ್ನು ಪರಿಶೀಲಿಸಿ ಅನರ್ಹತೆಯನ್ನು ಕಂಡುಹಿಡಿಯುವುದು |

| | | | | |
|---|---|---|---|---|
| | | ಈಗಾಗಲೇ ವಜಾಗೊಂಡಿರುತ್ತದೆ / ಈಗಾಗಲೇ ಮಂಜೂರಾಗಿರುತ್ತದೆ / ವಹಿಯಲ್ಲಿ ತಿದ್ದುಪಡಿ ಮಾಡಲಾಗಿದೆ | | |
| T | ಅರ್ಜಿ ಮತ್ತು ಮಂಜೂರಾತಿ ಹೆಸರು ತಾಳೆ | ಇದೆ / ಇಲ್ಲ / ಶಿಥಿಲಗೊಂಡಿದೆ | ಹೊಸ ನಮೂದು | ಅರ್ಜಿ ವಹಿ ಮತ್ತು ಮಂಜೂರಾತಿ ಹೆಸರು ಪರಿಶೀಲಿಸಿ ತಾಳೆ ಇರುವ ಬಗ್ಗೆ ನಮೂದಿಸುವುದು |
| U | ಪಹಣಿ ಪತ್ರಿಕೆ ಕ್ಷೇತ್ರ | | ತಹಶೀಲ್ದಾರರಿಂದ ಪಡೆದ ಮಾಹಿತಿ | ಪಹಣಿ ಮತ್ತು ಆಕಾರಬಂದ ವಿಸ್ತೀರ್ಣ ಪರಿಶೀಲಿಸುವುದು |
| V | ಆಕಾರಬಂದ್ ಕ್ಷೇತ್ರ | | ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪಡೆದ ಮಾಹಿತಿ | ಪಹಣಿ ಮತ್ತು ಆಕಾರಬಂದ ವಿಸ್ತೀರ್ಣ ಪರಿಶೀಲಿಸುವುದು |
| W | ಆಕಾರಬಂದು ಮತ್ತು ಪಹಣಿಗೆ ತಾಳೆ ಇರುವ ಬಗ್ಗೆ | | ಪಹಣಿ ಮತ್ತು ಆಕಾರಬಂದ ಮಾಹಿತಿ | ಆಕಾರಬಂದಿನಂತೆ ವಿಸ್ತೀರ್ಣ ಲಭ್ಯವಿಲ್ಲದೇ ಮಂಜೂರಾತಿ ನಡೆದಿದ್ದಲ್ಲಿ ಪರಿಶೀಲಿಸುವ ಬಗ್ಗೆ |
| X | ಸರ್ವೆ ದಾಖಲೆಯಂತೆ ಜಮೀನಿನ ತರಹೆ | | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ಮಾಹಿತಿ | ಮಂಜೂರಾತಿಗೆ ಅನರ್ಹ ಜಮೀನನ್ನು ಗುರುತಿಸಲು |
| Y | ಪೈಕಿ ಸರ್ವೆ ನಂಬರೇ? | ಹೌದು / ಇಲ್ಲ | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ಮಾಹಿತಿ | ವಿಸ್ತೀರ್ಣವೇ ಲಭ್ಯವಿಲ್ಲದೇ ಮಂಜೂರಾತಿಯಾಗಿದ್ದಲ್ಲಿ ಕಂಡು ಹಿಡಿಯಲು |
| Z | ನಿರ್ಬಂಧಿತ ದೂರದಲ್ಲಿ ಇರುವುದೇ? | ಹೌದು / ಇಲ್ಲ | ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ಮಾಹಿತಿ | ಕಲಂ 94 (ಎ) (4) ಉಲ್ಲಂಘನೆ ಕಂಡುಹಿಡಿಯಲು |
| AA | ಸಕ್ಷಮ ಪ್ರಾಧಿಕಾರದಿಂದ ಹಿಂದಿರುಗಿಸಿದ ದಿನಾಂಕ? | | ಕಡತದಲ್ಲಿ ಲಭ್ಯವಿರುವ ದಾಖಲಾತಿಯಂತೆ | ಅರ್ಜಿ ವಹಿಯಲ್ಲಿ ವಜಾ ಎಂದು ನಮೂದಾಗಿರುವ ಪ್ರಕರಣದಲ್ಲಿ ಮರಳಿ ಮಂಜೂರಾಗಿದ್ದಲ್ಲಿ ಪರಿಶೀಲಿಸಲು. ಮರಳಿಸಿದ ಅಧಿಕಾರಿಯನ್ನು ಗುರುತಿಸಲು |
| AB | ಅರ್ಹತಾ ದಿನಾಂಕಕ್ಕೆ ಮುಂಚೆ | ಹೌದು / ಇಲ್ಲ / ದಾಖಲೆ ಲಭ್ಯವಿಲ್ಲ | ಕಡತದಲ್ಲಿ ಲಭ್ಯವಿರುವ | ನಿಯಮ 108(ಎಫ್)(i) ಉಲ್ಲಂಘನೆ ಕಂಡುಹಿಡಿಯಲು |

| | | | | |
|---|---|---|---|---|
| | ವಯಸ್ಕರಾಗಿರುವರೇ ? (18 ವರ್ಷ) | | ದಾಖಲಾತಿಯಂತೆ | |
| AC | ಪಹಣಿಯಂತೆ ಜಮೀನಿನ ತರಹೆ | | ಭೂಮಿ ಉಸ್ತುವಾರಿ ಕೋಶದ ಮಾಹಿತಿಯಂತೆ | ಮೋಜಿಣಿ ದಾಖಲೆಯೊಂದಿಗೆ ತಾಳೆ ಮಾಡಿ ಮಂಜೂರಾತಿಗೆ ಅನರ್ಹ ಜಮೀನಿನ ತರಹೆಯನ್ನು ಪರಿಶೀಲಿಸಲು |
| AD | ಅರಣ್ಯ ಜಮೀನು | Section 4 / Deemed Forest /As per revenue record / reserve forest / protected forest / village forest / state forest / ಇಲ್ಲ | ಅರಣ್ಯ ಇಲಾಖೆಯಿಂದ ಪಡೆದ ಮಾಹಿತಿಯಂತೆ | ಅರಣ್ಯ ಭೂಮಿಯಲ್ಲಿ ನೀಡಿದ / ಅರಣ್ಯ ಅಭಿಪ್ರಾಯವಿಲ್ಲದೇ ನೀಡಿದ ಮಂಜೂರಾತಿಯನ್ನು ಕಂಡುಹಿಡಿಯಲು |
| AE | ಪೂರ್ಣ /ಭಾಗಶ: ಅರಣ್ಯ | ಪೂರ್ಣ / ಭಾಗಶ: / ಜಾಸ್ತಿ / ಇಲ್ಲ | ಅರಣ್ಯ ಇಲಾಖೆಯ ವಿಸ್ತೀರ್ಣವನ್ನು ಆಕಾರಬಂದಿನ ವಿಸ್ತೀರ್ಣಕ್ಕೆ ತಾಳೆ ಮಾಡಿ | ಸರ್ವೆ ನಂಬರಿನಲ್ಲಿ ಅರಣ್ಯ ವಿಸ್ತೀರ್ಣ ಕಂಡುಹಿಡಿಯಲು |
| AF | ಸರ್ಕಾರಿ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನೇ? | ಹೌದು / ಇಲ್ಲ | ಪಹಣಿಯ ನಮೂದಿನಂತೆ | ನಿಯಮ 108(ಐ) ನಂತೆ ಅನರ್ಹ ಪ್ರಕರಣ ಕಂಡುಹಿಡಿಯಲು |
| AG | ಅಮೃತ ಮಹಲ್ ಕಾವಲು ಪ್ರದೇಶವೇ? | ಹೌದು / ಇಲ್ಲ | ಪಶುಸಂಗೋಪನೆ ಇಲಾಖೆಯ ಮಾಹಿತಿಯಂತೆ | ನಿಯಮ 108(ಐ) ನಂತೆ ಅನರ್ಹ ಪ್ರಕರಣ ಕಂಡುಹಿಡಿಯಲು |
| AH | ಕುಟುಂಬದ ವರ್ಗದವರು ಹೊಂದಿರುವ ಒಟ್ಟು ಕ್ಷೇತ್ರ | | ಗ್ರಾಮ ಲೆಕ್ಕಿಗರು ನೀಡಿದ ವರದಿಯಂತೆ (ಕಡತ) | ಕಲಂ 94(ಎ) (4) ಉಲ್ಲಂಘನೆ ಪರಿಶೀಲಿಸಲು |
| AI | ಅರ್ಜಿದಾರರ ಜಾತಿ | ಪ.ಜಾ / ಪ.ಪಂ / ಇತರೇ / ದಾಖಲೆ ಲಭ್ಯವಿಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಜಿ), 108(ಎಚ್) ಉಲ್ಲಂಘನೆ ಪ್ರಕರಣ ಪತ್ತೆಹಚ್ಚಲು |
| AJ | ಅರ್ಹತಾ ದಿನಾಂಕದಂತೆ ಸಾಗುವಳಿ | ಇದೆ / ಇಲ್ಲ / ನಮೂದಿಸಿಲ್ಲ | ಗ್ರಾಮ ಆಡಳಿತಾಧಿಕಾರಿ ವರದಿಯಂತೆ | ನಿಯಮ 108(ಎಫ್) (v), (vi) ಉಲ್ಲಂಘನೆ ಕಂಡುಹಿಡಿಯಲು |
| AK | ಗ್ರಾಮ | ಸಕಾರಾತ್ಮಕ / | ಕಡತದಲ್ಲಿರುವ | ಅನರ್ಹ ಪ್ರಕರಣದಲ್ಲಿ ತಪ್ಪಸಗಿದ |

| | | | | |
|---|---|---|---|---|
| | ಆಡಳಿತಾಧಿಕಾರಿ ವರದಿ | ನಕಾರಾತ್ಮಕ / ಲಭ್ಯವಿಲ್ಲ | ವರದಿಯಂತೆ | ಅಧಿಕಾಗಳನ್ನು ಕಂಡುಹಿಡಿಯಲು |
| AL | ಗ್ರಾಮ ಆಡಳಿತಾಧಿಕಾರಿಯ ಹೆಸರು | | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AM | ರಾಜಸ್ವ ನಿರೀಕ್ಷಕರ ವರದಿ | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AN | ರಾಜಸ್ವ ನಿರೀಕ್ಷಕರ ಹೆಸರು | | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AO | ನಕ್ಷೆ ತಯಾರಿಸಿದ ಭೂಮಾಪಕರು | ತಾಲ್ಲೂಕಿನ ಭೂಮಾಪಕರ ಹೆಸರು | ಕಡತದಲ್ಲಿರುವ ದಾಖಲಾತಿಯಂತ | ನಿರ್ಬಂಧಿತ ದೂರ ಮತ್ತು ಅನರ್ಹ ಭೂಮಿ ತರಹೆಯ ಪ್ರಕರಣದಲ್ಲಿ ನಕ್ಷೆ ನೀಡಿದ ಭೂಮಾಪಕರನ್ನು ಗುರುತಿಸಲು |
| AP | ನಕ್ಷೆಯಂತೆ ವಿಸ್ತೀರ್ಣ | | ಕಡತದಲ್ಲಿರುವ ದಾಖಲಾತಿಯಂತ | ಮಂಜೂರಾತಿ ವಿಸ್ತೀರ್ಣ, ಸಮಿತಿ ಶಿಫಾರಸು ಮತ್ತು ಹಕ್ಕುಪತ್ರ ವಿಸ್ತೀರ್ಣ ತಾಳೆ ಮಾಡಲು |
| AQ | ವಿಷಯ ನಿರ್ವಾಹಕರ ಟಿಪ್ಪಣಿ (ಸಮಿತಿಗೆ) | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AR | ವಿಷಯ ನಿರ್ವಾಹಕರ ಹೆಸರು | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AS | ಶಿರಸ್ತೇದಾರರ ಟಿಪ್ಪಣಿ (ಸಮಿತಿಗೆ) | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AT | ಶಿರಸ್ತೇದಾರರ ಹೆಸರು | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AU | ತಹಶೀಲ್ದಾರರ ಟಿಪ್ಪಣಿ (ಸಮಿತಿಗೆ) | ಸಕಾರಾತ್ಮಕ / ನಕಾರಾತ್ಮಕ / ಲಭ್ಯವಿಲ್ಲ | ಕಡತದಲ್ಲಿರುವ ಟಿಪ್ಪಣಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |
| AV | ಸಮಿತಿಯ ದಿನಾಂಕ | | ಕಡತದಲ್ಲಿ ಲಭ್ಯವಿರುವ ದಾಖಲೆಯಂತೆ | ಮಂಜೂರಾತಿಗೆ ಶಿಫಾರಸು ಮಾಡಿದ ತಹಶೀಲ್ದಾರರ, ಸಮಿತಿ ಸದಸ್ಯರ ಮತ್ತು ಅಧ್ಯಕ್ಷರ ಮಾಹಿತಿ ಪಡೆಯಲು |
| AW | ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾಗಳನ್ನು ಕಂಡುಹಿಡಿಯಲು |

| | | | | |
|---|---|---|---|---|
| | (ಹಕ್ಕುಪತ್ರಕ್ಕೆ) | | | |
| AX | ಟಿಪ್ಪಣಿ ಮಂಡಿಸಿದ ಶಿರಸ್ತೇದಾರರು (ಹಕ್ಕುಪತ್ರಕ್ಕೆ) | ಎಲ್ಲ ಸಿಬ್ಬಂದಿಯ drop down | ತಹಶೀಲ್ದಾರರು ನೀಡಿದ ವರದಿಯಂತೆ | ಅನರ್ಹ ಪ್ರಕರಣದಲ್ಲಿ ತಪ್ಪೆಸಗಿದ ಅಧಿಕಾರಿಗಳನ್ನು ಕಂಡುಹಿಡಿಯಲು |
| AY | ನಡವಳಿ ಪುಸ್ತಕದಲ್ಲಿ ನಮೂದು | ಇದೆ / ಇಲ್ಲ / ಕ್ರಮಬದ್ಧವಾಗಿಲ್ಲ | ನಡವಳಿ ಪುಸ್ತಕ ಪರಿಶೀಲಿಸಿ | ನಿಯಮ 108(ಡಿ) ಉಲ್ಲಂಘನೆ ಮತ್ತು ಕಲಂ 192 (ಎ) (3) ಪ್ರಕರಣ ಕಂಡುಹಿಡಿಯಲು |
| AZ | ಕಾರಣಗಳು | ಸಮಿತಿಯಲ್ಲಿ ವಜಾ ಆಗಿದೆ / ಶಿಫಾರಸಿಗಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಹಕ್ಕುಪತ್ರ / ಹೆಸರನ್ನು ಅನಧಿಕೃತವಾಗಿ ಸೇರಿಸಲಾಗಿದೆ | ನಡವಳಿ ಪುಸ್ತಕ ಪರಿಶೀಲಿಸಿ | ನಿಯಮ 108(ಡಿ) ಉಲ್ಲಂಘನೆ ಮತ್ತು ಕಲಂ 192 (ಎ) (3) ಪ್ರಕರಣ ಕಂಡುಹಿಡಿಯಲು |
| BA | ತಿಳುವಳಿಕೆ ಪತ್ರ | ಇದೆ /ಇಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಡಿ)(1) ಉಲ್ಲಂಘನೆ ಕಂಡುಹಿಡಿಯಲು |
| BB | ಹಣಸಂದಾಯ ರಸೀದಿ ಲಭ್ಯವಿದೆಯೇ? | ಇದೆ / ಇಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ನಿಯಮ 108(ಜಿ). 108(ಎಫ್) ಉಲ್ಲಂಘನೆ ಪ್ರಕರಣ ಕಂಡುಹಿಡಿಯಲು |
| BC | ಸಾಗುವಳಿ ಚೀಟಿ ಕ್ರಮಬದ್ಧವಾಗಿದೆಯೇ? | ಇದೆ / ಇಲ್ಲ / ಲಭ್ಯವಿಲ್ಲ | ಕಡತದಲ್ಲಿರುವ ದಾಖಲಾತಿಯಂತೆ | ಕಾರ್ಯವೈಫಲ್ಯ ಪ್ರಕರಣದ ಮಾಹಿತಿ ಪಡೆಯಲು |
| BD | ಸಾಗುವಳಿ ಚೀಟಿಯಂತೆ ವಿಸ್ತೀರ್ಣ | | ಸಾಗುವಳಿ ಚೀಟಿಯಲ್ಲಿ ನಮೂದಿಸಿದಂತೆ | ಸಮಿತಿ ಶಿಫಾರಸಿಗೆ ತಾಳೆ ಮಾಡಲು |
| BE | ಸಾಗುವಳಿ ಚೀಟಿ ದಿನಾಂಕ | | ಕಡತದಲ್ಲಿ ಲಭ್ಯವಿರುವ ದಾಖಲೆಯಂತೆ | ಮಂಜೂರಾತಿಗೆ ಶಿಫಾರಸು ಮಾಡಿದ ತಹಶೀಲ್ದಾರರ, ಸಮಿತಿ ಸದಸ್ಯರ ಮತ್ತು ಅಧ್ಯಕ್ಷರ ಮಾಹಿತಿ ಪಡೆಯಲು |
| BF | ಕಲಂ 11 ರ ಶರಾ | | ಭೂಮಿ ಉಸ್ತುವಾರಿ ಕೋಶದಿಂದ ನೀಡಿರುವ ಮಾಹಿತಿಯಂತೆ | ನಿಯಮ 108 (ಜೆ)(i) ಉಲ್ಲಂಘನೆ ಪರಿಶೀಲಿಸಲು |
| BG | ಕಲಂ 11 ರಲ್ಲಿ ಶರತ್ತು ನಮೂದಾಗಿದೆಯೇ? | ಹೌದು / ಇಲ್ಲ | ಕಲಂ AU ನಮೂದಿನಂತೆ | ನಿಯಮ 108 (ಜೆ)(i) ಉಲ್ಲಂಘನೆ ಪರಿಶೀಲಿಸಲು |
| BH | ಭೂಮಿ ತಂತ್ರಾಂಶದಲ್ಲಿ | ಹೌದು / ಇಲ್ಲ / ಲಭ್ಯವಿಲ್ಲ | ಭೂಮಿ ತಂತ್ರಾಂಶದಿಂದ ಪರಿಶೀಲಿಸಿ | ಕಾರ್ಯವಿಧಾನ ವೈಫಲ್ಯ ಪ್ರಕರಣ ಪರಿಶೀಲಿಸಲು |

| | | | | |
|---|---|---|---|---|
| | ಆಳವಡಿಸಿರುವ ಪ್ರತಿಯು ಕ್ರಮಬದ್ಧವಾಗಿದೆಯೇ? | | ತಹಶೀಲ್ದಾರರು ಒದಗಿಸಿದಂತೆ | |
| BI | ಮಂಜೂರಾತಿಗೆ ಅರ್ಹವಿದೆಯೇ? | ಅರ್ಹ / ಅನರ್ಹ / ಸಂಶಯಾಸ್ಪದ / ಕಾರ್ಯವಿಧಾನ ವೈಫಲ್ಯ | ಎಲ್ಲ ಅನರ್ಹತೆಗಳನ್ನು ಪರಿಶೀಲಿಸಿ | ಅನರ್ಹ ಪ್ರಕರಣಗಳನ್ನು ಕಂಡುಹಿಡಿಯಲು |
| BJ | ಕಾರಣಗಳು 1 | ಚೆಕ್ ಲಿಷ್ಟಿನಲ್ಲಿ ನಮೂದಿಸಿದ ಅನರ್ಹತೆಗಳು | ಪ್ರಕರಣದಲ್ಲಿ ಕಂಡುಬಂದ ಎಲ್ಲ ನ್ಯೂನತೆಗಳನ್ನು ನಮೂದಿಸಲು | MailMerge ಮಾಡಿ ಎಲ್ಲ ನ್ಯೂನತೆಗಳನ್ನು ಪಟ್ಟಿಮಾಡಿ ಪರಿಶೀಲಿಸಿದ ಅಧಿಕಾರಿಯ ಸಹಿಯೊಂದಿಗೆ ಪ್ರತಿ ಕಡತದಲ್ಲಿ ಅಳವಡಿಸಲು |
| BK | ಕಾರಣಗಳು 2 | | | |
| BL | ಕಾರಣಗಳು 3 | | | |
| BM | ಕಾರಣಗಳು 4 | | | |
| BN | ಕಾರಣಗಳು 5 | | | |
| BO | ಕಾರಣಗಳು 6 | | | |
| BP | ಕಾರಣಗಳು 7 | | | |
| BQ | ಕಾರಣಗಳು 8 | | | |
| BR | ಕಾರಣಗಳು 9 | | | |
| BS | ಇತರೇ ಕಾರಣಗಳು | | ಪರಿಶೀಲಿಸಿದ ಅಧಿಕಾರಿಯ ಇತರೇ ಟಿಪ್ಪಣಿ ನಮೂದಿಸಲು | |
| BT | **DEO Login** | | ಭೂಮಿ ಉಸ್ತುವಾರಿ ಕೋಶದಿಂದ ಪಡೆದ ಮಾಹಿತಿಯಂತೆ | ಭೂಮಿ ತಂತ್ರಾಂಶದಲ್ಲಿ ಅಳವಡಿಸಿರುವ ದಾಖಲೆ / ಕಾರ್ಯವಿಧಾನ ತಪ್ಪಾಗಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಲು |
| BU | DEO Date | | | |
| BV | Tahsildar Login | | | |
| BW | Tahsildar Date | | | |
| BX | Upload Login | | | |
| BY | Upload Date | | | |
| BZ | RI login | | | |
| CA | RI Approval date | | | |
| CB | DEO Name | BT ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CC | DEO Upload Name | BX ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CD | RI Name | BZ ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CE | Tah Name | BV ಹೆಸರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CF | Tahsildar – | ಸಮಿತಿಗೆ ಮಂಡಿಸಿದ | ತಹಶೀಲ್ದಾರರಿಂದ | ಅನರ್ಹ ಪ್ರಕರಣಗಳಲ್ಲಿ |

| | | | | |
|---|---|---|---|---|
| | Committee | ತಹಶೀಲ್ದಾರರು | ಪಡೆದ ಮಾಹಿತಿ | ಸಮಿತಿಗೆ ಮಂಡಿಸಿದ |
| CG | Tahsildar - Saguvali Chit | ಸಾಗುವಳಿ ಚೀಟಿ ನೀಡಿದ ತಹಶೀಲ್ದಾರರು | ತಹಶೀಲ್ದಾರರಿಂದ ಪಡೆದ ಮಾಹಿತಿ | ತಹಶೀಲ್ದಾರರ ಮತ್ತು ಸಾಗುವಳಿ ಚೀಟಿ ನೀಡಿದ ತಹಶೀಲ್ದಾರರನ್ನು ಕಂಡುಹಿಡಿಯಲು |
| CH | Committee - President | ಅನುಮೋದಿಸಿದ ಸಮಿತಿಯ ಅಧ್ಯಕ್ಷರು | ತಹಶೀಲ್ದಾರರಿಂದ ಪಡೆದ ಮಾಹಿತಿ | ಅನರ್ಹ ಅರ್ಜಿಗಳನ್ನು ಅನುಮೋದಿಸಿದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಕಂಡುಹಿಡಿಯಲು |
| CI | Committee-Member 1 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| C | Committee Member 2 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |
| CK | Committee Member 3 | ಅನುಮೋದಿಸಿದ ಸಮಿತಿಯ ಸದಸ್ಯರು | ತಹಶೀಲ್ದಾರರಿಂದ ಪಡೆದ ಮಾಹಿತಿ | |

ತಾಲ್ಲೂಕಿನಿಂದ ನಿಯೋಜಿತ ಸಿಬ್ಬಂದಿಯಿಂದ ಕಡತ / ದಾಖಲೆಗಳನ್ನು ಪರಿಶೀಲನೆಗೆ ಪಡೆದು ಪರಿಶೀಲಿಸಿದ ನಂತರ ಕಡತಗಳನ್ನು ನಿಯೋಜಿತ ಸಿಬ್ಬಂದಿಯ ವಶಕ್ಕೆ ಅದೇ ದಿನ ಹಸ್ತಾಂತರಿಸಲಾಯಿತು.

ತಾಲ್ಲೂಕು ಕಛೇರಿಯಿಂದ ಕಡತವು ಸ್ವೀಕೃತಗೊಂಡಾಗ ಅವುಗಳಿಗೆ ಈ ಕೆಳಗಿನ Sticker ಅಂಟಿಸಿ ತಂತ್ರಾಂಶದಲ್ಲಿ ಕಡತ ಸ್ವೀಕರಿಸಿದ ಬಗ್ಗೆ ನಮೂದಿಸುವ ಕಾರ್ಯವನ್ನು ನಿಯೋಜಿತ ಅಧಿಕಾರಿಗಳ ಪೈಕಿ 2 ಅಧಿಕಾರಿಗಳು ಕೈಗೊಂಡರು.

| MR No | MR Date | Verification File No | Verified by | Sign | DEO Name | DEO Sign |
|---|---|---|---|---|---|---|
| | | | | | | |

ಉಳಿದ ಎಲ್ಲ ಅಧಿಕಾರಿಗಳು ಕಡತ ಪರಿಶೀಲನೆಯ ಕೆಲಸವನ್ನು ಕೈಗೊಂಡರು. ಕಡತ ಪರಿಶೀಲನೆಯ ನಂತರ ಜಿಲ್ಲಾಡಳಿತದಿಂದ ನಿಯೋಜಿತ DEO ರವರಿಂದ ಮಾಹಿತಿಯನ್ನು ಗಣಕೀಕೃತಗೊಳಿಸಲಾಯಿತು. ಕಡತ ಪರಿಶೀಲನೆಯ ಕೆಲಸ ಪೂರ್ಣಗೊಂಡ ನಂತರ ಸಮಿತಿ ನಡವಳಿ ಪುಸ್ತಕದ ಪರಿಶೀಲನೆ ಮತ್ತು ಅರ್ಜಿವಹಿ ಪರಿಶೀಲನೆಯ ಕೆಲಸವನ್ನು ಅಧಿಕಾರಿಗಳು ಕೈಗೊಂಡರು. ಲಭ್ಯ ಕಡತ ಪರಿಶೀಲನೆ ಸಂಪೂರ್ಣವಾದನಂತರ **ಅಲಭ್ಯ ಕಡತಗಳ ಪಟ್ಟಿಯನ್ನು ವಿಷಯ ನಿರ್ವಾಹಕರಿಗೆ ನೀಡಿ ಕಡತವನ್ನು ಶೋಧಿಸಿ ನೀಡಲು ಅವಕಾಶವನ್ನು ನೀಡಲಾಯಿತು**.

ತದನಂತರ ಅರ್ಜಿ ವಹಿ ಮತ್ತು ಸಮಿತಿ ನಡವಳಿ ಯನ್ನು ಪರಿಶೀಲಿಸಿ Google Spreadsheet ನಲ್ಲಿ ಮಾಹಿತಿಯನ್ನು ನಮೂದಿಸಲಾಯಿತು. **ಪರಿಶೀಲನೆಯ ನಂತರ ನಮೂದು ಕಂಡುಬರದ**

**ಪ್ರಕರಣದ ಮಾಹಿತಿಯನ್ನು ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ನೀಡಿ ಮರುಪರಿಶೀಲನೆಗೆ ಅವಕಾಶವನ್ನು ನೀಡಲಾಯಿತು.**

ಈ ಕೆಳಗಿನ ಮಾಹಿತಿಯನ್ನು ನಮೂದಿಸಿದ ಅಧಿಕಾರಿಗಳಿಂದ/ಇಲಾಖೆಯಿಂದ ಪಡೆದು ಮೇಲಿನ ನಮೂನೆಯಲ್ಲಿ (Googe Spreadsheet) ಕ್ರೋಢೀಕರಿಸಲಾಯಿತು. **(Table 7)**

| **ಅಗತ್ಯ ಮಾಹಿತಿ** | **ಒದಗಿಸಿದ ಇಲಾಖೆ/ಅಧಿಕಾರಿ** |
|---|---|
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳಿಗೆ ಸಂಬಂಧಿಸಿದಂತೆ (ಪಟ್ಟಿಯನ್ನು ಮಿಂಚಂಚೆಗೆ ಲಗತ್ತಿಸಿದೆ) ಆಕಾರಬಂದು ವಿಸ್ತೀರ್ಣ, ಜಮೀನಿನ ತರಹ (ಕದರ್ಾ), ಪೈಕಿ ಪಹಣಿಯೆ?, ಕರ್ನಾಟಕ ಭೂಕಂದಾಯ ಅಧಿನಿಯಮ ಸೆಕ್ಷನ್ 94(A)(4) ನಂತೆ ಪ್ರತಿಬಂಧಿತ ಅಂತರದೊಳಗೆ ಇರುವುದೆ? ಎಂಬ ಮಾಹಿತಿ | ಮೋಜಿಣಿ ಇಲಾಖೆ |
| ತನಿಖೆಗೆ ಒಳಪಟ್ಟಿರುವ ಸರ್ವೆನಂಬರುಗಳು ಯಾವುದೇ ತರಹದ ಅರಣ್ಯದ ವ್ಯಾಪ್ತಿಗೆ ಬರುವುದೇ ಎಂಬ ಮಾಹಿತಿ | ಅರಣ್ಯ ಇಲಾಖೆ |
| ಅಮೃತ ಮಹಲ್ ಕಾವಲ್ ಒಳಗೊಂಡಂತೆ ಇಲಾಖೆಗೆ ಮೀಸಲಿಟ್ಟಿರುವ ಭೂಮಿಯ ಮಾಹಿತಿ | ಪಶುಸಂಗೋಪನ ಇಲಾಖೆ |
| 1. ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಪೈಕಿ ಪಹಣಿಗಳ ಮಾಹಿತಿಯನ್ನು ಪಡೆದು, ಒಗ್ಗೂಡಿಸಿ ಪಹಣಿ ಕಲಂ 3 ರ ಮಾಹಿತಿಯನ್ನು ಒದಗಿಸುವುದು.<br>2. ಸಂಬಂಧಿಸಿದ ಮ್ಯುಟೇಶನ್ನಳಿಗೆ ಭೂಮಿ ತಂತ್ರಾಂಶದಲ್ಲಿ ಲಗತ್ತಿಸಿರುವ ದಾಖಲೆಯ ಪ್ರತಿಯನ್ನು ಮುದ್ರಿಸಿ ಪರಿಶೀಲನೆ ಕಡತಸಂಖ್ಯೆ ನಮೂದಿಸಿ ನೀಡುವುದು<br>3. ಪ್ರತಿ ಕಡತದಲ್ಲಿ ಕಾರ್ಯನಿರ್ವಹಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಮಾಹಿತಿ<br>4. 2008 ರಿಂದ 2023 ರ ತನಕ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರರ ಮತ್ತು ನಿಯೋಜಿತ ಸಕ್ರಮೀಕರಣ ಸಮಿತಿಯ ಮಾಹಿತಿ | ತಹಶೀಲ್ದಾರರು |

ವರದಿಯನ್ನು ಸಲ್ಲಿಸಲು ಮಂಜೂರಾತಿ ಕಡತ ತಯಾರಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು, ಶಿರಸ್ತೇದಾರರು, ತಹಶೀಲ್ದಾರರ ಮಾಹಿತಿ ಅಗತ್ಯ ಇರುತ್ತದೆ ಕಡತಗಳನ್ನು ಪರಿಶೀಲಿಸದಾಗ ಅನೇಕ ಕಡತಗಳಲ್ಲಿ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕ ವರದಿ, ಸಮಿತಿಗೆ ಮಂಡಿಸಲು ಶಿಫಾರಸು ಮಾಡಿದ ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಹೆಸರು

ನಮೂದಿಸಿರುವುದಿಲ್ಲ ಮತ್ತು ವರದಿಯ / ಟಿಪ್ಪಣಿಯ ದಿನಾಂಕ ಸಹ ನಮೂದಾಗಿರುವುದಿಲ್ಲ. ಆದುದರಿಂದ ಅಧಿಕಾರಿಗಳ ಹೆಸರನ್ನು ಕಂಡುಹಿಡಿಯುವುದು ತಂಡಕ್ಕೆ ಅಸಾಧ್ಯವಾಗುತ್ತದೆ. **ಆದುದರಿಂದ ಪ್ರತಿ ಕಡತಕ್ಕೆ ಸಂಬಂಧಿಸಿದಂತೆ ಮಂಜೂರಾತಿಗೆ ಕಡತ ತಯಾರಿಸಿದ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ಸಮಿತಿಗೆ ಮಂಡಿಸಲು ಶಿಫಾರಸು ಮಾಡಿದ ವಿಷಯ ನಿರ್ವಾಹಕರು ಮತ್ತು ಶಿರಸ್ತೇದಾರರ ಹೆಸರನ್ನು ನಮೂದಿಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರರು ಧೃಢೀಕರಿಸಿ ಒದಗಿಸಲು ಸೂಚಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಲಾಯಿತು.**

ಅನರ್ಹತೆಗೆ ಸಂಬಂಧಿಸಿದಂತೆ ಈ ಕೆಳಗೆ ನಮೂದಿಸಿದ ಮಾನದಂಡದಂತೆ ತಪ್ಪೆಸಗಿದ ಅಧಿಕಾರಿ/ ಸಿಬ್ಬಂದಿ /ಸಮಿತಿ ಸದಸ್ಯರನ್ನು ಕಂಡುಹಿಡಿಯಲಾಯಿತು **(Table 8)**

| **ಅನರ್ಹತೆ** | **ತಪ್ಪೆಸಗಿದ ಸಿಬ್ಬಂದಿ / ಸಮಿತಿ** |
|---|---|
| ಅರ್ಜಿಯನ್ನು ಸಲ್ಲಿಸಿದ ದಾಖಲಾತಿ ಲಭ್ಯವಿಲ್ಲದ ಪ್ರಕರಣಗಳು (ಅರ್ಜಿ ವಹಿಯನ್ನು ಪರಿಶೀಲಿಸಲಾಯಿತು) | ಕಡತ ಲಭ್ಯವಿರುವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು ತಹಶೀಲ್ದಾರರು ಕಡತ ಲಭ್ಯವಿಲ್ಲದ ಪ್ರಕರಣದಲ್ಲಿ ವಿಷಯ ನಿರ್ವಾಹಕರು ಶಿರಸ್ತೇದಾರರು ಮತ್ತು ತಹಶೀಲ್ದಾರರು. ಸಮಿತಿಯ ಅನುಮೋದನೆ ಪಡೆದಿರುವ ಪ್ರಕರಣದಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು |
| ಅರ್ಹತಾ ದಿನಾಂಕದಂದು (ನಮೂನೆ 50 ಮತ್ತು 53 ರಲ್ಲಿ 01 ಎಪ್ರಿಲ್ 1989 (SC/ST), 01 ಎಪ್ರಿಲ್ 1987 (ಇತರೆ)) ಅರ್ಜಿದಾರರು 18 ವರ್ಷ ಪೂರ್ಣಸದ ಪ್ರಕರಣಗಳು. | |
| ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ ಪ್ರಕರಣಗಳು. | |
| ಅನಧಿಕೃತ ವಿಭಾಗಪತ್ರ ಲಗತ್ತಿಸಿ ಅರ್ಹತೆಗಿಂತ ಹೆಚ್ಚುವರಿ ಭೂಮಿ ಮಂಜೂರು ಮಾಡಿದ ಪ್ರಕರಣಗಳು. | |
| ಕ್ಷೇತ್ರ ವರದಿಯಂತೆ ಅರ್ಹತಾ ದಿನಾಂಕದಂದು ಉಳುಮೆಯನ್ನು ಮಾಡದೇ ಇರುವ ಪ್ರಕರಣಗಳು. | |
| ವಯಸ್ಸಿನ ಬಗ್ಗೆ ದಾಖಲೆ ಲಭ್ಯವಿಲ್ಲದ ಪ್ರಕರಣಗಳು | |
| **ಅರ್ಜಿಯನ್ನು ಸಲ್ಲಿಸಿದ ದಾಖಲಾತಿಯಲ್ಲಿ ವ್ಯತ್ಯಯಗಳು** | |
| ಹಳೆ ಮಂಜೂರಾತಿ (2010ಕ್ಕೂ ಮೊದಲು ಮಂಜೂರಾಗಿರುವಂತೆ ವಹಿಯಲ್ಲಿ ನಮೂದಿರುವುದು) | |
| ವಹಿಯಲ್ಲಿ ನಮೂದಿರುವಂತೆ ವಜಾಗೊಂಡಿರುವ ಪ್ರಕರಣಗಳು | |
| ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಸರ್ವೆ ನಂಬರು ಬದಲಾದ ಪ್ರಕರಣಗಳು | |
| ಮಂಜೂರಾತಿ ಮತ್ತು ಅರ್ಜಿ ವಹಿಯಲ್ಲಿನ ಗ್ರಾಮದ ಹೆಸರು ಬದಲಾದ ಪ್ರಕರಣಗಳು | |
| ಆಕಾರಬಂದ ವಿಸ್ತೀರ್ಣಕ್ಕೂ ಹೆಚ್ಚಿನ ವಿಸ್ತೀರ್ಣ | |

| | |
|---|---|
| ಪಹಣಿಯಲ್ಲಿರುವ ಪ್ರಕಣಗಳು | |
| ಪೈಕಿ ಪಹಣಿಗಲ್ಲಿ ಮಂಜೂರಾತಿ ನೀಡಿರುವ ಮಂಜೂರಾತಿಗಳು. | |
| ಅರ್ಜಿ ವಹಿ ಶಿಥಿಲವಾಗಿರುವ ಪ್ರಕರಣಗಳು | |
| ನಮೂನೆ 50/53 ರಲ್ಲಿ ಪೂರ್ವಾನುಮತಿ ಇಲ್ಲದೇ ಗೋಮಾಳ ಭೂಮಿಯನ್ನು ಮಂಜೂರು ಮಾಡಿದ ಪ್ರಕರಣಗಳು. | |
| **ಸಮಿತಿಯ ನಡವಳಿಗಳು ಕ್ರಮಬದ್ಧವಾಗಿರದ ಪ್ರಕರಣಗಳು** | ಕಡತ ಲಭ್ಯವಿರುವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು. ಮತ್ತು ತಹಶೀಲ್ದಾರರು ಕಡತ ಲಭ್ಯವಿಲ್ಲದ ಪ್ರಕರಣದಲ್ಲಿ ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು, ತಹಶೀಲ್ದಾರರು. |
| ಸಮಿತಿಯ ನಡವಳಿಯಲ್ಲಿ ತಿದ್ದುಪಡಿ ಮಾಡಿರುವ ಪ್ರಕರಣಗಳು. | |
| ಸಮಿತಿಯಲ್ಲಿ ನಿರ್ಧರಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಮಂಜೂರು ಮಾಡಿದ ಪ್ರಕರಣಗಳು | |
| ಭೂ ಸಕ್ರಮೀಕರಣ ಸಮಿತಿಯಲ್ಲಿ ವಜಾ ಆಗಿರುವ ಪ್ರಕರಣಗಳು | |
| ನಡವಳಿ ಪುಸ್ತಕದ ನಕಲು ಪ್ರತಿ ಮಾತ್ರ ಲಭ್ಯವಿರುವ ಪ್ರಕರಣಗಳು | |
| ಭೂ ಸಕ್ರಮೀಕರಣ ಸಮಿತಿಯಲ್ಲಿ ಮಂಡಿಸದೇ ಹಕ್ಕುಪತ್ರ ನೀಡಿದ ಪ್ರಕರಣಗಳು. | |
| ಕಡತ ಲಭ್ಯವಿಲ್ಲದೇ ಭೂಮಿ ತಂತ್ರಾಂಶದಲ್ಲಿ ಸಾಗುವಳಿ ಚೀಟಿ ಲಭ್ಯವಿರುವ ಪ್ರಕರಣಗಳು | ವಿಷಯ ನಿರ್ವಾಹಕರು. ಶಿರಸ್ತೇದಾರರು ಮತ್ತು ತಹಶೀಲ್ದಾರರು |
| ವರದಿಗಳು ಅಪೂರ್ಣವಾಗಿರುವ ಪ್ರಕರಣಗಳು | |
| ಸರ್ವೆ ನಕಾಶೆ ಲಭ್ಯವಿಲ್ಲದ ಪ್ರಕರಣಗಳು. | |
| ಹಣಸಂದಾಯ ರಸೀದಿ ಲಭ್ಯವಿಲ್ಲದ ಪ್ರಕರಣಗಳು. | |
| ಸಾರ್ವಜನಿಕ ಮಾಹಿತಿ (ಆಕ್ಷೇಪಣೆ ಕೋರುವ) ನಮೂನೆ ಲಭ್ಯವಿಲ್ಲದ ಪ್ರಕರಣಗಳು. | |
| ವಿಷಯ ನಿರ್ವಾಹಕರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | |
| ಶಿರಸ್ತೇದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು | |
| ತಹಶೀಲ್ದಾರರ ಟಿಪ್ಪಣಿ ಲಭ್ಯವಿಲ್ಲದ ಪ್ರಕಣಗಳು. | |
| ಒಂದೇ ಮಂಜೂರಾತಿಗೆ ಎರಡುಸಲ ಮ್ಯುಟೇಶನ್ ಮಾಡಿರುವ ಪ್ರಕರಣಗಳು. | |
| ಪಹಣಿಯಲ್ಲಿ ಪರಭಾರೆ ನಿಷೇಧ ನಮೂದಾಗದ ಅಥವಾ ತಪ್ಪಾಗಿ ನಮೂದಾದ ಪ್ರಕರಣಗಳು | ಭೂಮಿ ತಂತ್ರಾಂಶದಲ್ಲಿ ಇಂಡೀಕರಣ ಮಾಡಿದ ಭೂಮಿ |

| | |
|---|---|
| | ಆಪರೇಟರ್, ಅನುಮೋದನೆ ನೀಡಿದ ರಾಜಸ್ವ ನಿರೀಕ್ಷಕರು |
| ಟಿಪ್ಪಣಿ ಲಭ್ಯವಿಲ್ಲದ / ಅಪೂರ್ಣ ಟಿಪ್ಪಣಿ ಇರುವ ಪ್ರಕರಣಗಳು. | ಕಡತ ಲಭ್ಯವಿದ್ದಲ್ಲಿ ಸಕಾರಾತ್ಮಕ ವರದಿ ನೀಡಿರುವ ಗ್ರಾಮ ಆಡಳಿತಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಸಕಾರಾತ್ಮಕ ಟಿಪ್ಪಣಿ ಮಂಡಿಸಿದ ವಿಷಯ ನಿರ್ವಾಹಕರು, ಶಿರಸ್ತೇದಾರರು ಮತ್ತು ತಹಶೀಲ್ದಾರರು |
